ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

# ಶಿವಪುರ

ಪ್ರಧಾನ ಸಂಪಾದಕರು
**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು
**ಡಾ. ಎಸ್. ಜಿ. ರಾಮದಾಸ ರೆಡ್ಡಿ**

ಲೇಖಕರು
**ಡಾ. ಲಿಂಗರಾಜು**

**ಕರ್ನಾಟಕ ಸಾಹಿತ್ಯ ಅಕಾಡೆಮಿ**
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨
ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦
www.karnatakasahithyaacademy.org
ಇ–ಮೇಲ್: sahithya.academy@gmail.com

**SHIVAPURA:** An Introduction Book on Places in Karnataka that Played a Major Role in the Freedom Struggle, Written by Dr. Lingaraju, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಲಿಂಗರಾಜು

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೮೦


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



# ಶುಭ ಸಂದೇಶ

**‘ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ’**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಬ್ರಿಟಿಷ್ ಸಾಮ್ರಾಜ್ಯಶಾಹಿ ಭಾರತದ ಇತಿಹಾಸದಲ್ಲಿ ಮೈಸೂರು ಸಂಸ್ಥಾನಕ್ಕೆ ಒಂದು ವಿಶಿಷ್ಟ ಸ್ಥಾನವಿದೆ. ಭಾರತೀಯರು ನೇರವಾಗಿ ಬ್ರಿಟಿಷರ ಗುಲಾಮರಾಗಿದ್ದರೆ, ಮೈಸೂರು ಸಂಸ್ಥಾನದ ಜನತೆ ಎರಡು ರೀತಿಯಲ್ಲಿ ಗುಲಾಮರಾಗಿದ್ದರು. ಇಂತಹ ಗುಲಾಮಗಿರಿಯ ವ್ಯವಸ್ಥೆಯಿಂದ ಸ್ವತಂತ್ರ್ಯಗೊಳ್ಳಲು ಮೈಸೂರು ಸಂಸ್ಥಾನದ ಜನತೆ ತಮ್ಮದೇ ಆದ ರೀತಿಯಲ್ಲಿ ಬ್ರಿಟಿಷರ ವಿರುದ್ಧ ಮತ್ತು ಮೈಸೂರು ಸಂಸ್ಥಾನದ ರಾಜಪ್ರಭುತ್ವ ವ್ಯವಸ್ಥೆಯ ವಿರುದ್ಧ ಹೋರಾಡಿದರು. ಈ ಹಿನ್ನಲೆಯಲ್ಲಿ ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟ ಜರುಗಿತು. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಹೋರಾಟದಲ್ಲಿ ಜರುಗಿದ ಶಿವಪುರ ಧ್ವಜ ಸತ್ಯಾಗ್ರಹ ಚಿರಸ್ಮರಣೀಯವಾದುದ್ದು, ಆದ್ದರಿಂದ ಕರ್ನಾಟಕ ಮತ್ತು ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಭಾರತದಾದ್ಯಂತ ಹೋರಾಟದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟಕ್ಕೆ ಚಾಲನೆ ದೊರೆತಿದ್ದು ಮೊಟ್ಟ ಮೊದಲಿಗೆ ಮಂಡ್ಯ ಜಿಲ್ಲೆಯ, ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಜರುಗಿದ 'ಧ್ವಜ ಸತ್ಯಾಗ್ರಹ ಅಥವಾ ಕಾಂಗ್ರೆಸ್ ಅಧಿವೇಶನದಿಂದ. ಶಿವಪುರ ಕಾಂಗ್ರೆಸ್ ಅಧಿವೇಶನವನ್ನು ಬೇರೆ ಬೇರೆ ದೃಷ್ಟಿಕೋನಗಳಿಂದ ಅಧ್ಯಯನ ಮಾಡುವುದಕ್ಕೆ ಪ್ರಯತ್ನಿಸಲಾಗಿದೆ. ಶಿವಪುರ ಧ್ವಜ ಸತ್ಯಾಗ್ರಹವು ಸ್ಥಳಿಯವಾಗಿ ಮಂಡ್ಯ ಪ್ರದೇಶದಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಅನೇಕ ಮಹಾನೀಯರು ಭಾಗವಹಿಸುವುದಕ್ಕೆ ನಾಂದಿಯಾಡಿತು. ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಳ್ಳುವುದಕ್ಕೆ ನೆರವಾಯಿತು. ಗಾಂಧೀಜಿಯವರ ಅಹಿಂಸಾ ಮಾರ್ಗದಡಿಯಲ್ಲಿ ಶಿವಪುರ ಕಾಂಗ್ರೆಸ್ ಅಧಿವೇಶನವನು ಆಯೋಜಿಸಿ ಅದರ ಯಶಸ್ಸಿಗೆ ಶ್ರಮಿಸಿದ ನಾಯಕರು ರಾಜ್ಯಮಟ್ಟದಲ್ಲಿ ಮತ್ತು ರಾಷ್ಟ್ರಮಟ್ಟದಲ್ಲಿ ಅನೇಕ ರಾಷ್ಟ್ರನಾಯಕರಿಂದ ಮುಕ್ತ ಪ್ರಶಂಸೆಗೆ ಪಾತ್ರರಾದರು. ಹಲವು

ಮೂಲಗಳಿಂದ ಕಲೆಹಾಕಿದ ಮಾಹಿತಿಗಳ ಆಧಾರದಿಂದ ಐತಿಹಾಸಿಕ ಪ್ರಜ್ಞೆಗೆ ಧಕ್ಕೆಯಾಗದಂತೆ ನಿಷ್ಪಕ್ಷಪಾತವಾಗಿ ಈ ಲೇಖನವನ್ನು ರಚಿಸಲಾಗಿದೆ. ಅಲ್ಲದೆ ಪ್ರಸ್ತುತ ಕಾಲಘಟ್ಟದಲ್ಲಿ ರಾಷ್ಟ್ರದ ಸ್ವಾತಂತ್ರ್ಯ ಗಳಿಕೆಗಾಗಿ ಹೋರಾಡಿದ ಮಹಾನೀಯರನ್ನು ಸ್ಮರಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಯುವ ಸಮುದಾಯದಲ್ಲಿ, ವಿದ್ಯಾರ್ಥಿಗಳಲ್ಲಿ, ಜನಸಾಮಾನ್ಯರಲ್ಲಿ ರಾಷ್ಟ್ರೀಯತೆಯ ಮನೋಭಾವನೆಯನ್ನು, ಸಮರ್ಪಕವಾದ ಇತಿಹಾಸ ಪ್ರಜ್ಞೆಯನ್ನು ಮೂಡಿಸುವ ಮೂಲಕ ಜಾಗೃತ ಸಮಾಜವನ್ನು ಕಟ್ಟುವುದು ಅತ್ಯವಶ್ಯಕವಾಗಿದೆ.

'ಶಿವಪುರ ಧ್ವಜ ಸತ್ಯಾಗ್ರಹ ಅಥವಾ ಶಿವಪುರ ಕಾಂಗ್ರೆಸ್ ಅಧಿವೇಶನ (ರಾಷ್ಟ್ರಕೂಟ)' ಪುಸ್ತಕ ರಚನೆಯ ಸಂದರ್ಭದಲ್ಲಿ ನಾನು ಮಾಹಿತಿ ಸಂಗ್ರಹಕ್ಕಾಗಿ ಬಳಸಿಕೊಂಡಿರುವ ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಕರ್ನಾಟಕದಲ್ಲಿ ಸ್ವಾತಂತ್ರ್ಯ ಸಂಗ್ರಾಮ, ಶಿವಪುರ ಧ್ವಜ ಸತ್ಯಾಗ್ರಹ, ಮಂಡ್ಯ ಜಿಲ್ಲಾ ಗ್ಯಾಜಿಟಿಯರ್, ಹೆಚ್.ಕೆ.ವೀರಣ್ಣಗೌಡ ಒಂದು ಅಧ್ಯಯನ, ಮೊದಲಾದ ಕೃತಿಗಳ ಲೇಖಕರನ್ನು ನಾನು ವಿಶೇಷವಾಗಿ ಸ್ಮರಿಸಿಕೊಳ್ಳುತ್ತೇನೆ.

ಸ್ವಾತಂತ್ರ್ಯ ಅಮೃತ ಮಹೋತ್ಸವದ ಪ್ರಯುಕ್ತ ಕರ್ನಾಟಕ ಸಾಹಿತ್ಯ ಅಕಾಡೆಮಿ ತೆಗೆದುಕೊಂಡಿರುವ 'ಕರ್ನಾಟಕದಲ್ಲಿ ಸ್ವಾತಂತ್ರ್ಯ ಹೋರಾಟ ಸಾಹಿತ್ಯ ರಚನೆ'ಯ ೭೫ ಪುಸ್ತಕಗಳನ್ನು ಪ್ರಕಟಿಸುವ ಪ್ರಮುಖ ನಿರ್ಧಾರವನ್ನು ಶ್ಲಾಘನೀಯವಾದುದ್ದು. ಈ ಯೋಜನೆಯ ಅಡಿಯಲ್ಲಿ ನನಗೆ 'ಶಿವಪುರ ಎಂಬ ಸ್ಥಳಕ್ಕೆ ಸಂಬಂಧಿಸಿದಂತೆ ಒಂದು ಪುಟ್ಟ ಪುಸ್ತಕವನ್ನು ಬರೆದುಕೊಡುವಂತೆ ಕೋರಿದ್ದರಿಂದ ಈ ಪುಸ್ತಕ ರಚನೆಗೆ ಕಾರಣವಾಗಿದೆ.

ಕನ್ನಡದಲ್ಲಿ ಇಂಥದೊಂದು ಪುಸ್ತಕ ರಚನೆಗೆ ಅವಕಾಶ ಮಾಡಿಕೊಟ್ಟ ಜನಪ್ರಿಯ ಕನ್ನಡ ಮಾಲಿಕೆಯ ಸಂಪಾದಕರಾದ ಡಾ. ಎಸ್.ಜಿ.ರಾಮದಾಸರೆಡ್ಡಿ ಯವರಿಗೆ ಹಾಗೂ ಸಲಹಾ ಸಮಿತಿಯ ಸದಸ್ಯರಿಗೆ ಧನ್ಯವಾದಗಳು.

**– ಡಾ. ಲಿಂಗರಾಜು ತಂಡಸನಹಳ್ಳಿ**
ಇತಿಹಾಸ ಸಹ ಪ್ರಾಧ್ಯಾಪಕರು
ಸರ್ಕಾರಿ ಮಹಾವಿದ್ಯಾಲಯ (ಸ್ವಾಯತ್ತ), ಮಂಡ್ಯ.
Mob.N: 9844997417, Mail.ID: lingarajumdy@gmail.

## ಪರಿವಿಡಿ

ಶುಭ ಸಂದೇಶ ೩
ಶುಭ ಸಂದೇಶ ೫
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
**ಶಿವಪುರ ಧ್ವಜ ಸತ್ಯಾಗ್ರಹ** ೧೫
- ಅನುಬಂಧ
  ಛಾಯಾಚಿತ್ರಗಳು ೬೧
- ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೭೭

# ಶಿವಪುರ ಧ್ವಜ ಸತ್ಯಾಗ್ರಹ

(೧೯೩೮ ಏಪ್ರಿಲ್ ೧೧ ರಿಂದ ೧೩)

**ಪೀಠಿಕೆ:**

ಮಂಡ್ಯ ಜಿಲ್ಲೆಯ ಸ್ವಾತಂತ್ರ್ಯ ಹೋರಾಟವನ್ನು ಮೈಸೂರು ಜಿಲ್ಲೆಯ ಸ್ವಾತಂತ್ರ್ಯ ಹೋರಾಟದಲ್ಲಿ ಅಂತರ್ಗತವಾಗಿ ಅವಲೋಕಿಸಬೇಕಾಗುತ್ತದೆ. ಏಕೆಂದರೆ ಮಂಡ್ಯ ಜಿಲ್ಲೆ ಅಸ್ತಿತ್ವಕ್ಕೆ ಬರುವವರೆಗೂ (ಕ್ರಿ.ಶ.೧೯೩೯ ಜುಲೈ ಒಂದು) ಮೈಸೂರು ಜಿಲ್ಲೆಯ ಒಂದು ಭಾಗವಾಗಿದ್ದುದನ್ನು ಗಮನಿಸ ಬೇಕಾಗುತ್ತದೆ. ಮಂಡ್ಯ ಜಿಲ್ಲೆಯ ಗ್ರಾಮೀಣ ಭಾಗದ ಜನರು ಸಮರ್ಪಣಾ ಮನೋಭಾವದಿಂದ ಸ್ವಾತಂತ್ರ್ಯಹೋರಾಟದಲ್ಲಿ ಪಾಲ್ಗೊಂಡರು. ರಾಷ್ಟ್ರಮಟ್ಟದಲ್ಲಿ ಜರುಗುತ್ತಿದ್ದ ಸ್ವಾತಂತ್ರ್ಯ ಚಳವಳಿಯ ಹೋರಾಟದ ಘಟನೆಗಳು ಗ್ರಾಮೀಣ ಜನತೆಯ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತಿದ್ದವು ಮತ್ತು ಅದಕ್ಕೆ ಹೇಗೆ ಪ್ರತಿಕ್ರಿಯಿಸುವುದರ ಮೂಲಕ ಸ್ವಾತಂತ್ರ್ಯಹೋರಾಟದಲ್ಲಿ ಪಾಲ್ಗೊಳ್ಳುತ್ತಿದ್ದರು ಎಂಬುದನ್ನು ಪ್ರಾದೇಶಿಕವಾಗಿ ತಿಳಿದು ಕೊಳ್ಳ ಬೇಕಾದುದ್ದು ಪ್ರಸ್ತುತ ದಿನಗಳಲ್ಲಿ ಅತ್ಯಗತ್ಯವಾಗಿದೆ.

ಬ್ರಿಟಿಷರು ಭಾರತವನ್ನು ತಮ್ಮ ಒಡೆದು ಆಳುವ ನೀತಿಯಿಂದ, ಬ್ರಿಟಿಷರ ನೇರ ಆಳ್ವಿಕೆಗೆ ಒಳಪಟ್ಟ ಪ್ರದೇಶ ಮತ್ತು ಆಶ್ರಿತ ರಾಜ್ಯಗಳ (ದೇಶಿಯ ಸಂಸ್ಥಾನಗಳು) ಪ್ರದೇಶಗಳೆಂದು ವಿಂಗಡಿಸಿಕೊಂಡು ಆಳ್ವಿಕೆ ನಡೆಸುತ್ತಿದ್ದರು. ಪ್ರಾರಂಭದಲ್ಲಿ ಭಾರತೀಯರ ಸ್ವಾತಂತ್ರ್ಯ ಹೋರಾಟ ಬ್ರಿಟಿಷ್ ನೇರ ಆಳ್ವಿಕೆಗೆ ಒಳಪಟ್ಟ ಭಾರತದಲ್ಲಿ ಮಾತ್ರ ಕಾಣಿಸಿಕೊಂಡಿತ್ತು. ರಾಷ್ಟೀಯ ಕಾಂಗ್ರೆಸ್‌ನ ನಾಯಕರು ಬ್ರಿಟಿಷ್ ಭಾರತದ ಪ್ರದೇಶಗಳು ಸ್ವಾತಂತ್ರ್ಯ ಪಡೆದರೆ, ನಂತರ ಆಶ್ರಿತ ರಾಜ್ಯಗಳು ಸುಲಭವಾಗಿ ಸ್ವಾತಂತ್ರ್ಯ ಪಡೆಯುವುವು ಎಂಬ

ಮನೋಭಾವನೆಯನ್ನು ಹೊಂದಿದ್ದರು. ಆದರೆ ಭಾರತದಾದ್ಯಂತ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಂತೆ ಸ್ವಾತಂತ್ರ್ಯ ಹೋರಾಟಗಾರರು ಆಶ್ರಿತ ರಾಜ್ಯಗಳ ರಾಜರನ್ನು ಸಿಂಹಾಸನದಿಂದ ಕೆಳಗಿಳಿಸುವುದು ಬ್ರಿಟಿಷರನ್ನು ಅಧಿಕಾರದಿಂದ ಕೆಳಗಿಳಿಸುವಷ್ಟೆ ಕಷ್ಟಸಾಧ್ಯವೆಂಬುದನ್ನು ಅರಿತುಕೊಂಡರು. ಅಂದು ಭಾರತದಲ್ಲಿ ೧೧ ಪ್ರಾಂತ್ಯಗಳು, ೬೧ ಆಶ್ರಿತ ರಾಜ್ಯಗಳು / ದೇಶಿಯ ಸಂಸ್ಥಾನ (Princely States) ಗಳಿದ್ದವು. ಪರೋಕ್ಷವಾಗಿ ಆಶ್ರಿತ ರಾಜ್ಯಗಳ ಸಾರ್ವಭೌಮರೂ ಬ್ರಿಟಿಷರೇ ಆಗಿದ್ದರು. ಆಶ್ರಿತ ರಾಜ್ಯಗಳ ರಾಜರುಗಳು ಬ್ರಿಟಿಷರ ಅಧೀನದಲ್ಲಿ ಆಳ್ವಿಕೆ ನಡೆಸುತ್ತಿದ್ದರು. ಒಂದು ವೇಳೆ ಇವರು ಬ್ರಿಟಿಷರ ವಿರೋಧ ಕಟ್ಟಿಕೊಂಡು ಆಳ್ವಿಕೆ ನಡೆಸಲು ಮುಂದಾದರೆ ಅವರ ರಾಜಪ್ರಭುತ್ವಕ್ಕೆ ಕಂಠಕ ಉಂಟಾಗುತ್ತಿತ್ತು. ಆದ್ದರಿಂದ ಕೆಲವು ಸ್ವಾತಂತ್ರ್ಯ ಹೋರಾಟಗಾರರು ಆಶ್ರಿತ ರಾಜ್ಯಗಳ ಆಳ್ವಿಕೆಯು ತೊಲಗಬೇಕು, ಅವು ಕೂಡ ಭಾರತದ ಅವಿಭಾಜ್ಯ ಅಂಗಗಳಾಗಬೇಕು, ಆಗ ಮಾತ್ರ ಸ್ವಾತಂತ್ರ್ಯ ಹೋರಾಟಕ್ಕೆ ಖಚಿತವಾದ ರೂಪ ಬರುತ್ತದೆಂಬ ಅಭಿಪ್ರಾಯವನ್ನು ಹೊಂದಿದ್ದರು. ಉದಾ: ೧೯೨೬ರ ಅಕ್ಟೋಬರ್ ೦೩ರಂದು ಕೊಚ್ಚಿನ್ (ಎರ್ನಾಕುಳಂ)ನಲ್ಲಿ ದೇಶಿಯ ಸಂಸ್ಥಾನಗಳ ಭವಿಷ್ಯತ್‌ನ ಬಗ್ಗೆ ಮಾತನಾಡುತ್ತ. ವಿ.ಎಸ್.ಶ್ರೀನಿವಾಸಶಾಸ್ತ್ರಿಗಳು "ಅಂತರ ಭೇದ–ಪ್ರಭೇದಗಳಿಂದಿರುವ ಸಣ್ಣಪುಟ್ಟ ೫೬೧ ಸಂಸ್ಥಾನಗಳು ಭರತ ಖಂಡದ ನಕ್ಷೆಯಲ್ಲಿರುವವರೆಗೂ ಭರತ ಖಂಡದ ಸ್ವಾತಂತ್ರ್ಯದ ದಿನಗಳು ಹಿಂದುಳಿಯುತ್ತವೆ. ಅನೇಕ ರಾಜರು ತಮ್ಮ ಸಂಸ್ಥಾನಗಳಲ್ಲಿ ನೆಲೆಸದೆ, ಲಂಡನ್ ಅಥವಾ ಪ್ಯಾರಿಸ್‌ಗೆ ಹೋಗಿ ನೆಲೆಸಿ ಅಲ್ಲಿ ಐರೋಪ್ಯರನ್ನು ಮೀರಿಸುವಂತೆ ದುಂದು ವೆಚ್ಚದಲ್ಲಿ ತೊಡಗಿರುವ ಒಬ್ಬ ಹಿಂದೂಸ್ತಾನದ ರಾಜನನ್ನು ನೋಡುವಿರಿ' ಆದ್ದರಿಂದ ರಾಜಕೀಯ ವಿಚಾರದಲ್ಲಿ ಮುಂದೆ ಬ್ರಿಟಿಷ್ ಭಾರತ ಯಾವ ನಿಲುವನ್ನು ಹೊಂದುವುದೋ ಅದೇ ನಿಲುವನ್ನು ದೇಶಿಯ ಸಂಸ್ಥಾನಗಳು ಹೊಂದಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪೧ನೇ ರಾಷ್ಟ್ರೀಯ ಕಾಂಗ್ರೆಸ್ ಸಮ್ಮೇಳನದಲ್ಲಿ ಅಧ್ಯಕ್ಷೀಯ ಭಾಷಣ ಮಾಡುತ್ತ ಎಸ್.ಶ್ರೀನಿವಾಸ ಅಯ್ಯಂಗಾರ್‌ರವರು 'ಇಂದಿನ ದೇಶಿಯ ಸಂಸ್ಥಾನಗಳು ಸ್ವಯಂ ಆಡಳಿತವಿಲ್ಲದ ಸ್ವರಾಜ್ಯಗಳೆಂದು ಅನೇಕರ ಅಭಿಮತವಾಗಿದೆ. ನಾನು ಆ ಗುಂಪಿಗೆ ಸೇರಿದವನು. ಅವುಗಳನ್ನು ನೋಡಿದರೆ ಸ್ವರ್ಗದಿಂದ ನರಕಕ್ಕೆ ಉರುಳಿದ ನೆನಪು ಬರುತ್ತದೆ' ಆದ್ದರಿಂದ ಪ್ರಭುಗಳು



ತಮ್ಮ ತಮ್ಮ ಪ್ರಾಂತ್ಯಗಳಲ್ಲಿ ಪ್ರಜೆಗಳಿಗೆ ರಾಜ್ಯಾಡಳಿತದಲ್ಲಿ ಅವಕಾಶ ಕಲ್ಪಿಸಿಕೊಡಬೇಕು' ಎಂದು ಹೇಳಿದ್ದಾರೆ.

ಮೇಲಿನ ಹೇಳಿಕೆಗಳನ್ನು ಗಮನಿಸಿದಾಗ ಅಂದಿನ ದೇಶಿಯ ಸಂಸ್ಥಾನಗಳ ಅನೇಕ ರಾಜರುಗಳು ತಮ್ಮ ಪ್ರಜೆಗಳ ಯೋಗಕ್ಷೇಮ ನೋಡಿಕೊಳ್ಳುವುದಕ್ಕಿಂತ ತಮ್ಮ ವೈಭವದ ಜೀವನದ ತೃಪ್ತಿಯಲ್ಲೇ ನಿರತರಾಗಿದ್ದರು. ಕೆಲವು ಸ್ವಾತಂತ್ರ್ಯ ಹೋರಾಟಗಾರರ ಪ್ರಕಾರ ಸಾಮ್ರಾಜ್ಯಶಾಹಿ ಬ್ರಿಟಿಷರಿಗೂ ದೇಶಿಯ ಸಂಸ್ಥಾನಗಳ ರಾಜರಿಗೂ ಮನೋಧರ್ಮದಲ್ಲಿ ಮೂಲ ವ್ಯತ್ಯಾಸವೇನೂ ಇರಲಿಲ್ಲ. ಇಬ್ಬರದು ಅಧಿಕಾರದ ಲಾಲಸೆಯಾಗಿತ್ತು. ಎಲ್ಲಾ ಸಂಸ್ಥಾನಗಳು ಬ್ರಿಟಿಷರ ಅಧೀನದಲ್ಲೇ ಆಳ್ವಿಕೆ ನಡೆಸುತ್ತಿದ್ದವು. ಇದೇ ರೀತಿ ಮೈಸೂರಿನ ಮಹಾರಾಜರಾಗಲೀ ದಿವಾನರಾಗಲೀ ಬ್ರಿಟಿಷರ ವಿರೋಧ ಕಟ್ಟಿಕೊಂಡು ಆಳ್ವಿಕೆ ನಡೆಸಲು ಬಯಸುತ್ತಿರಲಿಲ್ಲ. ಬ್ರಿಟಿಷರ ಹೇಳಿಕೆಗಳಂತೆ ದಿವಾನರ ಹೇಳಿಕೆಗಳು ದರ್ಪದಿಂದ ಕೂಡಿದ್ದವು. ಅಲ್ಲದೆ ಜವಬ್ದಾರಿ ಸರ್ಕಾರದ ಮಾತೇ ಅವರಿಗೆ ಹಿಡಿಸುತ್ತಿರಲಿಲ್ಲ.

ಅಂದು ಮೈಸೂರು ಸಂಸ್ಥಾನದಲ್ಲಿ ಮಹಾರಾಜರಾಗಿ ನಾಲ್ವಡಿ ಕೃಷ್ಣರಾಜ ಒಡೆಯರು ಆಳ್ವಿಕೆ ನಡೆಸುತ್ತಿದ್ದರು. ಇವರು ಬ್ರಿಟಿಷರ ಅಧೀನದಲ್ಲಿ ತಮ್ಮ ಆಳ್ವಿಕೆ ನಡೆಸುತ್ತಿದ್ದುದ್ದರಿಂದ ಮೈಸೂರಿನ ಪ್ರಜೆಗಳು ಇಮ್ಮಡಿ ಗುಲಾಮರಾಗಿದ್ದರು. ಮೈಸೂರು ಸಂಸ್ಥಾನದ ಜನತೆಯಲ್ಲಿ ರಾಜಭಕ್ತಿ ಹೆಚ್ಚು, ರಾಜಕೀಯ ಪ್ರಜ್ಞೆ ಕಡಿಮೆಯಾಗಿತ್ತು. ಮಹಾರಾಜರ ಅದ್ದೂರಿಯ ವೇಷ ಭೂಷಣ, ರತ್ನದ ಉಂಗುರುಗಳು, ಆನೆ ಅಂಬಾರಿ, ಅರಮನೆ ದೀಪಗಳನ್ನು ಕಂಡು ದಿಗ್ಭ್ರಮೆಯಿಂದ ಕೈಮುಗಿದುಕೊಂಡು ಸಂತೋಷ ಪಡುವ ಸ್ವಭಾವ ಜನರಲ್ಲಿದ್ದಿತು. ಮಹಾರಾಜರಿಗೇಕೆ ಈ ವೈಭವ? ಈ ಅದ್ದೂರಿಯಾದ ವೈಭವಕ್ಕೆ ಯಾರ ದುಡಿಮೆ ಕಾರಣವಾಗಿದೆ? ತಾವೇಕೆ ಹರಕಲು ಬಟ್ಟೆ ಧರಿಸಿ, ಜೋಪಡಿಗಳಲ್ಲಿ ವಾಸಿಸುತ್ತಾ ನಿರ್ಗತಿಕರಂತೆ ಜೀವನ ಸಾಗಿಸಬೇಕು, ರಾಜರ ಆಳ್ವಿಕೆ ಹೋಗಿ ಪ್ರಜಾ ರಾಜ್ಯ ಬರಬಾರದೇಕೆ? ಮುಂತಾದ ಸಮಸ್ಯೆಗಳತ್ತ ಜನತೆ ಆಲೋಚಿಸುವಷ್ಟು ರಾಜಕೀಯ ಪ್ರಜ್ಞೆಯನ್ನು ಹೊಂದಿರಲಿಲ್ಲ.

ನಾಲ್ವಡಿ ಕೃಷ್ಣರಾಜ ಒಡೆಯರು ಮೈಸೂರು ಸಂಸ್ಥಾನದಲ್ಲಿ ಆಳ್ವಿಕೆ ನಡೆಸಲು ಪ್ರಾರಂಭಿಸಿದಾಗ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ರಾಷ್ಟ್ರೀಯ ಕಾಂಗ್ರೆಸ್‌ನ ಮಂದಗಾಮಿಗಳ ಮೊದಲ ಹಂತ ಕೊನೆಗೊಂಡು ತೀವ್ರಗಾಮಿಗಳ

ಎರಡನೇ ಹಂತ ಪ್ರಾರಂಭವಾಗಿ ತೀವ್ರ ಸ್ವರೂಪವನ್ನು ಪಡೆದು ಕೊಂಡಿತ್ತು. ನಂತರ ರಾಷ್ಟ್ರೀಯ ಕಾಂಗ್ರೆಸ್ ನಾಯಕರಾಗಿ ಪ್ರವರ್ಧಮಾನಕ್ಕೆ ಬಂದ ಗಾಂಧೀಜಿಯವರು ತಮ್ಮದೇ ಆದ ಅಹಿಂಸಾತ್ಮಕ ಹೋರಾಟದ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ಹೊಸ ಸ್ವರೂಪವನ್ನು ನೀಡಿದರು. ಪರಿಣಾಮವಾಗಿ ಪ್ರಮುಖ ಪಟ್ಟಣಗಳ ಮತ್ತು ನಗರಗಳ ವಿದ್ಯಾವಂತ ವರ್ಗಕ್ಕೆ ಸೀಮಿತವಾಗಿದ್ದ ಭಾರತದ ಸ್ವಾತಂತ್ರ್ಯ ಹೋರಾಟ ರಾಷ್ಟ್ರದ ಜನಸಾಮಾನ್ಯರನ್ನು ಹೋರಾಟವಾಗಿ ವ್ಯಾಪಿಸಿತು. ನಂತರದ ಸ್ವಾತಂತ್ರ್ಯ ಹೋರಾಟಗಳ ಬಗ್ಗೆ ಮಾತನಾಡುವಾಗ ಗಾಂಧೀಜಿಯವರ ಮಾರ್ಗದರ್ಶನದಲ್ಲಿ ಭಾರತದ ಮತ್ತು ಕರ್ನಾಟಕದ ನಾನಾ ಕಡೆಗಳಲ್ಲಿ ಅನೇಕ ರೀತಿಯ ಅಹಿಂಸಾತ್ಮಕ ಮಾದರಿಯಲ್ಲಿ ಸ್ವಾತಂತ್ರ್ಯ ಹೋರಾಟಗಳು ಜರುಗಿದವು.

ಇಂತಹ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಸಂಸ್ಥಾನದಲ್ಲಿ ಜರುಗಿದ ಮಂಡ್ಯದ ಶಿವಪುರ ಧ್ವಜ ಸತ್ಯಾಗ್ರಹ ಚಿರಸ್ಮರಣೀಯವಾದುದ್ದು, ಈ ಹೋರಾಟ ಮೈಸೂರು ಸಂಸ್ಥಾನದ ಜನಸಾಮಾನ್ಯರಲ್ಲಿ ಸ್ವಾತಂತ್ರ್ಯದ ಕಿಚ್ಚು ಹಚ್ಚುವಲ್ಲಿ ಪ್ರಮುಖ ಪಾತ್ರವಹಿಸಿತು. ಗಾಂಧೀಜಿಯವರ ಅಹಿಂಸಾತ್ಮಕ ಮಾರ್ಗದರ್ಶನದಡಿಯಲ್ಲಿ ಜರುಗಿದ ಪ್ರಮುಖ ಹೋರಾಟವಾಗಿದೆ. ಜಿಲ್ಲೆಯ ಸಾಮಾನ್ಯ ಜನತೆ ಸ್ವಾತಂತ್ರ್ಯ ಹೋರಾಟದ ಮುಖ್ಯ ವಾಹಿನಿಯಲ್ಲಿ ಭಾಗವಹಿಸಿರುವುದು ವಿಶೇಷ ಸಂಗತಿಯಾಗಿದೆ. ಈ ಹಿನ್ನೆಲೆಯಲ್ಲಿ ಮೈಸೂರು ಸಂಸ್ಥಾನದ ಕಾಂಗ್ರೆಸ್‌ನ ಮೊಟ್ಟ ಮೊದಲ ಸಮ್ಮೇಳನ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಶಿವಪುರದಲ್ಲಿ ಜರುಗಿದ ರಾಷ್ಟ್ರಕೂಟ (ಅಧಿವೇಶನ/ಸಮ್ಮೇಳನ) ಕರ್ನಾಟಕದ ಇತಿಹಾಸದಲ್ಲೇ ಅಲ್ಲದೆ ಭಾರತದ ಇತಿಹಾಸದಲ್ಲೇ ಚಿರಸ್ಮರಣೀಯವಾದುದ್ದು.

**ಶಿವಪುರ ಅಧಿವೇಶನ ಜರುಗುವುದಕ್ಕೆ ಹಿನ್ನಲೆ:**

ಮಂಡ್ಯ ಜಿಲ್ಲೆಯ ಮದ್ದೂರು ಸಮೀಪದ ಶಿಂಷಾ ನದಿ ದಡದ ಶಿವಪುರದಲ್ಲಿ ೧೯೩೮ರ ಏಪ್ರಿಲ್ ೧೧ ರಿಂದ ಮೂರು ದಿನಗಳ ಕಾಲ ಜರುಗಿದ ಶಿವಪುರ ಧ್ವಜ ಸತ್ಯಾಗ್ರಹ ಮೈಸೂರು ಸಂಸ್ಥಾನದ ಹಲವು ಭಾಗಗಳಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಳ್ಳುವುದಕ್ಕೆ ನಾಂದಿಯಾಡಿತು. ಈ ವೇಳೆಗೆ ಬ್ರಿಟಿಷ್ ಭಾರತದಾದ್ಯಂತ ಸ್ವಾತಂತ್ರ್ಯ ಹೋರಾಟ ತೀವ್ರ ಸ್ವರೂಪವನ್ನು



ಪಡೆದುಕೊಂಡಿತ್ತು. ಆದರೆ ಇದಕ್ಕೂ ಮೊದಲು ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರ ಸ್ವರೂಪವನ್ನು ಪಡೆದುಕೊಂಡಿರಲಿಲ್ಲ ಕಾರಣ ದೇಶಿಯ ಸಂಸ್ಥಾನಗಳು ಸ್ಥಿತಿಗತಿಗಳು ಬೇರೆಯಾಗಿದ್ದವು.

೧೯೦೫ರವರೆಗೆ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮಹಾರಾಜರ ನಡುವಿನ ಸಂಬಂಧ ಅನೋನ್ಯವಾಗಿದ್ದುದರಿಂದ ದೇಶಿಯ ಸಂಸ್ಥಾನಗಳಿಗೆ ಸ್ವಾತಂತ್ರ್ಯ ಹೋರಾಟದ ತೀವ್ರತೆ ಹರಡಿರಲಿಲ್ಲ. ಇಂತಹ ಸನ್ನಿವೇಶದಲ್ಲಿ ಮೈಸೂರು ಸಂಸ್ಥಾನದಲ್ಲಿ ರಾಷ್ಟ್ರಾಭಿಮಾನ ಮೂಡಲು ಇನ್ನೂ ಕೆಲವು ಘಟನೆಗಳು ಸಹಾಯಕವಾದವು. ರಾಷ್ಟ್ರೀಯ ನಾಯಕರು ಅನೇಕರು ಆಗಾಗ ಮೈಸೂರು ಸಂಸ್ಥಾನಕ್ಕೆ ಭೇಟಿ ನೀಡಿ ತಮ್ಮ ಭಾಷಣಗಳಿಂದ ಜನಜಾಗೃತಿ ಮೂಡಿಸಿದರು. ಉದಾ: ವಿವೇಕಾನಂದರು, ದಯಾನಂದ ಸರಸ್ವತಿರವರು ಮೊದಲಾದವರು

೧೯೦೭ರಲ್ಲಿ ಕಲ್ಕತ್ತಾದಲ್ಲಿ ಜರುಗಿದ ಕಾಂಗ್ರೆಸ್ ಸಭೆಯಲ್ಲಿ ಮೈಸೂರು ಪ್ರಾಂತ್ಯದ ಪ್ರಾಂತೀಯ ಮುಖಂಡರಾಗಿ ಮದ್ದೂರಿನ ಎಚ್.ಕೆ.ವೀರಣ್ಣಗೌಡರು ಭಾಗವಹಿಸಿದ್ದರು. ಈ ಸಭೆಯಲ್ಲಿ ಪ್ರಾಂತೀಯ ಸಂಸ್ಥಾನಗಳ ಜನಸಮುದಾಯದ ಮನಸ್ಸಿನಲ್ಲಿ ಹೊಸ ರಾಜಕೀಯ ಪರಿಜ್ಞಾನವನ್ನು ಮೂಡಿಸಬೇಕು, ಜನಸಮುದಾಯವನ್ನು ಜಾಗೃತಗೊಳಿಸಬೇಕು, ಪ್ರತಿಯೊಂದು ಪ್ರಾಂತ್ಯದಲ್ಲೂ ಮುಖಂಡರು ಜವಬ್ದಾರಿಯಿಂದ ಜನರ ಒಲವು ಗಳಿಸಿಕೊಂಡು ಚಳವಳಿಯಲ್ಲಿ ಭಾಗವಹಿಸುವಂತೆ ಪ್ರೇರೇಪಿಸಬೇಕು ಎಂಬ ನಿರ್ಣಯವನ್ನು ಕೈಗೊಳ್ಳಲಾಯಿತು.

೧೯೧೭ರ ಡಿಸೆಂಬರ್ ೦೬ರಂದು ಮೈಸೂರು ಸಂಸ್ಥಾನದ ಪ್ರಪ್ರಥಮ ಸಂಘಟನೆಯಾದ ಪ್ರಜಾಮಿತ್ರ ಮಂಡಳಿ ಅಸ್ತಿತ್ವಕ್ಕೆ ಬಂದಿತು. ಮೈಸೂರು ಸಂಸ್ಥಾನದ ಪ್ರಪ್ರಥಮ ರಾಜಕೀಯ ಸಂಘಟನೆಯಾಗಿ ಸಂಸ್ಥಾನದ ರಾಜಕೀಯ ಪ್ರಜ್ಞೆಯನ್ನು ಜನಸಾಮಾನ್ಯರಲ್ಲಿ ಬೆಳೆಸಲು ಪ್ರಯತ್ನಿಸಿತು. ೧೯೩೧ರ ಸೆಪ್ಟಂಬರ್‌ನಲ್ಲಿ ಪ್ರಜಾಪಕ್ಷ ಸ್ಥಾಪನೆಯಾಯಿತು. ೧೯೩೫ರಲ್ಲಿ ಪ್ರಜಾಮಿತ್ರ ಮಂಡಳಿ ಮತ್ತು ಪ್ರಜಾಪಕ್ಷಗಳು ಒಗ್ಗೂಡಿ ಸಂಯುಕ್ತ ಪ್ರಜಾಪಕ್ಷವೆಂದು ಅಸ್ತಿತ್ವಕ್ಕೆ ಬಂದಿತು.

ಕ್ರಿ.ಶ.೧೯೨೦ರವರೆಗೆ ಕಾಂಗ್ರೆಸ್ ಪಕ್ಷದ ಚಟುವಟಿಕೆಗಳು ಕೇವಲ ಬ್ರಿಟಿಷ್ ಪ್ರಾಂತ್ಯಗಳಿಗೆ ಮಾತ್ರ ಸೀಮಿತಿವಾಗಿದ್ದ ಸಂದರ್ಭದಲ್ಲಿ ಮೈಸೂರು ಸಂಸ್ಥಾನದಲ್ಲಿ

ಕಾಂಗ್ರೆಸ್ ರಚನೆಗೊಂಡಿಲ್ಲದಿದ್ದರೂ ಪತ್ರಿಕೆಗಳಲ್ಲಿ ಕಾಂಗ್ರೆಸ್‌ನ ಧ್ಯೆಯೋದ್ದೇಶಗಳ ಬಗ್ಗೆ ಪ್ರಕಟಗೊಂಡಿದ್ದ ಲೇಖನಗಳಿಂದ ಜನತೆಯ ಗಮನ ಕಾಂಗ್ರೆಸ್‌ನತ್ತ ಸೆಳೆಯುತ್ತಿದ್ದವು. ಮೈಸೂರು ಸಂಸ್ಥಾನದಿಂದ ಅನೇಕ ಪ್ರತಿನಿಧಿಗಳು ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸುತ್ತಿದ್ದರೂ ಈ ವೇಳೆಗೆ ಸ್ಥಾನಿಕ ದೊರೆಗಳ ವಿರುದ್ಧ ಯಾವುದೇ ಚಳವಳಿಗಳನ್ನು ನಡೆಸಿರುವುದು ಕಂಡು ಬಂದಿಲ್ಲ. ೧೯೨೦ರಲ್ಲಿ ಬೆಂಗಳೂರು ದಂಡಿನ ರೈಲ್ವೆ ನಿಲ್ದಾಣದ ದೊಡ್ಡ ಮಾವಿನ ಮರದ ಬಳಿ ಜರುಗಿದ ಖಿಲಾಫತ್ ಚಳವಳಿಯಲ್ಲಿ ಗಾಂಧಿ ಮತ್ತು ಸೌಕತ್‌ಅಲಿಯವರು ಸೇಲಂನಿಂದ ಬಂದು ಭಾಷಣ ಮಾಡಿದ್ದು, ಮೈಸೂರು ಪ್ರಾಂತ್ಯದಲ್ಲಿ ಹಿಂದೂ ಮುಸ್ಲಿಂರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸುವುದಕ್ಕೆ ಸಾಕಷ್ಟು ಪ್ರಭಾವ ಬೀರಿತು.

೧೯೨೦ರ ನಾಗಪುರ ಕಾಂಗ್ರೆಸ್ ಅಧಿವೇಶನದಲ್ಲಿ ಭಾಷಾವಾರು ಪ್ರಾಂತ್ಯಗಳಿಗನುಗುಣವಾಗಿ ಸುಮಾರು ೨೧ ಕಾಂಗ್ರೆಸ್ ಪ್ರಾಂತೀಯ ಸಮಿತಿಗಳನ್ನು ಬ್ರಿಟಿಷ್ ಪ್ರಾಂತ್ಯಗಳಿಗೆ ಸೀಮಿತವಾಗುವಂತೆ ಸ್ಥಾಪಿಸಲು ಅನುಮತಿ ನೀಡಲಾಯಿತು. ಈ ಸಮಿತಿಗಳು ಯಾವುದೇ ಕಾರಣದಿಂದಲೂ ಸಂಸ್ಥಾನಗಳ ಆಂತರಿಕ ವ್ಯವಹಾರದಲ್ಲಿ ಮಧ್ಯೆ ಪ್ರವೇಶಿಸದೇ ಕಾಂಗ್ರೆಸ್‌ನ ರಚನಾತ್ಮಕ ಕಾರ್ಯಕ್ರಮಗಳನ್ನು ಅಂದರೆ ರಾಷ್ಟ್ರೀಯತೆ ಮೂಡಿಸುವುದು, ಸ್ವದೇಶಿ ಚಳವಳಿಗೆ ಪ್ರೋತ್ಸಾಹ, ಅಸ್ಪೃಶ್ಯತೆ ನಿವಾರಣೆ, ಪಾನ ನಿರೋಧ, ರಾಷ್ಟ್ರೀಯ ಐಕ್ಯತೆ ಮೊದಲಾದವುಗಳಿಗೆ ಬೆಂಬಲಿಸುತ್ತಾ ಜವಾಬ್ದಾರಿ ಸರಕಾರದ ಬಗ್ಗೆ, ಹಕ್ಕುಗಳ ರಕ್ಷಣೆಯ ಬಗ್ಗೆ ತಿಳಿವಳಿಕೆ ಮೂಡಿಸುವುದರ ಮೂಲಕ ರಾಷ್ಟ್ರೀಯ ಕಾಂಗ್ರೆಸ್‌ನ ಕಾರ್ಯಕ್ರಮಗಳನ್ನು ಪ್ರಭಾವಯುತವಾಗಿ ತಮ್ಮ ಪ್ರಾಂತ್ಯಗಳಲ್ಲಿ ಅನುಷ್ಠಾನಕ್ಕೆ ತರುವುದಕ್ಕೆ ಪ್ರಯತ್ನಿಸಬೇಕು ಎಂಬ ನಿರ್ಬಂಧ ವಿಧಿಸಲಾಗಿತ್ತು. ಹೀಗೆ ಮೈಸೂರು ಸಂಸ್ಥಾನದ ಜನತೆಗೆ ಪ್ರಪ್ರಥಮವಾಗಿ ಬ್ರಿಟಿಷ್ ಭಾರತದ ಪ್ರಾಂತ್ಯಗಳಿಗೆ ತಮ್ಮ ವಿಧೇಯತೆಯನ್ನಿಟ್ಟುಕೊಂಡು ರಾಜ್ಯದ ಪ್ರಾಂತೀಯ ಸಮಿತಿಗಳನ್ನು ರಚಿಸಿಕೊಳ್ಳಲು ಅವಕಾಶ ದೊರೆಯಿತು. ೧೯೨೧ರಲ್ಲಿ ಬೆಂಗಳೂರಿನಲ್ಲಿ ನ್ಯಾಷನಲ್ ಕಾಂಗ್ರೆಸ್‌ನ ಶಾಖೆಯ ಅಧ್ಯಕ್ಷರಾಗಿ ಮೈಸೂರು ಹೈಕೋರ್ಟಿನ ನ್ಯಾಯಾಧೀಶರಾದ ಸೆಟ್ಲೂರ್ ನೇಮಕ ಗೊಂಡರು.

೧೯೨೪ರಲ್ಲಿ ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಬೆಳಗಾಂ ಕಾಂಗ್ರೆಸ್ ಅಧಿವೇಶನ ಜರುಗಿದ ನಂತರ ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಚಟುವಟಿಕೆಗಳು ತೀವ್ರಗೊಂಡಿತು. ಗಾಂಧೀಜಿಯವರು ೧೯೨೭ರ ಏಪ್ರಿಲ್‌ನಲ್ಲಿ ವಿಶ್ರಾಂತಿಗಾಗಿ ಮೈಸೂರು ಸಂಸ್ಥಾನದ ನಂದಿ ಬೆಟ್ಟದ ಕನ್ನಿಂಗ್ ಹ್ಯಾಂ ಭವನದಲ್ಲಿ ಉಳಿದುಕೊಂಡಿದ್ದು ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರಗೊಳ್ಳುವುದಕ್ಕೆ ನೆರವಾಯಿತು. ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನ ೧೯೨೭ರಲ್ಲಿ ಮಾಣಿಕ್ಯವೇಲು ಮೊದಲಿಯಾರ್‌ರವರ ಅಧ್ಯಕ್ಷತೆಯಲ್ಲಿ ಮೈಸೂರು ನಗರದಲ್ಲಿ ಸಮಾವೇಶಗೊಂಡಿತು. ಸಂಸ್ಥಾನದ ಎಲ್ಲಾ ಭಾಗಗಳಿಂದಲೂ ಪ್ರತಿನಿಧಿಗಳು ಭಾಗವಹಿಸಿದ್ದ ಈ ಅಧಿವೇಶನ ಮೈಸೂರು ರಾಜಕೀಯದಲ್ಲೇ ಒಂದು ಮಹತ್ವದ ತಿರುವಾಗಿತ್ತು.



ಗಾಂಧೀಜಿಯವರ ನೇತೃತ್ವದಲ್ಲಿ ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ಹೋರಾಟ ತೀವ್ರಗೊಂಡಂತೆ ಮೈಸೂರು ಸಂಸ್ಥಾನದಲ್ಲೂ ಮಹಾರಾಜರ ಕೃಪಾಶ್ರಯದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಲು ಕಾಂಗ್ರೆಸ್ ನಿರ್ಧರಿಸಿತು. ೧೯೨೮ರಲ್ಲಿ ಜವಾಬ್ದಾರಿ ಸರ್ಕಾರಕ್ಕಾಗಿ ಚಳವಳಿ ನಡೆಸುವ ಉದ್ದೇಶದಿಂದ 'ಮೈಸೂರು ಸ್ಟೇಟ್ ಕಾಂಗ್ರೆಸ್ ಸ್ಥಾಪನೆಯಾಯಿತು' ನಂತರ ಜವಾಹರಲಾಲ್ ನೆಹರು, ಕಮಲಾದೇವಿ ಚಟ್ಟೋಪಾಧ್ಯಾಯ, ಎನ್.ಎಸ್. ಹರ್ಡೀಕರ್ ಮೊದಲಾದವರು ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಂಡು ಸ್ವಾತಂತ್ರ್ಯ ಹೋರಾಟದ ಬಗ್ಗೆ ಜಾಗೃತಿ ಮೂಡಿಸಿದರು.

೧೯೩೦ರ ದಶಕವು ಮೈಸೂರು ಸಂಸ್ಥಾನದಲ್ಲಿ ಸ್ವಾತಂತ್ರ್ಯ ಹೋರಾಟ ತೀವ್ರ ಸ್ವರೂಪವನ್ನು ಪಡೆದುಕೊಂಡ ಕಾಲಘಟ್ಟವಾಗಿದೆ. ೧೯೩೦ನೇ ಜನವರಿ ೨೬ರಂದು ರಾಷ್ಟ್ರದಾದ್ಯಂತ ಸಂಪೂರ್ಣ ಸ್ವರಾಜ್ಯ ದಿನಾಚರಣೆಯನ್ನು ನಡೆಸಬೇಕೆಂದು ರಾಷ್ಟ್ರನಾಯಕರು ಕರೆಕೊಟ್ಟರು. ಅದರಂತೆ ಮೈಸೂರು ಸಂಸ್ಥಾನದಾದ್ಯಂತ ಸ್ವರಾಜ್ಯ ದಿನಾಚರಣೆ ಜರುಗಿತು. ಕಾರಣ ೧೯೩೦–೩೧ರಲ್ಲಿ ಮಂಡ್ಯ ಪ್ರದೇಶದಲ್ಲಿ ಎಚ್.ಕೆ. ವೀರಣ್ಣಗೌಡರವರ ನೇತೃತ್ವದಲ್ಲಿ ಜರುಗಿದ ಇರ್ವಿನ್ ನಾಲಾ ರೈತ ಚಳವಳಿ, ರಾಷ್ಟ್ರೀಯ ಚಳವಳಿಯ ಇತಿಹಾಸದಲ್ಲಿ ಭಾರತದ ನಾನಾ ಕಡೆಗಳಲ್ಲಿ ಜರುಗಿದ ೧೯೧೮ರ ಉತ್ತರ ಭಾರತದ ರೈತ ಚಳವಳಿ, ೧೯೨೧ರ ಕೇರಳದ ರೈತ ಚಳವಳಿ, ೧೯೨೮ರ ಗುಜರಾತ್‌ನ ರೈತ ಚಳವಳಿಗಳಂತೆ ಪ್ರಮುಖವಾದುದ್ದಾಗಿದೆ.

೧೯೩೭ರಲ್ಲಿ ಮೈಸೂರು ಕಾಂಗ್ರೆಸ್ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ಗಳೆರಡೂ

ಒಗ್ಗೂಡಿ. ಮೈಸೂರು ಕಾಂಗ್ರೆಸ್ ಸಂಸ್ಥೆ ಅಸ್ತಿತ್ವಕ್ಕೆ ಬಂದಿತು. ಮೈಸೂರು ಕಾಂಗ್ರೆಸ್ ಅಖಿಲ ಭಾರತ ಕಾಂಗ್ರೆಸ್‌ನ ತ್ರಿವರ್ಣ ಧ್ವಜವನ್ನೇ ತನ್ನ ಧ್ವಜವೆಂದು ಅಂಗೀಕರಿಸಿತು. ಆದರೆ ದಿವಾನರು ೧೯೩೭ರ ದಸರಾ ಅಧಿವೇಶನದಲ್ಲಿ 'ಸಾರ್ವಜನಿಕವಾಗಿ ರಾಷ್ಟ್ರೀಯ ಕಾಂಗ್ರೆಸ್ ಧ್ವಜವನ್ನು ಹಾರಿಸಬಾರದು ಮತ್ತು ಅದನ್ನು ರಾಷ್ಟ್ರಧ್ವಜವೆಂದು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿದರು. ಆದರೆ ಕಾಂಗ್ರೆಸ್ ಮುಖಂಡರು ಪಕ್ಷದ ಕಾರ್ಯ ಚಟುವಟಿಕೆಯಲ್ಲಿ ಮಾತ್ರ ಧ್ವಜ ಬಳಕೆಯನ್ನು ಖಾಸಗಿಯಾಗಿ ಮಾಡಿಕೊಳ್ಳಬಹುದೆಂದು ಸ್ಪಷ್ಟಪಡಿಸಿದರು. ಆದರೆ ದಿವಾನರು ಇದಕ್ಕೆ ಮಾನ್ಯತೆ ನೀಡಲಿಲ್ಲ. ಇದರಿಂದ ಕುಪಿತಗೊಂಡ ಮೈಸೂರು ಪ್ರಾಂತ್ಯದ ಕಾಂಗ್ರೆಸ್ ನಾಯಕರು ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಭಾಷಣ ಮಾಡಿ ಸರ್ಕಾರದ ದಮನಕಾರಿ ನೀತಿಯನ್ನು ಉಗ್ರವಾಗಿ ಟೀಕಿಸಿ ಜನತೆ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸುವಂತೆ ಕೋರಿದರು. ಸಂಸ್ಥಾನದಲ್ಲಿ ಸರ್ಕಾರ ಧ್ವಜಾರೋಹಣವನ್ನು ನಿಷೇಧಿಸಿರುವುದರ ಪ್ರತೀಕವಾಗಿ ಧ್ವಜಸತ್ಯಾಗ್ರಹ ನಡೆಸಲು ಮುಂದಾದರು. ಇದರಿಂದ ಎಚ್ಚೆತ್ತ ಸರ್ಕಾರ ಕಾಂಗ್ರೆಸ್‌ನ ಸಾರ್ವಜನಿಕ ಸಭೆಗಳನ್ನು ನಿಷೇಧಿಸುವುದರ ಮೂಲಕ ಅನೇಕ ಕಾಂಗ್ರೆಸ್ ನಾಯಕರ ಮೇಲೆ ಭಾಷಣ ಮಾಡದಂತೆ ನಿಷೇಧಾಜ್ಞೆಯನ್ನು ಜಾರಿಗೊಳಿಸಿತು. ಅನೇಕ ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಿತು. ಇದರಿಂದ ಕುಪಿತಗೊಂಡ ಕಾಂಗ್ರೆಸ್ ನಾಯಕರು ಅನೇಕ ಜನರನ್ನು ಬಂಧಿಸಿ ಜೈಲಿಗೆ ಕಳುಹಿಸಿದ್ದರ ವಿರುದ್ಧ ೧೯೩೭ರ ಸೆಪ್ಟಂಬರ್ ೬ ರಂದು ದಮನಕಾರಿ ದಿನವೆಂದು ಆಚರಿಸಲು ಕರೆಕೊಟ್ಟಿತು.

ಸಂಯುಕ್ತ ಪ್ರಜಾಪಕ್ಷವು ಮೈಸೂರು ಅಧಿವೇಶನದಲ್ಲಿ ತನ್ನ ಮೂಲಭೂತ ನಿಲುವನ್ನು ಬದಲಿಸಿ, ೧೯೩೭ರ ಅಕ್ಟೋಬರ್ ೧೬ರಂದು ಕಾಂಗ್ರೆಸ್ ಪಕ್ಷದೊಡನೆ ವಿಲೀನವಾಯಿತು. ಹೆಚ್.ಸಿ.ದಾಸಪ್ಪ, ಕೆ.ಸಿ.ರೆಡ್ಡಿ ಮೊದಲಾದ ಪ್ರಮುಖ ನಾಯಕರು ಕಾಂಗ್ರೆಸ್ ಪಕ್ಷವನ್ನು ಸೇರಲು ಕಾರಣವಾಯಿತು. ಮೈಸೂರು ಕಾಂಗ್ರೆಸ್ ಜನತಾ ಪ್ರತಿನಿಧಿಗಳನ್ನೊಳಗೊಂಡ ಜವಬ್ದಾರಿ ಸರ್ಕಾರಕ್ಕಾಗಿ ಒತ್ತಾಯಿಸಿ ಸಂಸ್ಥಾನದಾದ್ಯಂತ ರಾಜಕೀಯ ಚಳವಳಿಯನ್ನು ಪ್ರಾರಂಭಿಸಿತು. ಈ ಚಳುವಳಿಯನ್ನು ಹತ್ತಿಕ್ಕಲು ಸ್ವಾಭಾವಿಕವಾಗಿ ಸರ್ಕಾರ ಪ್ರಯತ್ನಿಸಿತು. ಈ ಪ್ರಯತ್ನವನ್ನು ದಮನಕಾರಿ ನೀತಿಯೆಂದು ಘೋಷಿಸಿದ ಮೈಸೂರು ಕಾಂಗ್ರೆಸ್ ಸದಸ್ಯರು ೧೯೩೭ರ ಅಕ್ಟೋಬರ್‌ನಲ್ಲಿ ಪ್ರಜಾಪ್ರತಿನಿಧಿ ಸಭೆಯಿಂದ ಹೊರ ನಡೆದು ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದರು.



೧೯೩೭ರ ಅಕ್ಟೋಬರ್ ೨೯ ರಂದು ಕಲ್ಕತ್ತಾದ ಅಖಿಲ ಭಾರತ ಕಾಂಗ್ರೆಸ್ ಅಧಿವೇಶನದ ಸಂದರ್ಭದಲ್ಲಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಒಂದು ನಿರ್ಣಯವನ್ನು ಮಂಡಿಸಿ ಮೈಸೂರು ಸರಕಾರ ಕಾಂಗ್ರೆಸ್‌ನ ದಿನನಿತ್ಯದ ರಾಜಕೀಯ ಚಟುವಟಿಕೆಗಳಿಗೆ ಅಡ್ಡಿಮಾಡುತ್ತಿದ್ದು ಅನೇಕ ಕಾಂಗ್ರೆಸ್ ನಾಯಕರನ್ನು ಬಂಧಿಸಿದೆ. ಭಾಷಣ ಮಾಡದಂತೆ ನಿಷೇಧಿಸಿದೆ. ಸಭೆ ಸಮಾರಂಭಗಳನ್ನು ಮಾಡದಂತಾಗಿದೆ. ಇದಕ್ಕೆಲ್ಲ ದಿವಾನರ ದಮನಕಾರಿ ಪ್ರವೃತ್ತಿಯೇ ಕಾರಣ. ಇದನ್ನು ವಿರೋಧಿಸಿ ಸಂಸ್ಥಾನದ ಜನತೆ ನಡೆಸುತ್ತಿರುವ ಹೋರಾಟಕ್ಕೆ ಮೆಚ್ಚುಗೆ ವ್ಯಕ್ತಪಡಿಸಿ ಸರ್ಕಾರದ ನೀತಿಯನ್ನು ಖಂಡಿಸಿ ನಿರ್ಣಯವನ್ನು ಮಂಡಿಸಿದರು.

ರಾಷ್ಟ್ರೀಯ ಕಾಂಗ್ರೆಸ್ ಕೈಗೊಂಡ ನಿರ್ಣಯದಿಂದ ಮತ್ತಷ್ಟು ನೈತಿಕ ಬಲವನ್ನು ಹೆಚ್ಚಿಸಿಕೊಂಡ, ಮೈಸೂರು ಕಾಂಗ್ರೆಸ್‌ನ ನಾಯಕರು ೧೯೩೭ರ ನವಂಬರ್ ೧೪ ರಂದು ದಿವಾನರ ಗಮನ ಸೆಳೆಯಲು 'ದೇಶ ಭಕ್ತರ ದಿನ'ವೆಂದು ಆಚರಿಸಲು ಕರೆಕೊಟ್ಟರು. ಕಾಂಗ್ರೆಸ್‌ನ ಚಟುವಟಿಕೆಗಳಿಂದ ಪ್ರಭಾವಿತರಾದ ಜವಾಹರಲಾಲ್ ನೆಹರುರವರು ದಿವಾನರಿಗೆ ಪತ್ರ ಬರೆದು 'ಕಾಂಗ್ರೆಸ್ ಕಾರ್ಯಕ್ರಮಗಳ ಬಗ್ಗೆ ಮೈಸೂರು ಸರಕಾರ ಅನುಸರಿಸುತ್ತಿರುವ ದಮನಕಾರಿ ನೀತಿ ಸರಿಯಲ್ಲವೆಂದು ಎಚ್ಚರಿಸಿದರು.

ರಾಷ್ಟ್ರದಾದ್ಯಂತ ಸ್ವಾತಂತ್ರ್ಯ ಹೋರಾಟಕ್ಕಾಗಿ ಪ್ರಚಾರ ಕಾರ್ಯ ಕೈಗೊಂಡಿದ್ದ ಅಖಿಲ ಭಾರತ ಪ್ರಜಾ ಪರಿಷತ್ತಿನ ಅಧ್ಯಕ್ಷರಾದ ಡಾ. ಪಟ್ಟಾಭಿಸೀತಾರಾಮಯ್ಯರವರು ಮೈಸೂರು ಪ್ರಾಂತ್ಯಕ್ಕೆ ಆಗಮಿಸಿದಾಗ ೧೯೩೭ರ ಡಿಸಂಬರ್ ೨೫ ರಂದು ಮಧ್ಯಾಹ್ನ ೧೨ ಗಂಟೆಗೆ ಮದ್ದೂರು ಟೌನ್‌ನ ಮೂಡಶೆಟ್ಟರ ತೋಪಿನಲ್ಲಿ ಸೇರಿದ್ದ ೩೦೦೦ ಜನರ ಸಭೆಯಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗೆ ಒಗ್ಗೂಡಿ ಹೋರಾಡುವುದು ಅತ್ಯಗತ್ಯವೆಂದು ಕರೆಕೊಟ್ಟರು.

ಕಾಂಗ್ರೆಸ್ ನಾಯಕರು ೧೯೩೮ರ ಜನವರಿ ೨೬ ರಂದು ಮೈಸೂರು ಸಂಸ್ಥಾನದಾದ್ಯಂತ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಕರೆಕೊಟ್ಟರು. ಅಲ್ಲದೆ ಈ ಕಾರ್ಯಕ್ರಮದ ಅಂಗವಾಗಿ ಸಂಸ್ಥಾನದಾದ್ಯಂತ ರಾಷ್ಟ್ರೀಯ ಧ್ವಜವನ್ನು ಹಾರಿಸಲು ಯೋಜಿಸಲಾಯಿತು. ಕಾಂಗ್ರೆಸ್‌ನ ಕಾರ್ಯಕ್ರಮವನ್ನು

ದಿವಾನರು ಮಟ್ಟಹಾಕಲು ಪ್ರಯತ್ನಿಸಿದರು. ಅಲ್ಲದೆ ಟಿ.ಸಿದ್ದಲಿಂಗಯ್ಯ, ಎನ್.ಎಸ್.ಹರ್ಡೇಕರ್, ಹೆಚ್.ಕೆ.ವೀರಣ್ಣಗೌಡ, ಹೆಚ್.ಸಿ.ದಾಸಪ್ಪ ಮೊದಲಾದ ನಾಯಕರುಗಳಿಗೆ ನೋಟಿಸ್ ಜಾರಿಗೊಳಿಸಿ ಸಾರ್ವಜನಿಕ ಸ್ಥಳಗಳಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಬಾರದು, ಸಭೆ ಸೇರಬಾರದು, ಭಾಷಣ ಮಾಡಬಾರದು ಎಂದು ನಿರ್ಬಂಧಿಸಿತು ಆದರೂ ಸುಬ್ಬಮ್ಮ ಜೋಯಿಸ್, ತಗಡೂರು ರಾಮಚಂದ್ರರಾಯ ಮತ್ತು ಅಗರಂ ರಂಗಯ್ಯರವರು ಸೇರಿ ಜನವರಿ ೨೬ರಂದು ಮೈಸೂರಿನಲ್ಲಿ ತ್ರಿವರ್ಣ ಧ್ವಜವನ್ನು ಹಾರಿಸಿದಾಗ ಅವರನ್ನು ದಸ್ತಗಿರಿ ಮಾಡಲಾಯಿತು. ಈ ರೀತಿ ದಸ್ತಗಿರಿಯಾದವರಲ್ಲಿ ಸುಬ್ಬಮ್ಮರವರು ಪ್ರಪ್ರಥಮ ಮಹಿಳೆಯೆಂದು ಪರಿಗಣಿಸಲಾಗಿದೆ. ಪರಿಣಾಮವಾಗಿ ಸರಕಾರದ ದಮನಕಾರಿ ನೀತಿಯಿಂದ ಎಚ್ಚೆತ್ತ ಕಾಂಗ್ರೆಸ್ ನಾಯಕರು ಮೈಸೂರು ನಗರದಿಂದ ಹೊರಗೆ ಮೈಸೂರು ಸಂಸ್ಥಾನದ ಕಾಂಗ್ರೆಸ್ ಅಧಿವೇಶನವನ್ನು ಕರೆಯಲು ತೀರ್ಮಾನಿಸಿದರು.

೧೯೩೮ನೇ ಜನವರಿಯಲ್ಲಿ ಚಿತ್ರದುರ್ಗದಲ್ಲಿ ಸಭೆ ಸೇರಿದ್ದ ಮೈಸೂರು ಕಾಂಗ್ರೆಸ್ ಬೋರ್ಡ್ ಸದಸ್ಯರು ಮುಂದಿನ ಅಧಿವೇಶನವನ್ನು ನೀರು, ಸಾರಿಗೆ, ಸೌಲಭ್ಯ ಮತ್ತು ಛತ್ರಗಳ ಸೌಕರ್ಯಗಳಿರುವ ಮೈಸೂರು ಜಿಲ್ಲೆಯ ನಂಜನಗೂಡು ಅಥವಾ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯ ಯಾವುದಾದರೂ ಒಂದು ಕಡೆ ಸಭೆ ನಡೆಸಲು ತೀರ್ಮಾನಿಸಿದರು.

ಪ್ರಜಾಪಕ್ಷದ ಅಧ್ಯಕ್ಷರಾದ ಡಿ.ಎಸ್.ಮಲ್ಲಪ್ಪನವರು ಸಂವಿಧಾನಾತ್ಮಕ ಸುಧಾರಣೆಗೆ ಒತ್ತಾಯಿಸಿದ್ದರಿಂದ ೧೯೩೮ರಲ್ಲಿ ಮೂರು ನಿರ್ಣಯಗಳನ್ನು ವಿಧಾಯಕ ಸಭೆಯಲ್ಲಿ ತರಲಾಯಿತು. ಸದಸ್ಯರಾದ ಪಿ.ಸುಬ್ಬಯ್ಯಶೆಟ್ಟಿಯವರು ನಿರ್ಣಯವನ್ನು ತಂದು ಸಂಸ್ಥಾನದಲ್ಲಿ ಮಹಾರಾಜರು, ಅಧಿಕಾರಿಗಳು, ಮತ್ತು ಅಧಿಕಾರೇತರರನ್ನು ಒಳಗೊಂಡ ಸಮಿತಿಯನ್ನು ರಚಿಸಿ ಇನ್ನು ಹೆಚ್ಚಿನ ರಾಜಕೀಯ ಸುಧಾರಣೆಯನ್ನು ಆದಷ್ಟು ಬೇಗ ತರಬೇಕೆಂದು ಒತ್ತಾಯಿಸಿದರು. ಎರಡು ಸದನಗಳಲ್ಲೂ ಸುಧಾರಣೆಯನ್ನು ಬಯಸಿ ಒತ್ತಡ ಹೇರಿದ್ದರಿಂದ ಸರಕಾರ ಸಂವಿಧಾನ ಸುಧಾರಣೆಯನ್ನು ತರಲು ಕೆ.ಆರ್. ಶ್ರೀನಿವಾಸ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ಇಬ್ಬರು ಅಧಿಕಾರಿಗಳು ಮತ್ತು ೧೨ ಮಂದಿ ಅಧಿಕಾರೇತರ ಸದಸ್ಯರ ವಿಶೇಷ ಸಮಿತಿಯನ್ನು ರಚಿಸಲಾಯಿತು. ಈ ಸಮಿತಿಗೆ ಎರಡು ಸದನಗಳ ಅಧಿಕಾರ, ಕಾರ್ಯವ್ಯಾಪ್ತಿ, ಮತದಾನ, ಮತದಾರರು, ಎರಡು ಸದನಗಳ ಸಂಬಂಧ, ಸದಸ್ಯರ ಸೌಲಭ್ಯಗಳು, ಅಲ್ಪಸಂಖ್ಯಾತರ ಹಿತಾಸಕ್ತಿ ರಕ್ಷಣೆ, ಇವೇ ಮೊದಲಾದ ಅಂಶಗಳ ಮೇಲೆ ಸುಧಾರಣೆಗಳನ್ನು ತರಲು ವರದಿ ಸಲ್ಲಿಸುವಂತೆ ಸರ್ಕಾರ ಕೇಳಿತು. ಈ ಸಮಿತಿಯಲ್ಲಿ ಅಧಿಕಾರೇತರ ೧೨ ಮಂದಿ ಸದಸ್ಯರಲ್ಲಿ ಕೇವಲ ೪ ಮಂದಿ ಕಾಂಗ್ರೆಸ್ಸಿಗರನ್ನು ಮಾತ್ರ ಸದಸ್ಯರನ್ನಾಗಿ ನೇಮಿಸಿದ್ದರಿಂದ ಕಾಂಗ್ರೆಸ್ ಈ ಸಮಿತಿಯಿಂದ ನ್ಯಾಯ ದೊರಕುವುದಿಲ್ಲವೆಂದು ತನ್ನ ವಿರೋಧವನ್ನು ವ್ಯಕ್ತಪಡಿಸಿತು. ಇದರಿಂದ ಎಚ್ಚೆತ್ತ ಸರ್ಕಾರ ಸುಧಾರಣೆ ಸಮಿತಿಯ ವಿರುದ್ಧ ಸಾರ್ವಜನಿಕ ಭಾಷಣಗಳನ್ನು ಮಾಡಕೂಡದೆಂದು ಕಾಂಗ್ರೆಸ್ ನಾಯಕರ ಮೇಲೆ ಪ್ರತಿಬಂಧಕಾಜ್ಞೆಯನ್ನು ಜಾರಿ ಮಾಡಲಾಯಿತು.

## ಹರಿಪುರ ಕಾಂಗ್ರೆಸ್ ಅಧಿವೇಶನದ ಪ್ರಭಾವ:

ಗುಜರಾತ್‌ನ ಹರಿಪುರದಲ್ಲಿ ಸುಭಾಷ್‌ಚಂದ್ರ ಬೋಸ್‌ರವರ ಅಧ್ಯಕ್ಷತೆಯಲ್ಲಿ ೫೧ನೇ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ ೧೯೩೮ರ ಫೆಬ್ರವರಿಯಲ್ಲಿ ಜರುಗಿತು. ಈ ಅಧಿವೇಶನದಲ್ಲಿ ನೆಹರು, ರಾಜಾಜಿ ಮೊದಲಾದ ರಾಷ್ಟ್ರ ನಾಯಕರು ದೇಶಿಯ ಸಂಸ್ಥಾನಗಳಲ್ಲಿನ ರಾಜಕೀಯ ಚಟುವಟಿಕೆಗಳಿಗೆ ರಾಷ್ಟ್ರೀಯ ಕಾಂಗ್ರೆಸ್‌ನ ಹೆಸರನ್ನು ಬಳಸಬಾರದೆಂಬ ನಿರ್ಣಯ ಕೈಗೊಳ್ಳಲಾಗಿತ್ತು ಆದರೆ ಅನೇಕ ದೇಶಿಯ ಸಂಸ್ಥಾನಗಳ ಪ್ರತಿನಿಧಿಗಳೆಲ್ಲಾ ಸಂಘಟಿತರಾಗಿ ನಿರ್ಣಯವನ್ನು ತಿದ್ದುಪಡಿ ಗೊಳಪಡಿಸಿದರು. ಇದಕ್ಕೆ ತಿದ್ದುಪಡಿ ತರುವಲ್ಲಿ ಮೈಸೂರು ಪ್ರಾಂತ್ಯದ ಕಾಂಗ್ರೆಸ್ ಮುಖಂಡರಾದ ಡಾ. ಪಾರ್ಥನಾರಾಯಣ ಪಂಡಿತ, ಕೆ.ಸಿ.ರೆಡ್ಡಿ, ಟಿ.ಸಿದ್ದಲಿಂಗಯ್ಯ, ಕೆ.ಹನುಮಂತಯ್ಯ ಮೊದಲಾದವರು ಪಾತ್ರ ಗಮನಾರ್ಹವಾದುದ್ದು.

ಸುಭಾಷ್ ಚಂದ್ರಬೋಸ್‌ರವರು ಹರಿಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷಿಯ ಭಾಷಣ ಮಾಡುತ್ತ 'ಸಂಸ್ಥಾನದ ಪ್ರಜೆಗಳ ಚಳವಳಿಯಲ್ಲಿ ಕಾಂಗ್ರೆಸ್ ಇನ್ನೂ ಹೆಚ್ಚಿನ ರೀತಿಯಲ್ಲಿ ಭಾಗವಹಿಸಬೇಕೆಂಬುದು ನನ್ನಂತೆ ಅಭಿಪ್ರಾಯ ಪಡುವವರು ಕಾಂಗ್ರೆಸ್‌ನಲ್ಲಿ ಇನ್ನೂ ಇದ್ದಾರೆ ಎಂದು ಹೇಳುವುದರ ಮೂಲಕ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ರಾಷ್ಟ್ರದಾದ್ಯಂತ ದೇಶಿಯ ಸಂಸ್ಥಾನಗಳ ಸ್ವಾತಂತ್ರ್ಯ ಹೋರಾಟಗಳಿಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿತು. ಇದಕ್ಕೆ ಮೈಸೂರು ಸಂಸ್ಥಾನದ ರಾಜಕೀಯ ಚಟುವಟಿಕೆಗಳು ಸಾಕಷ್ಟು ಕಾರಣವಾದವು.

ಹರಿಪುರ ಕಾಂಗ್ರೆಸ್ ಅಧಿವೇಶನದ ರೀತಿ ದೇಶಿಯ ಸಂಸ್ಥಾನಗಳಲ್ಲೂ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಶಾಖೆಗಳಿರಬಹುದು. ಆದರೆ ಸತ್ಯಾಗ್ರಹ, ಕಾನೂನು ಭಂಗ ಚಳವಳಿಗಳನ್ನು ನಡೆಸಬೇಕಾದರೆ ರಾಜಕೀಯ ಪಕ್ಷವನ್ನು ಸ್ಥಾಪನೆ ಮಾಡಿಕೊಳ್ಳಬೇಕು, ಈ ಸಂಸ್ಥೆಗೆ ಸದಸ್ಯರಾಗುವವರು ರಾಷ್ಟ್ರ ಮಹಾಸಭೆಗೆ ಸದಸ್ಯರಾಗಲೇ ಬೇಕು ಎಂಬ ನಿರ್ಬಂಧ ವಿಧಿಸಲಾಯಿತು. ಪರಿಣಾಮವಾಗಿ ಹರಿಪುರ ಅಧಿವೇಶನದ ನಿರ್ಣಯ ದೇಶಿಯ ಸಂಸ್ಥಾನಗಳಲ್ಲಿ ಸ್ವತಂತ್ರ ರಾಜಕೀಯ ಸಂಸ್ಥೆಗಳು ಹುಟ್ಟಿಕೊಳ್ಳಲು ಕಾರಣವಾಯಿತು. ಅಲ್ಲದೆ ದೇಶಿಯ ಸಂಸ್ಥಾನಗಳಲ್ಲಿನ ಚಳವಳಿಗಳಿಗೆ ಒಂದು ಹೊಸ ಚೈತನ್ಯ ತಂದುಕೊಟ್ಟಿತು.

ಹರಿಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ಮೈಸೂರಿನ ನಾಯಕರು ಗಾಂಧಿ ಮತ್ತು ನೆಹರುರವರೊಡನೆ ಮೈಸೂರಿನ ರಾಜಕೀಯ ವಿದ್ಯಮಾನಗಳನ್ನು ಮಹಾರಾಜರ ಆಡಳಿತದ ದೋಷಗಳನ್ನು ಚರ್ಚಿಸಿ ಇಂತಹದೇ ಮಾದರಿಯ ಚಳವಳಿಯನ್ನು ನಡೆಸಲು ಅನುಮತಿ ಪಡೆದು ಬಂದಿದ್ದರು. ಹೀಗೆ ಹರಿಪುರ ಕಾಂಗ್ರೆಸ್ ಅಧಿವೇಶನ ಇಡೀ ರಾಷ್ಟ್ರಕ್ಕೆ ಸಂಬಂಧಿಸಿದ್ದಾಗಿದ್ದರೆ, ಶಿವಪುರ ಕಾಂಗ್ರೆಸ್ ಅಧಿವೇಶನ ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದ್ದಾಗಿದೆ. ಹರಿಪುರ ಕಾಂಗ್ರೆಸ್ ಅಧಿವೇಶನಕ್ಕೆ ಕೀರ್ತಿ ಶ್ರೇಯಸ್ಸು ಬಂದಂತೆ ಶಿವಪುರ ಅಧಿವೇಶನಕ್ಕೂ ರಾಷ್ಟ್ರಮಟ್ಟದಲ್ಲಿ ಕೀರ್ತಿ ಶ್ರೇಯಸ್ಸು ಬಂದದ್ದು ಇತಿಹಾಸದಲ್ಲಿ ದಾಖಲಾಗಿರುವ ಸಂಗತಿಯಾಗಿದೆ.

## ಮೈಸೂರು ಕಾಂಗ್ರೆಸ್ ಸ್ಥಾಪನೆ:

೧೯೩೮ರ ಫೆಬ್ರವರಿ ೨೮ರಂದು (ಮಹಾಶಿವರಾತ್ರಿ ದಿನ) ಟಿ.ಸಿದ್ದಲಿಂಗಯ್ಯ ನವರ ಅಧ್ಯಕ್ಷತೆಯಲ್ಲಿ ಮೈಸೂರಿನಲ್ಲಿ ಮಿರ್ಲೆ ಲಕ್ಷ್ಮೀನಾರಾಯಣರಾವ್‌ರವರ ಮನೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಸಭೆ ಸೇರಿದರು. ಸಂಸ್ಥಾನದ ಎಂಟು ಜಿಲ್ಲೆಗಳಿಂದ ಪ್ರತಿನಿಧಿಗಳು ಭಾಗವಹಿಸಿದ್ದರು. (ಮೈಸೂರು, ಬೆಂಗಳೂರು, ಕೋಲಾರ, ತುಮಕೂರು, ಹಾಸನ, ಕಡೂರು, ಶಿವಮೊಗ್ಗ ಮತ್ತು ಚಿತ್ರದುರ್ಗ. ಇಂದಿನ ಮಂಡ್ಯ ಜಿಲ್ಲೆ ಅಂದಿನ ಮೈಸೂರು ಜಿಲ್ಲೆಯ ಭಾಗವಾಗಿತ್ತು) ಅಂದು ಸಂಜೆ ಐದು ಗಂಟೆಯವರೆಗೆ ದೀರ್ಘವಾಗಿ ಚರ್ಚೆಸಿದ ನಂತರ, ಅಧಿಕೃತವಾಗಿ ಮೈಸೂರು ಕಾಂಗ್ರೆಸ್ ಪಕ್ಷ ಸ್ಥಾಪನೆ ಯಾಯಿತು.



## ಶಿವಪುರದಲ್ಲಿ ಅಧಿವೇಶನ ನಡೆಸಲು ತೀರ್ಮಾನ:

ಮೈಸೂರಿನಲ್ಲಿ ಸಾಹುಕಾರ್ ಚನ್ನಯ್ಯರವರ ಮನೆಯಲ್ಲಿ ಸಭೆ ಸೇರಿದ್ದ ಕಾಂಗ್ರೆಸ್ ನಾಯಕರಾದ ಪಿ.ತಿರುಮಲೆಗೌಡ, ಇಂಡುವಾಳು ಹೊನ್ನಯ್ಯ, ಪಾಲಹಳ್ಳಿ ಸೀತಾರಾಮಯ್ಯ, ಮಳವಳ್ಳಿವೀರಪ್ಪ, ಎ.ಜಿ.ಬಂದೀಗೌಡ, ಎಚ್.ಸಿ.ದಾಸಪ್ಪ, ನಂಜನಗೂಡಿನ ವಿಶ್ವೇಶ್ವರಗೌಡ, ಎಚ್.ಕೆ.ವೀರಣ್ಣಗೌಡ ಮೊದಲಾದವರು ನಂಜನಗೂಡು ಅಥವಾ ಶ್ರೀರಂಗಪಟ್ಟಣದ ಪಶ್ಚಿಮವಾಹಿನಿಯ ಯಾವುದಾದರೂ ಒಂದು ಕಡೆ ಅಧಿವೇಶನ ನಡೆಸಲು ನಿರ್ಧರಿಸಿದರು. ಆದರೆ ಇದಕ್ಕೆ ನಂಜನಗೂಡಿನಲ್ಲಿ ಅಧಿವೇಶನ ನಡೆಸುವುದಕ್ಕೆ ಕೆ.ವಿಶ್ವೇಶ್ವರಗೌಡರು ತಮ್ಮಿಂದ ಸಾಧ್ಯವಿಲ್ಲವೆಂದು ತಿಳಿಸಿದರೆ, ಶ್ರೀರಂಗಪಟ್ಟಣದ ಪಶ್ಚಿಮ ವಾಹಿನಿಯಲ್ಲಿ ಅಧಿವೇಶನ ನಡೆಸಲು ವಕೀಲರಾದ ಎ.ಜಿ.ಬಂದೀಗೌಡರು ಆಸಕ್ತಿ ತೋರಲಿಲ್ಲ. ಕಾರಣ ಒಂದುವರೆ ತಿಂಗಳು ತಮ್ಮ ವಕೀಲ ವೃತ್ತಿಯನ್ನು ತ್ಯಜಿಸಿ ಬೇರೆ ಕೆಲಸ ಕೈಗೊಳ್ಳುವುದಕ್ಕೆ ಸಾಧ್ಯವಿರಲಿಲ್ಲ. ಕಾಂಗ್ರೆಸ್ ಮುಖಂಡರು ಅಧಿವೇಶನವನ್ನು (ರಾಷ್ಟ್ರಕೂಟ) ಎಲ್ಲಿ, ಯಾವಾಗ, ನಡೆಸಬೇಕು ಎಂಬ ಗೊಂದಲದಲ್ಲಿದ್ದಾಗ ಇರ್ವಿನ್ ನಾಲಾ ಚಳವಳಿಯ ನಾಯಕತ್ವವನ್ನು ವಹಿಸಿಕೊಂಡು ಯಶಸ್ವಿಗೊಳಿಸಿದ್ದ ಎಚ್.ಕೆ. ವೀರಣ್ಣಗೌಡರು ಅವಕಾಶವನ್ನು ಕೊಟ್ಟರೆ ಮದ್ದೂರಿನ ಶಿವಪುರದಲ್ಲಿ ಅಧಿವೇಶನವನ್ನು ನಡೆಸಿ ಕೊಡುವುದಾಗಿ ತಿಳಿಸುತ್ತಾರೆ. ಕಾಂಗ್ರೆಸ್ ಮುಖಂಡರು ಹರಿಪುರ ಕಾಂಗ್ರೆಸ್ ಅಧಿವೇಶನವನ್ನು ಮಾದರಿಯಾಗಿಟ್ಟು ಕೊಂಡು ಶಿವಪುರ ಅಧಿವೇಶನವನ್ನು ನಡೆಸಲು ಸಮ್ಮತಿಸುತ್ತಾರೆ. ಇದರಂತೆ ಮೈಸೂರು ಕಾಂಗ್ರೆಸ್‌ನ ಪ್ರಥಮ ಅಧಿವೇಶನ ಮಂಡ್ಯ ಜಿಲ್ಲೆಯ ಮದ್ದೂರಿನ ಬಳಿಯ ಶಿವಪುರದಲ್ಲಿ ೧೯೩೮ರ ಏಪ್ರಿಲ್ ೧೧ ರಿಂದ ೧೩ರವರೆಗೆ ನಡೆಸಲು ಯೋಜಿಸಲಾಯಿತು. ಇದನ್ನೇ ಇತಿಹಾಸದಲ್ಲಿ 'ಶಿವಪುರಧ್ವಜ ಸತ್ಯಾಗ್ರಹ' ಅಥವಾ 'ಶಿವಪುರದ ಕಾಂಗ್ರೆಸ್ ಅಧಿವೇಶನ/ರಾಷ್ಟ್ರಕೂಟ' ಎಂದು ಕರೆಯುತ್ತೇವೆ. ಶಿವಪುರ ಹೆಸರನ್ನು ಆಯ್ಕೆ ಮಾಡುವಾಗ ಸೌಕರ್ಯಗಳ ಜೊತೆಗೆ ಹರಿಪುರ ಹೆಸರಿನ ಛಾಯೆಯನ್ನು ಕಾಣಬಹುದು.

ಕಾಂಗ್ರೆಸ್ ಮುಖಂಡರು ಶಿವಪುರದಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸುವುದರ ಮೂಲಕ ಮೈಸೂರು ಕಾಂಗ್ರೆಸ್‌ನ ಧ್ಯೇಯ ಧೋರಣೆಗಳನ್ನು ನಿರ್ಧರಿಸಲು, ಸರ್ಕಾರದ ಏಕನಾಯಕತ್ವದ ದಬ್ಬಾಳಿಕೆಯನ್ನು ಕೊನೆಗಾಣಿಸಲು,

ಜನತೆಯ ಬೇಡಿಕೆ ಏನು? ಜನತೆಗಾಗಿ ಸರಕಾರ ಏನು ಮಾಡಿದೆ? ಎಂಬುದನ್ನು ತಿಳಿಯಲು, ಜನಸಾಮಾನ್ಯರಲ್ಲಿ ಸ್ವಾತಂತ್ರ್ಯದ ಅಗತ್ಯವನ್ನು ಮನಗಾಣಿಸಲು ಸತ್ಯಾಗ್ರಹಿಗಳ ಪಡೆಯನ್ನು ಸಂಘಟಿಸಲು, ಬ್ರಿಟಿಷರ ಆಡಳಿತದ ಧೋರಣೆಯನ್ನು ಬದಲಾಯಿಸಲು, ಸರ್ವಜನರ ಒಳಿತಿಗಾಗಿ ಶ್ರಮಿಸುವ, ಚಿಂತಿಸುವ ಪ್ರಜಾಪ್ರಭುತ್ವ ಮಾದರಿಯ ಜವಾಬ್ದಾರಿಯುತ ಸರ್ಕಾರವನ್ನು ಸ್ಥಾಪಿಸುವ ಉದ್ದೇಶವನ್ನಿಟ್ಟುಕೊಂಡಿದ್ದರು.

ಅಧಿವೇಶನ ಜರುಗಲು ಕೇವಲ ಒಂದು ತಿಂಗಳ ಕಾಲಾವಕಾಶವಿದ್ದರಿಂದ ಶಿವಪುರ ರಾಷ್ಟ್ರಕೂಟದ ಸಿದ್ಧತೆ ಭರದಿಂದ ನಡೆಯಿತು. ಸಂಯುಕ್ತ ಕರ್ನಾಟಕ, ವಿಶ್ವ ಕರ್ನಾಟಕ, ನವಜೀವನ, ಜನವಾಣಿ, ಇಂಡಿಯನ್ ಎಕ್ಸ್‌ಪ್ರೆಸ್, ದಿ ಹಿಂದೂ ಪತ್ರಿಕೆಗಳು ಶಿವಪುರ ರಾಷ್ಟ್ರಕೂಟದ ಬಗ್ಗೆ ವಿವರವಾದ ಲೇಖನಗಳನ್ನು ಪ್ರಕಟಿಸುವುದರ ಮೂಲಕ ಮೈಸೂರು ಸಂಸ್ಥಾನದಾದ್ಯಂತ ಜನರಿಗೆ ವಿಷಯವನ್ನು ಪ್ರಚಾರಗೊಳಿಸಲು ಹೆಚ್ಚಿನ ಗಮನ ಕೊಟ್ಟವು. ಕನ್ನಡದ ಹಿರಿಯ ಪತ್ರಕರ್ತರಾದ ಪಾಲಹಳ್ಳಿರಾಮಯ್ಯನವರು 'ತಾಯಿನಾಡು ಪತ್ರಿಕೆ'ಯ ಮೂಲಕ ಶಿವಪುರ ಧ್ವಜ ಸತ್ಯಾಗ್ರಹವನ್ನು ಬೆಂಬಲಿಸಿದ್ದರು.

ಮದ್ದೂರಿನ ಶಿವಪುರದಲ್ಲಿ ರಾಷ್ಟ್ರಕೂಟ ನಡೆಯದಂತೆ ತಡೆಗಟ್ಟಲು ಸರ್ಕಾರದವರು ಬಹಳ ಪ್ರಯತ್ನ ಮಾಡಿದರು. ಅಲ್ಲದೆ ಮದ್ದೂರು ತಾಲ್ಲೂಕಿನ ಅಮಲ್ದಾರರು ಮದ್ದೂರಿಗೆ ಬದಲಾಗಿ ನಂಜನಗೂಡಿನಲ್ಲಿ ರಾಷ್ಟ್ರಕೂಟ ನಡೆಸುವುದಾದರೆ ತಾವು ಅಧಿವೇಶನಕ್ಕೆ ಬೇಕಾದ ಸಹಾಯ ಒದಗಿಸುವುದಾಗಿ ಹೇಳಿದರು. ಇದಕ್ಕೆ ಪ್ರತಿಕ್ರಿಯಿಸಿದ ಎಚ್.ಕೆ.ವೀರಣ್ಣಗೌಡರವರು ಒಬ್ಬ ಅಮಲ್ದಾರನ ನೆರವಿನಿಂದ ರಾಷ್ಟ್ರಕೂಟ ನಡೆಯುವುದಾದರೆ ಅಂತಹ ರಾಷ್ಟ್ರಕೂಟವೇ ಬೇಡವೆಂದು ಘೋಷಿಸಿದರು.

**ಆಯಕಟ್ಟಿನ ಸ್ಥಳವಾಗಿ ಶಿವಪುರ:**

ಕಾಂಗ್ರೆಸ್ ನಾಯಕರು ಅಧಿವೇಶನ ನಡೆಸುವುದಕ್ಕೆ ಎಲ್ಲಾ ರೀತಿಯಲ್ಲೂ ಶಿವಪುರ ಆಯಕಟ್ಟಿನ ಸ್ಥಳದಲ್ಲಿದೆಯೆಂದು ಪರಿಗಣಿಸಿ ಆಯ್ಕೆ ಮಾಡಿದ್ದರು. ಮದ್ದೂರು ಬಳಿಯಿರುವ ಶಿವಪುರಕ್ಕೆ ಎಂಟು ಕಡೆಯಿಂದ ರಸ್ತೆಗಳ ಸೌಲಭ್ಯವಿದೆ. (ಕಸುಬಾ ಕೋಡಿಹಳ್ಳಿ ಕಡೆಯಿಂದ ಬರುವ ಕಾಲುದಾರಿ, ವೈದ್ಯನಾಥಪುರದ ಕಡೆಯಿಂದ ಬರುವ ಹೊಳೆ ಹನುಮಂತರಾಯ ದೇವಾಲಯದ ರಸ್ತೆ, ಹಲ್ಲೆಗೆರೆ, ಕೊಪ್ಪದ ಕಡೆಯಿಂದ ಬರುವ ರಸ್ತೆ, ತುಮಕೂರು, ಕುಣಿಗಲ್, ಹುಲಿಯೂರುದುರ್ಗ ಕಡೆಯಿಂದ ಬರುವ ರಸ್ತೆ) ಅಲ್ಲದೆ ಮೈಸೂರು ಮತ್ತು ಬೆಂಗಳೂರು ನಗರಗಳ ನಡುವೆ ಹಾದು ಹೋಗುವ ಹೆದ್ದಾರಿ ಮತ್ತು ರೈಲುಮಾರ್ಗ, ಸಂಸ್ಥಾನದ ಎಲ್ಲಾ ಕಡೆಯಿಂದಲೂ ಚಳವಳಿಗಾರರು ಆಗಮಿಸುವುದಕ್ಕೆ ರಸ್ತೆ ಮತ್ತು ರೈಲ್ವೆ ಮಾರ್ಗಗಳ ಸೌಲಭ್ಯವಿರುವುದರಿಂದ ಪಕ್ಕದಲ್ಲೇ ಶಿಂಷಾ ನದಿ ಹರಿಯುವುದರಿಂದ ನೀರಿನ ಸೌಕರ್ಯದ ಕೊರತೆ ಕಂಡು ಬರುವುದಿಲ್ಲ ಎಷ್ಟು ಜನರು ಬಂದರೂ ಸ್ಥಳಾವಕಾಶದ ಕೊರತೆಯಾಗಲಾರದು, ಧ್ವಜಸ್ಥಂಭವನ್ನು ನೆಟ್ಟರೆ ಅದರ ಮೇಲಿನ ಬಾವುಟ ಸುತ್ತ–ಮುತ್ತಲಿನ ಪ್ರದೇಶದ ಐದು ಮೈಲಿಯವರೆಗೂ ಕಾಣುವಂತಿರಬೇಕು, ಮೈಸೂರು ಕಾಂಗ್ರೆಸ್ ಈ ಅಧಿವೇಶನವನ್ನು ಸರ್ಕಾರದ ವಿರುದ್ಧ ನಡೆಸುತ್ತಿದ್ದುದರಿಂದ ಸರ್ಕಾರದ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಈ ಸಮ್ಮೇಳನವನ್ನು ನೆರವೇರಿಸಲು ಸಾಧ್ಯವಿರಲಿಲ್ಲ. ಆದ್ದರಿಂದ ಎಚ್.ಕೆ. ವೀರಣ್ಣಗೌಡರು ಶಿವಪುರದ ಅಬಕಾರಿ ಗುತ್ತಿಗೆದಾರರೂ, ಭೂಮಾಲೀಕರೂ ಆದ ತಿರುಮಲೇಗೌಡರನ್ನು ಅವರ ಖಾಸಗಿ ಜಮೀನಿನಲ್ಲಿ ಅಧಿವೇಶನ ನಡೆಸಲು ಒಪ್ಪಿಸಿದರು.

ಮೈಸೂರು ರಾಜಪ್ರಭುತ್ವದೊಡನೆ ಅಥವಾ ಬ್ರಿಟಿಷರೊಡನೆ ಯಾವುದೇ ಸಂಬಂಧವನ್ನು ಹೊಂದಿರದ ಪಿ. ತಿರುಮಲೇಗೌಡರು ಧ್ವಜ ಸತ್ಯಾಗ್ರಹದ ವೇದಿಕೆಗೆ ಮತ್ತು ಸಭೆ ನಡೆಸಲು ತಮ್ಮ ಮನೆಗೆ ಹೊಂದಿ ಕೊಂಡಂತಿದ್ದ ವಿಶಾಲವಾದ ಎಂಟು/ಹತ್ತು ಎಕರೆ ಕೃಷಿ ಭೂಮಿಯನ್ನು ಬಿಟ್ಟು ಕೊಡಲು ನಿರ್ಧರಿಸಿದರು. ಅಲ್ಲದೆ ತಮ್ಮ ಎರಡು ಮನೆಗಳಲ್ಲಿ ಒಂದನ್ನು ರಾಷ್ಟ್ರಕೂಟದ ಕಚೇರಿಯನ್ನಾಗಿ, ಮತ್ತೊಂದು ಮನೆಯನ್ನು ಸ್ವಾಗತಗಾರರ ಮತ್ತು ಸ್ವಯಂ ಸೇವಕಿಯರು ಉಳಿದುಕೊಳ್ಳಲು ಬಿಟ್ಟು ಕೊಟ್ಟಿದ್ದರು. ವೇದಿಕೆಗೆ ಹೊಂದಿ ಕೊಂಡಂತೆ ಭೋಜನ ಶಾಲೆ ಮತ್ತು ಮನೆಯ ಮುಂದೆ ವಿಷಯ ನಿಯಾಮಕ ಸಮಿತಿಗೆ ಸ್ಥಳಾವಕಾಶವನ್ನು ಮಾಡಿಕೊಟ್ಟು ಹೃದಯ ವೈಶಾಲತೆ ಮೆರೆದರು. ಸರ್ಕಾರಕ್ಕೆ ವಿರುದ್ಧವಾಗಿ ವರ್ತಿಸಲು ಹೆದರುತ್ತಿದ್ದ ಅಂದಿನ ಕಾಲದಲ್ಲಿ ಅಧಿವೇಶನವನ್ನು ನಡೆಸಲು ತಮ್ಮ ಜಮೀನು ಮತ್ತು ಮನೆಯನ್ನು ಬಿಟ್ಟುಕೊಡಲು ಮುಂದಾದದ್ದು ತಿರುಮಲೇಗೌಡರ ರಾಷ್ಟ್ರಾಭಿಮಾನದ ದ್ಯೋತಕವೆನ್ನಬಹುದು.

## ಸ್ವಾಗತ ಸಮಿತಿಯ ರಚನೆ:

೧೯೩೮ರ ಮಾರ್ಚ್ ೧೧ ರಂದು ಮಂಡ್ಯದ ಗೋಪಾಲಶೆಟ್ಟರ ಮನೆಯಲ್ಲಿ ಸಭೆ ಸೇರಿದ್ದ ಜಿಲ್ಲಾ ಪ್ರತಿನಿಧಿಗಳ ಸದಸ್ಯರು ಶಿವಪುರದ ರಾಷ್ಟ್ರಕೂಟ ಸಿದ್ಧತೆಯ ಸಂಪೂರ್ಣ ಜವಬ್ದಾರಿಯನ್ನು ಎಚ್.ಕೆ.ವೀರಣ್ಣಗೌಡರಿಗೆ ವಹಿಸಲಾಯಿತು. ಅಧಿವೇಶನದ ಯಶಸ್ಸಿಗೆ ಶ್ರಮಿಸ ಬಲ್ಲ ಮತ್ತು ವಿಶ್ವಾಸ ಹೊಂದಿರುವವರನ್ನು ಸ್ವಾಗತ ಸಮಿತಿಯಲ್ಲಿ ನೇಮಿಸಿಕೊಂಡರು. ಸ್ವಾಗತ ಸಮಿತಿಯ ಅಧ್ಯಕ್ಷರು: ಇಲ್ಲಿಯವರೆಗೆ ರಾಜಕೀಯದಿಂದ ದೂರವಿದ್ದು, ಮೈಸೂರಿನಲ್ಲಿ ವರ್ತಕರಾಗಿ ಹಣ ಮತ್ತು ಹೆಸರು ಮಾಡಿದ್ದ ಮಂಡ್ಯದ ಉಮ್ಮಡಹಳ್ಳಿಯ ಸಾಹುಕಾರ್ ಚನ್ನಯ್ಯರವರವರನ್ನು (ಮೈಸೂರಿನ ಜಮ್ನಾಲಾಲ್ ಎಂಬ ಬಿರುದಾಂಕಿತರು) ಸ್ವಾಗತ ಸಮಿತಿಯ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದರು. ಸ್ವಾಗತ ಸಮಿತಿಯ ಉಪಾಧ್ಯಕ್ಷರು: ಹೆಚ್.ಸಿ.ದಾಸಪ್ಪ, ಪಿ.ತಿರುಮಲೇಗೌಡ, ಎಚ್.ಗಂಗಾಧರಯ್ಯ, ಸ್ವಾಗತ ಸಮಿತಿಯ ಕಾರ್ಯದರ್ಶಿಗಳು: ಎಚ್.ಕೆ.ವೀರಣ್ಣಗೌಡ (ಶಿವಪುರ ಅಧಿವೇಶನದ ಸರ್ವಾಧಿಕಾರಿ) ಮತ್ತು ಅರಕೆರೆಯ ವಕೀಲರಾದ ಎ.ಜಿ.ಬಂದೀಗೌಡ ಖಜಾಂಚಿ: ಕೊಪ್ಪದ ಜೋಗಿಗೌಡ, ಮರಿಯಪ್ಪ, ಕೆ.ಎಂ.ಕೃಷ್ಣಪ್ಪಗೌಡ, ಜನರಲ್ ಆಫೀಸರ್ ಕಮಾಂಡಿಂಗ್ ಅಥವಾ ದಳಪತಿ: ಎಂ.ಎಸ್.ಜೋಯಿಸ್‌ರವರು, ಸ್ವಾಗತ ಸಮಿತಿಯ ಸದಸ್ಯರು: ಇಂಡುವಾಳು ಹೆಚ್.ಹೊನ್ನಯ್ಯ, ಪಿ.ವೆಂಕಟಗಿರಿಶೆಟ್ಟಿ, ಎನ್.ಪಿ.ಲಿಂಗೇಗೌಡ, ಎಂ.ಪಿ.ಶ್ರೀನಿವಾಸ ಅಯ್ಯಂಗಾರ್, ಪಿ.ತಮ್ಮಯ್ಯ, ಕೊತ್ತನಹಳ್ಳಿ ಮಲ್ಲೇಗೌಡ ಮತ್ತು ಗುರುದೇವರಹಳ್ಳಿ ಕೆಂಪೇಗೌಡ ಮೊದಲಾದವರು.

ಸ್ವಾಗತ ಸಮಿತಿಯ ಸದಸ್ಯರಾಗುವವರು ನೂರು ರೂಪಾಯಿಗೆ ಕಡಿಮೆ ಇಲ್ಲದೆ ಚಂದಾ ಕೊಡುವುದು ಹಾಗೂ ಐದು ರೂಪಾಯಿ ಕೊಡುವವರು ಪ್ರತಿನಿಧಿಗಳಾಗುವರೆಂದು ಗೊತ್ತು ಪಡಿಸಲಾಯಿತು. ಇದರಂತೆ ಇಡೀ ಸಂಸ್ಥಾನದಾದ್ಯಂತ ೮೦೦ ಮಂದಿ ಸ್ವಾಗತ ಸಮಿತಿಯ ಸದಸ್ಯರು, ೧೩೩೪ ಮಂದಿ ಜನಪ್ರತಿನಿಧಿಗಳು ಭಾಗವಹಿಸಿದ್ದರು. ಪತ್ರಿಕೆಯಲ್ಲಿ ಮಹಾಜನರ ಗಮನ ಸೆಳೆಯುವಂತೆ ಒಂದು ಪ್ರಕಟಣೆ ಹೊರಡಿಸಲಾಯಿತು. 'ಹಿಂದೀ ರಾಷ್ಟ್ರೀಯ ಮಹಾಸಭೆ ಹಾಗೂ ಮೈಸೂರು ಕಾಂಗ್ರೆಸ್‌ನ ಸಭಾಸದಸ್ಯರಾದ ೧೮ ವರ್ಷ ಮೇಲ್ಪಟ್ಟ ಸ್ತ್ರೀ–ಪುರುಷರೆಲ್ಲರೂ ಶಿವಪುರ ರಾಷ್ಟ್ರಕೂಟದ ಪ್ರತಿನಿಧಿಗಳಾಗಬಹುದು.



ಪ್ರತಿನಿಧಿಗಳ ಶುಲ್ಕ ಒಂದು ರೂಪಾಯಿ. ಮಾರ್ಚ್ ೩೧ ರೊಳಗೆ ಮೈಸೂರು ಕಾಂಗ್ರೆಸ್ ಕಚೇರಿಗೆ ಈ ಹಣವನ್ನು ಸಂದಾಯ ಮಾಡಬೆಕು.

ಸ್ವಾಗತ ಸಮಿತಿಯ ಸದಸ್ಯರು ೧೯೩೮ರ ಏಪ್ರಿಲ್ ೧೧ ರಿಂದ ೧೩ ರವರೆಗೆ ಮೂರು ದಿನಗಳು ರಾಷ್ಟ್ರಕೂಟ ನಡೆಸ ಬೇಕೆಂದು ತೀರ್ಮಾನಿಸಿತು. ಮೈಸೂರು ಸಂಸ್ಥಾನದ ಮೊಟ್ಟ ಮೊದಲ ಕಾಂಗ್ರೆಸ್ ಅಧಿವೇಶನವನ್ನು ನಡೆಸುವ ಜವಬ್ದಾರಿಯನ್ನು ಎಚ್.ಕೆ.ವೀರಣ್ಣಗೌಡರಿಗೆ ವಹಿಸಿತು. ಕೇವಲ ೨೦–೨೫ ದಿನಗಳಲ್ಲಿ ಅಧಿವೇಶನಕ್ಕೆ ಎಲ್ಲಾ ರೀತಿಯ ಸಿದ್ಧತೆಗಳನ್ನು ಪೂರ್ಣಗೊಳಿಸಿದ್ದು ಅವರ ಸಾಮರ್ಥ್ಯಕ್ಕೆ ಸಾಕ್ಷಿಯಾಗಿದೆ. ಡಾ. ಡಿ.ಲಿಂಗಯ್ಯರವರು ತಮ್ಮ 'ಶಿವಪುರ ಧ್ವಜ ಸತ್ಯಾಗ್ರಹ' ಕೃತಿಯಲ್ಲಿ ಹೆಚ್.ಕೆ.ವೀರಣ್ಣಗೌಡ ಎಂದರೆ ಶಿವಪುರ ಧ್ವಜ ಸತ್ಯಾಗ್ರಹ, ಶಿವಪುರ ಧ್ವಜ ಸತ್ಯಾಗ್ರಹ ಎಂದರೆ ಹೆಚ್.ಕೆ.ವೀರಣ್ಣಗೌಡ ಎಂದೇ ಪ್ರಸಿದ್ದರಾಗಿದ್ದರೆಂದು ತಿಳಿಸಿದ್ದಾರೆ.

ಹೆಚ್.ಕೆ.ವೀರಣ್ಣಗೌಡರವರು ಅಧಿವೇಶನವನ್ನು ಯಶಸ್ವಿಗೊಳಿಸಲು ಮೈಸೂರು ಕಾಂಗ್ರೆಸ್ ಮುಖಂಡರನ್ನು ಭೇಟಿ ಮಾಡಿ ಪರಸ್ಪರ ಸಮಾಲೋಚಿಸಿದರು. ಅಲ್ಲದೆ ಧ್ವಜ ಸತ್ಯಾಗ್ರಹದಲ್ಲಿ ಪಾಲ್ಗೊಳ್ಳುವಂತೆ ಜನರನ್ನು ಆಹ್ವಾನಿಸಲು ಎಚ್.ಕೆ.ವೀರಣ್ಣಗೌಡರು ತಮ್ಮ ಪತ್ನಿಯೊಂದಿಗೆ ಮೈಸೂರು ಪ್ರಾಂತ್ಯದಾದ್ಯಂತ ಹಾಗೂ ಬಳ್ಳಾರಿಯವರೆಗೂ ಪ್ರವಾಸ ಮಾಡಿದ್ದರೆಂದು ಅವರ ನಿಕಟವರ್ತಿ ಬಿ.ಆರ್.ಶ್ರೀನಿವಾಸಮೂರ್ತಿ ನ್ಯೂಸ್ ಸಂಡೆ ಎಕ್ಸ್‌ಪ್ರೆಸ್‌ಗೆ ತಿಳಿಸಿದ್ದಾರೆ. ಈ ಅಧಿವೇಶನಕ್ಕೆ ಮೈಸೂರು ಸಂಸ್ಥಾನದಾದ್ಯಂತ ಮುಖಂಡರನ್ನು ಆಹ್ವಾನಿಸುವುದು ೩೦ ರಿಂದ ೪೦ ಸಾವಿರ ಜನರನ್ನು ಭಾಗವಹಿಸುವಂತೆ ಮಾಡುವ ಗುರಿ ಹೊಂದಿದ್ದರು. ಸ್ವಾಗತ ಸಮಿತಿಯ ಕಚೇರಿಯನ್ನು ತಿರುಮಲೇಗೌಡರ ಮನೆಯ ಮಹಡಿಯ ಕೊಠಡಿಯಲ್ಲಿ ಸ್ಥಾಪಿಸಲಾಯಿತು. ಇದರ ಮೇಲ್ವಿಚಾರಣೆಯನ್ನು ವಿ.ಎಸ್.ನಾರಾಯಣರಾಯರು ನೋಡಿಕೊಳ್ಳುತ್ತಿದ್ದರು.

## ಅಧಿವೇಶನ ನಡೆಸಲು ಅನುಮತಿಗಾಗಿ ಗಾಂಧಿಯವರ ಭೇಟಿ:

ಮೈಸೂರು ಸಂಸ್ಥಾನದ ಕಾಂಗ್ರೆಸ್ ಸ್ಥಾಪನೆಯ ಬಗ್ಗೆ ಮತ್ತು ಶಿವಪುರ ಧ್ವಜ ಸತ್ಯಾಗ್ರಹದ ಬಗ್ಗೆ ಒಪ್ಪಿಗೆ ಪಡೆಯಲು ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ

ಟಿ.ಸಿದ್ದಲಿಂಗಯ್ಯ ಮತ್ತು ಭೂಪಾಳಂ ಚಂದ್ರಶೇಖರಯ್ಯರವರು ೧೯೩೮ರ ಮಾರ್ಚ್ ೨೩ರಂದು ಗಾಂಧಿಯವರನ್ನು ಉತ್ಕಲದ ಡೆಲಾಂಗಿನಲ್ಲಿ ಗಾಂಧಿ ಸೇವಾ ಸಂಘದ ನಾಲ್ಕನೇ ಅಧಿವೇಶನ ನಡೆಯುತ್ತಿದ್ದಾಗ ಭೇಟಿಯಾದರು. ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಮತ್ತು ಮೈಸೂರು ಕಾಂಗ್ರೆಸ್‌ನ ಸಂಬಂಧದ ಬಗ್ಗೆ ಸ್ಪಷ್ಟತೆಯನ್ನು ಪಡೆಯುವುದಕ್ಕಾಗಿ ಮತ್ತು ಮೈಸೂರು ಸಂಸ್ಥಾನದ ರಾಜಕೀಯ ಪರಿಸ್ಥಿತಿಯನ್ನು ವಿವರಿಸಿ, ಕಾಂಗ್ರೆಸ್ ಅಧಿವೇಶನ ಮಾಡುವ ತಮ್ಮ ಉದ್ದೇಶವನ್ನು ಮುಂದಿಟ್ಟರು. ಅಲ್ಲದೆ ಅಧಿವೇಶನದಲ್ಲಿ ರಾಷ್ಟ್ರ ಧ್ವಜವನ್ನು ಬಳಸುವುದಕ್ಕೆ ಅನುಮತಿ ಕೇಳಿದಾಗ ಇದನ್ನು ಅಖಿಲ ಭಾರತದ ಸಮಸ್ಯೆಯನ್ನಾಗಿ ಮಾಡಬೇಡಿ ಎಂದು ನಿರಾಸಕ್ತಿಯನ್ನು ವ್ಯಕ್ತಪಡಿಸಿದರು.

ಅಲ್ಲದೆ ಗಾಂಧಿ ನಿಮಗಿನ್ನೂ ಚಳವಳಿ ಮಾಡುವ ಶಕ್ತಿ ಇಲ್ಲವೆಂದು ಹೇಳಿದರು. ಇಷ್ಟಕ್ಕೆ ಸುಮ್ಮನಾಗದ ಟಿ.ಸಿದ್ದಲಿಂಗಯ್ಯನವರು ನಮಗೆ ಶಕ್ತಿ ಇಲ್ಲದಿದ್ದರೆ ಇನ್ಯಾರಿಗಿದೆ? ಸೇವಾದಳ ಪ್ರಾರಂಭವಾದುದ್ದೇ ಮೈಸೂರಿನವರಿಂದ (ಮೈಸೂರು ಸಂಸ್ಥಾನದಲ್ಲಿ ಡಾ.ನಾ.ಸು.ಹರ್ಡೀಕರ್‌ರವರು ದೇಶಕ್ಕಾಗಿ ತ್ಯಾಗ ಬಲಿದಾನಗಳೊಡನೆ ಆತ್ಮ ಪೂರ್ವಕವಾಗಿ ದುಡಿಯುವ ಒಂದು ಸಾವಿರ ಯುವಕರ ಸೇವಾದಳವನ್ನು ಸ್ಥಾಪಿಸಿದ್ದರು. ಈ ಸೇವಾದಳದ ಅನೇಕ ಸತ್ಯಾಗ್ರಹಿಗಳು ಅನೇಕ ಸತ್ಯಾಗ್ರಹಗಳಿಗೆ ಹೋಗಿ ಭಾಗವಹಿಸುತ್ತಿದ್ದರು.) ಈಗಲೂ ಮುಂಬೈ ಕಡೆ ಸತ್ಯಾಗ್ರಹ ನಡೆಸೋರು ಮೈಸೂರಿನವರೆ, ಅವರು ನಮ್ಮವರು ಅಂತ ಹೆಮ್ಮೆಯಿಂದ ಮಾತನಾಡುತ್ತೇನೆ. ಸತ್ಯಾಗ್ರಹ ಮಾಡುವುದಕ್ಕೆ ಬಲವಾದ ಕಾರಣವಿದೆಯೆಂದು ಮನವರಿಕೆ ಮಾಡಿಕೊಡಲು ಮುಂದಾದರು. ಬ್ರಿಟಿಷ್ ಇಂಡಿಯಾದಲ್ಲಿ ಒಬ್ಬನ ಕೈಕೆಳಗೆ ಎಲ್ಲರೂ ಗುಲಾಮರಾಗಿದ್ದರೆ, ಮೈಸೂರಿನಲ್ಲಿ ಬ್ರಿಟಿಷರ ಕೈಕೆಳಗೆ ಮಹಾರಾಜರು, ಮಹಾರಾಜರ ಕೈಕೆಳಗೆ ನಾವು ಹೀಗೆ 'ಡಬಲ್ ಸ್ಲೇವರಿ' ನಮ್ಮದಾಗಿದೆ ಎಂದು ನೇರವಾಗಿ ಹೇಳುವುದರ ಮೂಲಕ ಮೈಸೂರು ಪ್ರಾಂತ್ಯದಲ್ಲಿ ಸತ್ಯಾಗ್ರಹ ಮಾಡಲು ಅನುಮತಿಗಾಗಿ ಒತ್ತಾಯಿಸಿದರು.

ಡೆಲಾಂಗಿನಿಂದ ಹಿಂದಿರುಗಿದ ನಾಯಕರು ಗಾಂಧಿಯವರ ಅಭಿಪ್ರಾಯಗಳನ್ನು ಕಾಂಗ್ರೆಸ್ ಕಾರ್ಯಕರ್ತರಿಗೆ ತಿಳಿಸಿದರು. ಗಾಂಧಿ ಮೆಚ್ಚುವ ಹಾಗೆ ಧ್ವಜ ಸತ್ಯಾಗ್ರಹ ನಡೆಸಿ ತೋರಿಸಬೇಕೆಂದು ದೃಢಸಂಕಲ್ಪ ಮಾಡಿದರು.



**ಅಧಿವೇಶನದ ಕಚೇರಿ ಸ್ಥಾಪನೆ:**

ಪಿ.ತಿರುಮಲೇಗೌಡರ ವಿಶಾಲವಾದ ಮನೆಯಲ್ಲಿ ವಿವಿಧ ಕಚೇರಿಗಳು ಸ್ಥಾಪನೆಯಾದವು. ತಿರುಮಲೇಗೌಡರೇ ತಮ್ಮ ವಿಶಾಲವಾದ ಮನೆಯನ್ನೇ ರಾಷ್ಟ್ರಕೂಟ ಸಭೆಯ ಕಚೇರಿಯನ್ನಾಗಿ ಮಾರ್ಪಡಿಸಿಕೊಳ್ಳಲು ವಿಶಾಲ ಮನಸ್ಸಿನಿಂದ ಬಿಟ್ಟುಕೊಟ್ಟರು. ಮುಂದೆ ವಿವಿಧ ಕೆಲಸ ಕಾರ್ಯಗಳನ್ನು ಪ್ರಾರಂಭಗೊಳಿಸಲು ಬೇರೆ ಬೇರೆ ಸಮಿತಿಗಳನ್ನು ರಚನೆ ಮಾಡಬೇಕಿತ್ತು. ಈ ಎಲ್ಲಾ ಸಮಿತಿಗಳಲ್ಲೂ ಮೈಸೂರು ಪ್ರಾಂತ್ಯದ ಎಲ್ಲಾ ಭಾಗದ ನಾಯಕರು ಮುಂಚೂಣಿ ಕೆಲಸವನ್ನು ನಿರ್ವಹಿಸಬೇಕೆಂದು ತೀರ್ಮಾನಿಸಲಾಗಿತ್ತು.

**ಅಧಿವೇಶನದ ವೆಚ್ಚಕ್ಕೆ ಹಣ ಸಂಗ್ರಹ:**

ಅಧಿವೇಶಕ್ಕೆ ತಗಲುವ ವೆಚ್ಚವನ್ನು ಭರಿಸಲು, ಹಣ ಸಂಗ್ರಹದ ಜವಾಬ್ದಾರಿಯನ್ನು ಸಾಹುಕಾರ್ ಚನ್ನಯ್ಯ ಮತ್ತು ಎಚ್.ಕೆ.ವೀರಣ್ಣಗೌಡರವರು ವಹಿಸಿಕೊಂಡರು. ಇವರು ವಳಗೆರೆಹಳ್ಳಿ, ಗೆಜ್ಜಲಗೆರೆ, ಕುದುರುಗುಂಡಿ, ಗೊರವನಹಳ್ಳಿ, ಚನ್ನಸಂದ್ರ, ನಗರಕೆರೆ, ಸಾದೊಳಲು, ದೇಶಹಳ್ಳಿ, ಕೆಸ್ತೂರು, ಕೊಪ್ಪ ಮೊದಲಾದ ಗ್ರಾಮಗಳಲ್ಲಿ ಸಂಚರಿಸಿ ಸಾರ್ವಜನಿಕರಿಂದ ದೇಣಿಗೆಯನ್ನು ಸಂಗ್ರಹಿಸಿದರು. ಸಾಹುಕಾರ್ ಚನ್ನಯ್ಯನವರು ಈ ಅಧಿವೇಶನಕ್ಕೆ ಹೆಚ್ಚಿನ ಧನಸಹಾಯ ನೀಡಿದರು, ಗೌಡಗೆರೆಯ ಗ್ರಾಮಸ್ಥರು ತಿರುಪತಿಯ ಹರಕೆ ಹಣವನ್ನು ಅಧಿವೇಶನದ ಖರ್ಚಿಗೆ ಬಳಸಿಕೊಳ್ಳಲು ಉದಾರವಾಗಿ ನೀಡಿದರು. ಪೂರ್ವಭಾವಿ ಸಭೆಗೆ ಎಂ.ಸಿ.ಲಿಂಗೇಗೌಡ ಮತ್ತು ಸೋದರ ತಮ್ಮೇಗೌಡ ಐವತ್ತು ರೂಗಳನ್ನು ನೀಡಿದ್ದರು. ದೇಶಹಳ್ಳಿ ಶಿವಲಿಂಗಯ್ಯ ೧೦೧ ರೂಗಳನ್ನು ಸಮಿತಿಗೆ ದಾನ ನೀಡಿದರು, ಇಡೀ ಅಧಿವೇಶನಕ್ಕೆ ತಗುಲಿದ ಒಟ್ಟು ವೆಚ್ಚ ಸುಮಾರು ೧೦ಸಾವಿರ ರೂಗಳು. ಇದೆಲ್ಲಾ ಸಾರ್ವಜನಿಕರಿಂದ ಸಂಗ್ರಹಿಸಿದ ಹಣ.

**ಊಟೋಪಚಾರದ ಮೇಲ್ವಿಚಾರಣೆ:**

ಮೂರು ದಿನಗಳ ಅಧಿವೇಶನದ ಊಟೋಪಚಾರದ ಮೇಲ್ವಿಚಾರಣೆಯನ್ನು ಮದ್ದೂರಿನ ಎಂ.ಪಿ. ಶ್ರೀನಿವಾಸಅಯ್ಯಂಗಾರ್ ಮತ್ತು

ಗುರುದೇವರಹಳ್ಳಿಯ ಬಿ. ಕೆಂಪೇಗೌಡರವರು ವಹಿಸಿ ಕೊಂಡಿದ್ದರು. ಅಧಿವೇಶನ ಜರುಗುವ ಪಕ್ಕದಲ್ಲೇ ಸುಮಾರು ಎರಡು ಸಾವಿರ ಜನ ಒಂದು ಸಾರಿ ಕುಳಿತು ಊಟ ಮಾಡುವಂತೆ ಊಟದ ವ್ಯವಸ್ಥೆಯನ್ನು ಮಾಡಲಾಗಿತ್ತು. ಇದಕ್ಕೆ ಹೊಂದಿ ಕೊಂಡಂತೆ ಅಡುಗೆ ಮನೆಯಿತ್ತು. ಅಮೃತೂರಿನ ಶೇಷಾದ್ರಿ ಅಯ್ಯಂಗಾರ್ ನೇತೃತ್ವದಲ್ಲಿ ಸುಮಾರು ೨೫ ಮಂದಿ ಸ್ವಯಂ ಸೇವಕರು ಪಾಕಸಾಲೆಯಲ್ಲಿ ಶಿಸ್ತಿನಿಂದ ಕಾರ್ಯ ನಿರ್ವಹಿಸಿದರು.

### ಅಧಿವೇಶನದ ಸಿದ್ಧತೆ:

ಉದ್ದೇಶಿತ ಶಿವಪುರ ಧ್ವಜ ಸತ್ಯಾಗ್ರಹ / ಕಾಂಗ್ರೆಸ್ ಅಧಿವೇಶನದ ಸಿದ್ಧತೆಗೆ ಸ್ಥಳೀಯರ ದುಡಿಮೆ ಶ್ಲಾಘನೀಯವಾದದ್ದು, ಕೊಪ್ಪದ ಜೋಗೀಗೌಡರ ಮಗ ಕೆ.ರಮೇಶ್, ಬೆಸಗರಹಳ್ಳಿ ತಮ್ಮಯ್ಯ, ಹನುಮಂತಪುರದ ಸೊತ್ತೆ ಲಿಂಗೇಗೌಡ, ಗುರುದೇವರಹಳ್ಳಿ ಕೆಂಪಯ್ಯ, ನರಸಿಂಹೇಗೌಡ, ಪಾಲಗ್ರಹಾರದ ಪಿ.ಎನ್.ನರಸಿಂಹಯ್ಯ, ಕೊತ್ತನಹಳ್ಳಿ ಪಟೇಲ್ ಮಲ್ಲಯ್ಯ ಸಹೋದರರು, ಅರಕೆರೆ ಎ.ಕೆಂಚಪ್ಪ, ಬೆಲ್ಲಪ್ಪನ ಕೊಪ್ಪದ ಚಿಕ್ಕಬಿಳಿಗೌಡ, ದೊಡ್ಡ ಬಿಳಿಗೌಡ, ಕುದರಗುಂಡಿ ಮರಿಯಪ್ಪ, ನಗರಕೆರೆ ಎನ್.ಪಿ.ಲಿಂಗೇಗೌಡ, ಮಳವಳ್ಳಿಯ ಸುಬ್ಬಯ್ಯ ಮೊದಲಾದವರು ಸೇರಿದಂತೆ ಸುಮಾರು ೪೦೦ ಜನ ಸ್ವಯಂ ಸೇವಕರು ಒಂದು ತಿಂಗಳು ಮುಂಚಿತವಾಗಿಯೇ ಅಧಿವೇಶನ ಯಶಸ್ವಿಯಾಗಿ ಜರುಗಲು ಶ್ರಮಿಸಿದ್ದು ಸ್ಮರಣಾರ್ಹವಾದುದ್ದು.

### ಸ್ವಯಂ ಸೇವಕರ ಪಡೆ:

ಎಂ.ಎನ್.ಜೋಯಿಸರ ನೇತೃತ್ವದಲ್ಲಿ ಸ್ವಯಂ ಸೇವಕದಳ ಸಮಿತಿಯ ರಚನೆಯಾಯಿತು. ಸ್ವಯಂ ಸೇವಕರಿಗೆ ತರಬೇತಿಯನ್ನು ಕೊಡಲು ಬೆಂಗಳೂರಿನ ರಾಮಚಂದ್ರರಾವ್ ಮತ್ತು ಎನ್.ಆರ್. ರಾಘವೇಂದ್ರಮೂರ್ತಿಯನ್ನು ನೇಮಿಸಲಾಗಿತ್ತು. ಇವರ ನೇತೃತ್ವದಲ್ಲಿ ಸ್ವಯಂ ಸೇವಕರು ಬೆಳಿಗ್ಗೆ ಮತ್ತು ಸಂಜೆ ಕವಾಯಿತು ಮಾಡುವುದು, ರಾಷ್ಟ್ರಗೀತೆ ಹಾಡುವುದು, ರಾಷ್ಟ್ರಧ್ವಜಾರೋಣ ಮತ್ತು ರಾಷ್ಟ್ರಧ್ವಜ ಅವರೋಹಣಗಳನ್ನು ಮಾಡುವುದು, ಸ್ವಾಗತ ಸಮಿತಿಯ ಕಚೇರಿಯ ಕೆಲಸಗಳನ್ನು ನೋಡಿ ಕೊಳ್ಳುವುದು, ಆಹಾರ ಪದಾರ್ಥಗಳನ್ನು ಕಾಯುವುದು, ಆಗಮಿಸುವ ಪ್ರತಿನಿಧಿಗಳಿಗೆ ಸೌಕರ್ಯಗಳನ್ನು



ಕಲ್ಪಿಸಿಕೊಂಡುವುದು, ಕಾರ್ಯ ಕಲಾಪಗಳ ಸಂದರ್ಭದಲ್ಲಿ ಶಿಸ್ತನ್ನು ಕಾಪಾಡುವುದು ಮೊದಲಾದ ಕಾರ್ಯಗಳನ್ನು ಸ್ವಯಂ ಸೇವಕರು ನಿರ್ವಹಿಸಬೇಕಾಗಿತ್ತು. ಸ್ವಯಂ ಸೇವಕರನ್ನು ಹಲವಾರು ಗುಂಪುಗಳಾಗಿ ವಿಂಗಡಿಸಿ ಪ್ರತಿಯೊಂದು ಗುಂಪನ್ನು ರಾಷ್ಟ್ರನಾಯಕರ ಹೆಸರಿನಿಂದ ಕರೆಯುತ್ತಿದ್ದರು. ಉದಾ: ತಿಲಕ್ ದಸ್ತ, ಭಗತ್‌ಸಿಂಗ್ ದಸ್ತ, ಪಟೇಲ್ ದಸ್ತ, ಇತ್ಯಾದಿ. ಸಂಸ್ಥಾನದ ಎಲ್ಲಾ ಭಾಗಗಳಿಂದ ಸ್ವಯಂ ಸೇವಕರು ಪ್ರಸ್ತುತ ಸಭೆಗೆ ಆಗಮಿಸಿ ಕೆಲಸ ನಿರ್ವಹಿಸಿ ರಾಷ್ಟ್ರಕೂಟ ಸಭೆಗೆ ಕೀರ್ತಿ ತಂದರು. ಹೆಚ್.ಸಿ.ದಾಸಪ್ಪ ಮತ್ತು ಟಿ.ಸಿದ್ದಲಿಂಗಯ್ಯ ಇವರುಗಳ ಗಂಡು ಮಕ್ಕಳು ಸ್ವಯಂ ಸೇವಕರಾಗಿ ತಮಗೆ ವಹಿಸಿದ ಕೆಲಸಗಳನ್ನು ಶ್ರದ್ಧೆ ಮತ್ತು ಶಿಸ್ತಿನಿಂದ ನಿರ್ವಹಿಸಿದರು. ಅಧಿವೇಶನದಲ್ಲಿ ಶಾಂತಿ ಶಿಸ್ತನ್ನು ಕಾಪಾಡಲು ಸ್ವಯಂ ಸೇವಕರು ನೀಲಿ ನಿಕ್ಕರ್, ಬಿಳಿ ಷರಟು ಮತ್ತು ಟೋಪಿಗಳನ್ನು ಧರಿಸಿದ್ದರು.

### ಮಹಿಳಾ ಪ್ರತಿನಿಧಿಗಳು ಮತ್ತು ಸ್ವಯಂ ಸೇವಕಿಯರು:

ಅಧಿಕ ಸಂಖ್ಯೆಯಲ್ಲಿ ಮಹಿಳಾ ಪ್ರತಿನಿಧಿಗಳು ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದರು. ಅವರುಗಳೆಂದರೆ: ಶ್ರೀಮತಿ ಯಶೋಧರಮ್ಮ ದಾಸಪ್ಪ, ಸುನಂದ ಅಯ್ಯಂಗಾರ್, ಪಾಲಹಳ್ಳಿ ವೆಂಕಮ್ಮ ಮತ್ತು ಸುಬ್ಬಮ್ಮ ಜೋಯಿಸರಂತಹ ಪ್ರಮುಖ ಮಹಿಳಾ ಪ್ರತಿನಿಧಿಗಳು ಈ ಅಧಿವೇಶನದಲ್ಲಿ ಭಾಗವಹಿಸಿದ್ದುದು ವಿಶೇಷವಾಗಿತ್ತು. ಇವರುಗಳು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಸಹ ಅಧಿಕ ಸಂಖ್ಯೆಯಲ್ಲಿ ಭಾಗವಹಿಸುವಂತೆ ಕರೆಕೊಟ್ಟರು. ಸಂಸ್ಥಾನದ ನಾನಾ ಕಡೆಗಳಿಂದ ಸ್ವಯಂ ಸೇವಕಿಯರ ತಂಡವು ಭಾಗವಹಿಸಿತ್ತು. ಪಾಲಹಳ್ಳಿಯ ಸೀತಾರಾಮಯ್ಯನವರ ಮಡದಿ ಶ್ರೀಮತಿ ವೆಂಕಮ್ಮನವರು ೨೪ ಮಂದಿ ಮಹಿಳಾ ಸ್ವಯಂ ಸೇವಕಿಯರಿಗೆ ತರಬೇತಿ ನೀಡಿದರು. ಇವರುಗಳಲ್ಲದೆ ಸಾಹುಕಾರ್ ಚನ್ನಯ್ಯನವರ ಮಗಳು ಪ್ರಮಿಳ, ಪಾಲಹಳ್ಳಿ ಸೀತಾರಾಮಯ್ಯನವರ ಮಗಳು ಮೊದಲಾದವರು ಭಾಗವಹಿಸಿದ್ದರು. ಅಧಿವೇಶನದಲ್ಲಿ ಶಾಂತಿ ಶಿಸ್ತನ್ನು ಕಾಪಾಡಲು ಸ್ವಯಂಸೇವಕಿಯರು ಕೇಸರಿ ಬಣ್ಣದ ಸೀರೆ, ಹಸಿರು ಕುಪ್ಪಸವನ್ನು ಧರಿಸಿದ್ದರು.

## ಸಮ್ಮೇಳನದ ಅಧ್ಯಕ್ಷರ ಆಯ್ಕೆ:

೧೯೩೮ರ ಏಪ್ರಿಲ್ ೩ ರಂದು ಸಭೆ ಸೇರಿದ್ದ ಮೈಸೂರು ಸಂಸ್ಥಾನದ ಜಿಲ್ಲಾ ಕಾಂಗ್ರೆಸ್‌ನ ಪ್ರತಿನಿಧಿಗಳು ಶಿವಪುರ ರಾಷ್ಟ್ರಕೂಟ ಧ್ವಜಸತ್ಯಾಗ್ರಹದ ಅಧ್ಯಕ್ಷರನ್ನಾಗಿ ದೊಡ್ಡಬಳ್ಳಾಪುರದ ಟಿ.ಸಿದ್ದಲಿಂಗಯ್ಯನವರನ್ನು ಪ್ರಜಾಪ್ರಭುತ್ವದ ಮಾದರಿಯಲ್ಲಿ ಆಯ್ಕೆ ಮಾಡಲಾಯಿತು. ಕೆ.ಟಿ.ಭಾಷ್ಯಂಅಯ್ಯಂಗಾರ್, ಹೆಚ್.ಸಿ.ದಾಸಪ್ಪರವರ ಹೆಸರು ಕೇಳಿ ಬಂದವು. (ಬೆಂಗಳೂರು, ಮೈಸೂರು, ಹಾಸನ, ಚಿತ್ರದುರ್ಗ, ಕಡೂರು, ಶಿವಮೊಗ್ಗ ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಸಿದ್ದಲಿಂಗಯಯ್ಯನವರನ್ನು ಪ್ರಜಾ ಪ್ರಭುತ್ವದ ಮಾದರಿಯಲ್ಲಿ ಚುನಾಯಿಸಿದರು. ಕೋಲಾರ, ತುಮಕೂರು ಜಿಲ್ಲಾ ಕಾಂಗ್ರೆಸ್ ಕಮಿಟಿಗಳು ಕೆ.ಟಿ.ಭಾಷ್ಯಂರವರಿಗೂ ಮಂಡ್ಯ ತಾಲ್ಲೂಕು ಕಾಂಗ್ರೆಸ್ ಕಮಿಟಿ ಎಚ್.ಸಿ.ದಾಸಪ್ಪನವರಿಗೆ ಬೆಂಬಲ ಸೂಚಿಸಿದವು) ಶಿವಪುರ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರೇ ಮೈಸೂರು ಕಾಂಗ್ರೆಸ್‌ನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದರು.

ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಟಿ. ಸಿದ್ದಲಿಂಗಯ್ಯನವರು ಮಾತನಾಡುತ್ತ, 'ತಾವುಗಳು ನನ್ನ ಮೇಲೆ ಪ್ರೀತಿ, ವಿಶ್ವಾಸಗಳನ್ನಿಟ್ಟು ಮೈಸೂರು ಕಾಂಗ್ರೆಸ್‌ನ ಪ್ರಥಮ ಮಹಾಧಿವೇಶನದ ಸಮಾರಂಭವಾದ ಶಿವಪುರ ರಾಷ್ಟ್ರಕೂಟದ ಅಧ್ಯಕ್ಷನನ್ನಾಗಿ ಚುನಾಯಿಸಿದ್ದಕ್ಕಾಗಿ ನಾನು ನಿಮ್ಮಗಳನ್ನು ಹೃತ್ಪೂರ್ವಕವಾಗಿ ವಂದಿಸುತ್ತೇನೆ. ನಮ್ಮ ಸಂಸ್ಥಾನದ ಹಾಗೂ ವಿಶಾಲ ಭಾರತದ ಏಳಿಗೆಗಾಗಿ ನಾವು ಮಾಡಬೇಕಾಗಿರುವ ಮಹತ್ತರವಾದ ಕೆಲಸಗಳನ್ನು ತೃಪ್ತಿಕರವಾಗಿ ಮಾಡತಕ್ಕ ಮತ್ತು ಅಧ್ಯಕ್ಷ ಪದವಿಗೆ ಅನುಗುಣವಾದ ಶಕ್ತಿ ಸಾಮರ್ಥ್ಯಗಳನ್ನು ಕೊಡಲೆಂದು ನಾನು ಸರ್ವಶಕ್ತನಾದ ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ ಎಂದು ತಮ್ಮ ಕೃತಜ್ಞತೆಯನ್ನು ತಿಳಿಸಿದ್ದಾರೆ.

## ವಿಷಯ ನಿಯಾಮಕ ಸಮಿತಿಯ ಸದಸ್ಯರ ಆಯ್ಕೆ:

ಶಿವಪುರ ರಾಷ್ಟ್ರಕೂಟದ ಪ್ರತಿನಿಧಿಗಳಾದವರು ಏಪ್ರಿಲ್ ೩ ರಂದು ವಿಷಯ ನಿಯಾಮಕ ಸಮಿತಿಯ ಸದಸ್ಯರನ್ನು ಆರಿಸಬೇಕು, ವಿಷಯ ನಿಯಾಮಕ ಸಮಿತಿಗೆ ಮೈಸೂರು ಸಂಸ್ಥಾನದ ಪ್ರತಿಯೊಂದು ಜಿಲ್ಲೆಯಿಂದ ಆಯ್ಕೆ ಮಾಡಲಾಗುತ್ತಿತ್ತು ಉದಾ: ಬೆಂಗಳೂರು ಜಿಲ್ಲೆ–೧೦, ಮೈಸೂರು ಜಿಲ್ಲೆ–೧೪, ಹಾಸನ ಜಿಲ್ಲೆ–೦೮, ಕೋಲಾರ ಜಿಲ್ಲೆ–೧೧, ತುಮಕೂರು ಜಿಲ್ಲೆ–೧೦, ಶಿವಮೊಗ್ಗ ಜಿಲ್ಲೆ–೦೯, ಚಿತ್ರದುರ್ಗ ಜಿಲ್ಲೆ–೦೯, ಕಡೂರು ಜಿಲ್ಲೆ–೦೭, ಬೆಂಗಳೂರು ನಗರ ೦೫, ಮೈಸೂರು ನಗರ ೦೪, ಉಳಿದ ಜಲ್ಲೆಗಳಿಂದ ಇಬ್ಬರಂತೆ ಪ್ರತಿನಿಧಿಗಳನ್ನು ಆರಿಸಬೇಕು, ಇವರಲ್ಲದೆ ಕಾರ್ಯಕಾರಿ ಮಂಡಲಿಯ ಸದಸ್ಯರು ವಿಷಯ ನಿಯಾಮಕ ಸಮಿತಿಯ ಸದಸ್ಯರಾಗಬಹುದಾಗಿತ್ತು. ಒಟ್ಟಾರೆ ವಿಷಯ ನಿಯಾಮಕ ಸಭೆಯಲ್ಲಿ ೧೦೫ ಜನ ಸದಸ್ಯರಿದ್ದರು.

## ವೇದಿಕೆಯ ಸಿದ್ಧತೆ:

ಪಿ.ತಿರುಮಲೇಗೌಡರ ಮನೆಯ ಹಿಂಭಾಗದ ವಿಶಾಲವಾದ ಎಂಟು ಎಕರೆ ಪ್ರದೇಶದಲ್ಲಿ ಸುಮಾರು ೪೦,೦೦೦ ಜನ ಕುಳಿತು ಕೊಳ್ಳಲು ಅನುಕೂಲವಾಗುವಂತೆ ಬಹಿರಂಗ ಸಭೆಗಾಗಿ ಆರು ಅಡಿ ಎತ್ತರದ ವೇದಿಕೆ/ಮಂಟಪವನ್ನೂ ಮತ್ತು ಅದರ ಎದುರು ಪೂರ್ವಾಭಿಮುಖವಾಗಿ ೬೦ ಅಡಿ ಎತ್ತರದ ಅಡಿಕೆ ಮರದ ಧ್ವಜಸ್ತಂಭವನ್ನು ನಿರ್ಮಿಸಿ, ಧ್ವಜ ಸ್ತಂಭದ ತುದಿಯಲ್ಲಿ ಕೇಸರಿ, ಬಿಳಿ ಹಸಿರು ಬಣ್ಣದ ರಾಷ್ಟ್ರ ಧ್ವಜವನ್ನು ಬಿಗಿದು ಕಟ್ಟಲಾಗಿತ್ತು. ಅಲ್ಲದೆ ವೇದಿಕೆಯನ್ನು ರಾಷ್ಟ್ರಧ್ವಜ ಮತ್ತು ಬಣ್ಣ ಬಣ್ಣದ ವಿದ್ಯುದೀಪಗಳಿಂದ ಅಲಂಕರಿಸಲಾಗಿತ್ತು. ಮೈಸೂರು ಎಲೆಕ್ಟ್ರಿಕಲ್ ಇಂಜಿನಿಯರಿಂಗ್ ಕಂಪನಿಯವರು ಸಾವಿರಾರು ದೀಪಗಳಿಂದ ಅಧಿವೇಶನದ ಸಭಾಂಗಣವನ್ನು ಅಲಂಕರಿಸಿದರು. ಅಲ್ಲದೆ ವೇದಿಕೆಯ ಪ್ರವೇಶ ದ್ವಾರದ ಮುಂದೆ ಭಾರತ ಮಾತೆಯ ಮತ್ತು ಗಾಂಧಿ, ನೆಹರುರವರ ಭಾವಚಿತ್ರವನ್ನು ಹಾಕಲಾಗಿತ್ತು. ಹರಿಪುರ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ನಾಯಕರು ವೇದಿಕೆಯ ಸಿದ್ಧತೆಯನ್ನು ಕಂಡು ಹರಿಪುರವೋ, ಶಿವಪುರವೋ ಎಂದು ಉದ್ಗರಿಸಿದರಂತೆ. ಹೀಗೆ ಶಿವಪುರ ಅಧಿವೇಶನದ ಜವಬ್ದಾರಿಯನ್ನು ವಹಿಸಿಕೊಂಡಿದ್ದ ಕಾಂಗ್ರೆಸ್ ನಾಯಕರು ಹರಿಪುರದ ವೇದಿಕೆಯನ್ನು ನಾಚಿಸುವಂತೆ ಶಿವಪುರ ಧ್ವಜ ಸತ್ಯಾಗ್ರಹದ ವೇದಿಕೆಯನ್ನು ಸಿದ್ದಗೊಳಿಸಿದ್ದರು.

ಅಧಿವೇಶನದ ಸ್ಥಳದಲ್ಲಿ ಖಾದಿ ಪ್ರದರ್ಶನ, ಔಷಧಾಲಯ, ಅಂಗಡಿಗಳ ಸಾಲು, ಮೊದಲಾದ ಮಳಿಗೆಗಳನ್ನು ತೆರೆಯಲಾಗಿತ್ತು. ಎಚ್.ಕೆ.ವೀರಣ್ಣಗೌಡರ ನೇತೃತ್ವದಲ್ಲಿ ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಹಾಗೂ ಸ್ವಾಗತ ಸಮಿತಿಯ ಸದಸ್ಯರುಗಳಾದ ಬಳ್ಳಾರಿ ಸಿದ್ಧಮ್ಮ, ಎಂ.ಎನ್.ಜೋಯಿಸ್, ಸುಬ್ಬಮ್ಮ

ಜೋಯಿಸ್. ಟಿ.ಸುನಂದಮ್ಮ, ಮೊದಲಾದ ಮಹಿಳೆಯರು, ವೀರಕೇಸರಿಸೀತಾರಾಮಶಾಸ್ತ್ರಿ, ಕೆ.ಟಿ.ಭಾಷ್ಯಂಅಯ್ಯಂಗಾರ್, ಟಿ.ಸಿದ್ದಲಿಂಗಯ್ಯ, ಮೊದಲಾದ ನಾಯಕರು ಪ್ರಚಾರ ಕಾರ್ಯದಲ್ಲಿ ತೊಡಗಿದ್ದರು.

ಅಧಿವೇಶನದ ಸಂದರ್ಭದಲ್ಲಿ ಆರೋಗ್ಯ ಮತ್ತು ನೈರ್ಮಲ್ಯಕ್ಕೆ ಹೆಚ್ಚು ಗಮನ ಕೊಡಲಾಗಿತ್ತು. ಮಲಮೂತ್ರ ವಿಸರ್ಜನೆಗೆ ಆಳವಾಗಿ ಚರಂಡಿ ತೆಗೆದು ಸುತ್ತಲೂ ತಟ್ಟಿಗಳಿಂದ ಮರೆಮಾಡಿ ಮಲಮೂತ್ರ ಮಾಡುವವರು ಅದರ ಮೇಲೆ ಮಣ್ಣು ಹಾಕುವುದಕ್ಕೆ ಪಕ್ಕದಲ್ಲಿ ಮಣ್ಣಿನ ರಾಶಿಯನ್ನು ಹಾಕಲಾಗಿತ್ತು. ಮೈಸೂರು ಜಿಲ್ಲೆಯ ಮುಖ್ಯ ಆರೋಗ್ಯಾಧಿಕಾರಿಗಳು, ಮದ್ದೂರು ಅಸ್ಪತ್ರೆಯ ವೈದ್ಯರು ಮತ್ತು ಮೈಸೂರಿನ ಕೆಲವು ಖಾಸಗಿ ವೈದ್ಯರು ತಮ್ಮ ಔಷಧಾಲಯಗಳನ್ನು ತೆರೆದು ಸತ್ಯಾಗ್ರಹಿಗಳಿಗೆ ಉಚಿತವಾಗಿ ನೀಡುತ್ತಿದ್ದರು.

ಅಧಿವೇಶನಕ್ಕೆ ಬೆಂಗಳೂರಿನ ಹಿಮಾಮ್ಸು ಕಂಪನಿಯವರು ಧ್ವನಿವರ್ಧಕ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ಮಾಡಿಕೊಟ್ಟಿದ್ದರು. ಅಧಿವೇಶನವನ್ನು ಕುರಿತು ಲಾವಣಿಗಳನ್ನು ಕಟ್ಟಿ ಹಾಡಲು ಲಾವಣಿ ತಜ್ಞರಾದ ಚಿಕ್ಕಮಗಳೂರಿನ ಸಿ.ಆರ್.ರಾಜಣ್ಣ, ಬೆಂಗಳೂರಿನ ಬಿ.ನೀಲಕಂಠಯ್ಯ ಮತ್ತು ಮೈಸೂರಿನ ಎನ್.ವಿಷಕಂಠರಾವ್ ಆಗಮಿಸಿದ್ದರು.

ಒಂದೆಡೆ ಶಿವಪುರ ಧ್ವಜ ಸತ್ಯಾಗ್ರಹವನ್ನು ಯಶಸ್ವಿಗೊಳಿಸುವುದಕ್ಕೆ ಕಾಂಗ್ರೆಸ್ ಮುಖಂಡರು ಮತ್ತು ಸ್ವಯಂ ಸೇವಕರು ಶ್ರಮಿಸುತ್ತಿದ್ದರೆ, ಕಾಂಗ್ರೆಸ್‌ನ ವಿರೋಧಿ ಗುಂಪು ಅಧಿವೇಶನದ ಎಲ್ಲಾ ಏರ್ಪಾಡುಗಳ ದೂರನ್ನು ಸರ್ಕಾರಕ್ಕೆ ವರದಿ ಮಾಡುವುದರ ಮೂಲಕ ಅಧಿವೇಶನವನ್ನು ವಿಫಲಗೊಳಿಸಲು ಪ್ರಯತ್ನಿಸುತ್ತಿದ್ದರು. ದಿವಾನರಾದ ಮಿರ್ಜಾರವರು ಆಗಾಗ್ಗೆ ಸೋಮನಹಳ್ಳಿಯ ಎಸ್.ಸಿ.ಮಲ್ಲಯ್ಯರವರ ಮನೆಗೆ ಆಗಮಿಸಿ ಅಧಿವೇಶನದ ಸಿದ್ಧತೆಯ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿದ್ದರು.

### ವಕೀಲರ ಸಮ್ಮೇಳನ:

ಮೈಸೂರು ಸಂಸ್ಥಾನದ ಶಿವಪುರ ಕಾಂಗ್ರೆಸ್ ಅಧಿವೇಶನ ನಡೆಸುವುದಕ್ಕೆ ಸಂಬಂಧಿಸಿದಂತೆ ಜನಜಾಗೃತಿ ಮೂಡಿಸುವಲ್ಲಿ, ಜವಾಬ್ದಾರಿ ಸರಕಾರದ ಹೋರಾಟದಲ್ಲಿ ಅಂದಿನ ವಕೀಲರ ಪಾತ್ರ ಮಹತ್ವವಾದುದ್ದು. ೧೯೩೮ರ



ಏಪ್ರಿಲ್ ೯ರಂದು ಮಂಡ್ಯದ ಶ್ರೀ ಜಯಚಾಮರಾಜೇಂದ್ರ ಟೌನ್ ಹಾಲ್‌ನಲ್ಲಿ ರಾಜ್ಯ ವಕೀಲರ ೧೪ನೇ ಸಮ್ಮೇಳನ ಜರುಗಿತು. ಸಭೆಯಲ್ಲಿ ಅಸಂಖ್ಯಾತ ಪ್ರತಿನಿಧಿಗಳು ಮತ್ತು ಪ್ರೇಕ್ಷಕರು ಭಾಗವಹಿಸಿದ್ದರು. ಸ್ವಾಗತ ಸಮಿತಿಯ ಅಧ್ಯಕ್ಷರಾದ ಜಿ.ದೇವಾಜಿರಾವ್‌ರವರು ಸ್ವಾಗತ ಭಾಷಣ ಮಾಡಿದರು. ಸಮ್ಮೇಳನದ ಅಧ್ಯಕ್ಷತೆಯನ್ನು ವಹಿಸಿದ್ದ ಕೆ.ಟಿ.ಭಾಷ್ಯಂರವರು ಮಾತನಾಡುತ್ತ 'ಜನ ಸೇವೆ ಮಾಡಲು ವಕೀಲರಿಗೆ ಹೆಚ್ಚು ಅವಕಾಶವಿದೆ. ಅಲ್ಲದೆ ಶಿವಪುರ ಧ್ವಜ ಸತ್ಯಾಗ್ರಹದ ಜನಜಾಗೃತಿಯಲ್ಲಿ ಮತ್ತು ಜವಾಬ್ದಾರಿ ಸರಕಾರದ ಹೋರಾಟದಲ್ಲಿ ನೆರವಾಗಬೇಕೆಂದು ಕರೆಕೊಟ್ಟರು. ಪರಿಣಾಮವಾಗಿ ಶಿವಪುರ ಧ್ವಜ ಸತ್ಯಾಗ್ರಹದಲ್ಲಿ ಅಧಿಕ ಪ್ರಮಾಣದಲ್ಲಿ ವಕೀಲರು ಭಾಗವಹಿಸಿದ್ದರು.

### ಯುವಜನ ಸಮ್ಮೇಳನ:

೧೯೩೮ರ ಏಪ್ರಿಲ್ ೧೦ ರಂದು ಬೆಳಿಗ್ಗೆ ಶಿವಪುರದಲ್ಲಿ ಮೈಸೂರು ಸಂಸ್ಥಾನದ ಯುವಜನ ಸಮ್ಮೇಳನ ಜರುಗಿತು. ನಂಜನಗೂಡಿನ ಕೆ.ವಿಶ್ವೇಶ್ವರ ಗೌಡರು ಯುವ ಜನ ಸಮ್ಮೇಳನದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿದ್ದರು. ಹೆಚ್.ಸಿ.ದಾಸಪ್ಪನವರು ಯುವಜನ ಸಮ್ಮೇಳನವನ್ನು ಉದ್ಘಾಟಿಸಿದರು. ತಗಡೂರು ರಾಮಚಂದ್ರರಾಯರು ಯುವ ಜನ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಶ್ರೀಮತಿ ಟಿ.ಸುನಂದಮ್ಮನವರಿಂದ ಬಂಕಿಂಚಂದ್ರರ ವಂದೇಮಾತರಂ ಗೀತೆಯನ್ನು ಹಾಡುವುದರ ಮೂಲಕ ಶಿವಪುರ ಅಧಿವೇಶನದ ಯುವಜನ ಸಮ್ಮೇಳನಕ್ಕೆ ಚಾಲನೆ ನೀಡಿದರು. ಸಮ್ಮೇಳನದ ಅಧ್ಯಕ್ಷರಾದ ತಗಡೂರು ರಾಮಚಂದ್ರರಾಯರು ಅಧ್ಯಕ್ಷೀಯ ಭಾಷಣ ಮಾಡುತ್ತ, 'ಮೈಸೂರು ಸಂಸ್ಥಾನದ ೬೦ ಲಕ್ಷ ಜನತೆಯ ಜವಬ್ದಾರಿಯ ಹೊರೆಯನ್ನು ಹೊತ್ತಿರುವ ಮೈಸೂರು ಕಾಂಗ್ರೆಸ್‌ನ ಮಹಾ ಅಧಿವೇಶನ ನಾಳೆ ಇದೇ ಆವರಣದಲ್ಲಿ ಜರುಗಲಿದೆ. ಈ ಸಮ್ಮೇಳನದ ನಿರ್ಣಯಗಳು ಮೈಸೂರು ಸಂಸ್ಥಾನದ ಭವಿಷ್ಯವನ್ನು ನಿರ್ಧರಿಸುತ್ತವೆ ಎಂದು ತಿಳಿಸಿದರು.

### ಸಮ್ಮೇಳನಾಧ್ಯಕ್ಷರ ಮೆರವಣಿಗೆ:

ಸಮ್ಮೇಳನದ ಅಧ್ಯಕ್ಷರ ಮೆರವಣಿಗೆಯಲ್ಲಿ ಭಾಗವಹಿಸಲು ಮಂಡ್ಯ, ಅರಕೆರೆ, ಪಾಂಡವಪುರ, ಮಳವಳ್ಳಿ, ಚನ್ನಪಟ್ಟಣ, ಮತ್ತು ಮದ್ದೂರಿನ

ಸುತ್ತಮುತ್ತಲಿನ ಗ್ರಾಮಗಳಿಂದ ಅಪಾರ ಪ್ರಮಾಣದಲ್ಲಿ ಜನರು ಕಾಲು ನಡಿಗೆಯಿಂದ, ಎತ್ತಿನ ಗಾಡಿಗಳಿಂದ ಆಗಮಿಸಿದ್ದರು. ಎತ್ತಿನಗಾಡಿ, ರೈಲುಗಾಡಿ, ಬಸ್ಸುಗಳ ಮೇಲೆಲ್ಲಾ 'ಶಿವಪುರ ರಾಷ್ಟ್ರಕೂಟ'ಕ್ಕೆ ಎಂಬ ಬ್ಯಾನರ್‌ಗಳು ತೂಗಾಡುತ್ತಿದ್ದವು. ಸಾಯಂಕಾಲದ ವೇಳೆಗೆ ಶಿವಪುರ ಮತ್ತು ಮದ್ದೂರು ಪಟ್ಟಣಗಳ ಬೀದಿಗಳಲ್ಲಿ ಎಲ್ಲೇ ನೋಡಿದರೂ ಖಾದಿ ಟೋಪಿಗಳೇ ಕಾಣುತ್ತಿದ್ದವು. ಅವ್ವೇರಹಳ್ಳಿ ಆರ್. ದಾಸೇಗೌಡರವರು ಖಾದಿಟೋಪಿ ಸಿದ್ಧಪಡಿಸಿ ಅಧಿವೇಶನದಲ್ಲಿ ಭಾಗವಹಿಸಿದವರಿಗೆಲ್ಲಾ ಹಂಚಿಕೆ ಮಾಡಿದರು.

೧೯೩೮ರ ಏಪ್ರಿಲ್ ೧೦ರ ಸಂಜೆ ೦೬ ಗಂಟೆಗೆ ಅಧಿವೇಶನದ ಅಧ್ಯಕ್ಷರಾದ ಟಿ.ಸಿದ್ದಲಿಂಗಯ್ಯನವರ ಮೆರವಣಿಗೆಯು ಪ್ರವಾಸಿ ಮಂದಿರದ ಬಳಿಯಿರುವ ಸರ್.ಎಂ.ಕಾಂತರಾಜೇ ಅರಸುರವರ ಮಾವಿನ ತೋಟದ ಹತ್ತಿರದಿಂದ ಅದ್ದೂರಿಯಾಗಿ ಪ್ರಾರಂಭವಾಯಿತು. ಇಲ್ಲಿಂದ ಎರಡು ಮೈಲಿ ದೂರದ ಶಿವಪುರದವರೆಗೂ ಮಾರ್ಗದುದ್ದಕ್ಕೂ ತಳಿರು ತೋರಣಗಳಿಂದ ಅಲಂಕರಿಸಲಾಗಿತ್ತು. ಅಧ್ಯಕ್ಷರ ಮೆರವಣಿಗೆಯ ರಥವು ವಿಶೇಷವಾಗಿ ಅಲಂಕೃತವಾಗಿತ್ತು. ಅದರ ಎರಡು ಗಾಲಿಯ ಜೋಡೆತ್ತಿನ ಗಾಡಿ ಅದರ ಮೇಲೆ ಮಂಟಪ, ಮೆಟ್ಟಲುಗಳುಳ್ಳ ವೇದಿಕೆ ನಿರ್ಮಾಣವಾಗಿತ್ತು. (ಹರಿಪುರದ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಅಧ್ಯಕ್ಷರ ಮೆರವಣಿಗೆಗೆ ಎತ್ತುಗಳನ್ನು ಬಳಸಲಾಗಿತ್ತು.) ಅಧ್ಯಕ್ಷರ ಜೋಡೆತ್ತಿನ ಗಾಡಿಯನ್ನು ಬಾಳೆಯ ಕಂಬಗಳಿಂದ, ವಿವಿಧ ರೀತಿಯ ಬಣ್ಣದ ಖಾದಿ ಬಟ್ಟೆ ಹಾಗೂ ರಾಷ್ಟ್ರ ಧ್ವಜಗಳಿಂದ ಅಲಂಕಾರ ಮಾಡಲಾಗಿತ್ತು. ಅಧ್ಯಕ್ಷ ಪೀಠದ ಎಡ–ಬಲ ಭಾಗ ಮತ್ತು ಹಿಂಬದಿಯಲ್ಲಿ ಶಿಸ್ತು, ಅಹಿಂಸೆ, ಸತ್ಯಗಳ ಸೂಕ್ತಿಯಿರುವ ಫಲಕಗಳನ್ನು ಎದ್ದು ಕಾಣುವಂತೆ ಹಾಕಲಾಗಿತ್ತು. ಅಧ್ಯಕ್ಷರ ರಥದ ಎಂಟು ಜೊತೆ ಎತ್ತುಗಳನ್ನು (ಮೈಸೂರು ಸಂಸ್ಥಾನದ ಒಂದು ಜಿಲ್ಲೆಗೆ ಒಂದೊಂದು ಜೊತೆಯ ಸಂಕೇತದಂತೆ) ಸಂಕ್ರಾಂತಿ ಹಬ್ಬದಂದು ಅಲಂಕರಿಸುವಂತೆ ಅಲಂಕರಿಸಲಾಗಿತ್ತು. ಅವುಗಳ ಮುಂದೆ ಅದೇ ರೀತಿ ಅಲಂಕರಿಸಿದ್ದ ೧೦೧ ಜೊತೆ ಎತ್ತುಗಳ ಗಾಡಿಗಳು ಸಾಲಾಗಿ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರು ಶುದ್ಧ ಖಾದಿಯಿಂದ ತಯಾರಿಸಿದ ಬಿಳಿ ಟೋಪಿ, ಪೈಜಾಮ, ಜುಬ್ಬ, ಹೆಗಲ ಮೇಲೆ ಖಾದಿಯ ಉತ್ತರಿಯನ್ನು ಧರಿಸಿದ್ದರು. (ಹರಿಪುರ ಕಾಂಗ್ರೆಸ್ ಅಧಿವೇಶನದಿಂದ ಹಿಂದಿರುಗುವಾಗ ಸೇವಾ ಗ್ರಾಮದಲ್ಲಿ



ಗಾಂಧಿಯನ್ನು ಭೇಟಿಯಾಗಿ ಮೈಸೂರು ಸಂಸ್ಥಾನದಲ್ಲಿ ಧ್ವಜ ಸತ್ಯಾಗ್ರಹ ಮಾಡಲು ಅನುಮತಿ ಕೇಳುವಾಗ ಪಾಶ್ಚಿಮಾತ್ಯರಂತೆ ಉಡುಪು ಧರಿಸಿದ್ದ ಟಿ.ಸಿದ್ದಲಿಂಗಯ್ಯನವರನ್ನು ನೋಡಿದ ಗಾಂಧಿ 'ನೀನು ಇಂಡಿಯಾ ದೇಶದ ಇಂಗ್ಲಿಷ್ ಅಧ್ಯಕ್ಷ, ನಿಮಗಿನ್ನೂ ಚಳವಳಿ ಮಾಡುವ ಶಕ್ತಿಯಿಲ್ಲ ಎಂದು ಹೇಳಿ ನಕ್ಕಿದ್ದರಂತೆ) ಶ್ರೀಮತಿ ಪಾರ್ವತಮ್ಮನವರು ತಮ್ಮ ಪತಿ ಟಿ.ಸಿದ್ದಲಿಂಗಯ್ಯ ನವರ ಪಾದ ಪೂಜೆ ಮತ್ತು ಮಂಗಳಾರತಿ ಮಾಡಿ ತಮ್ಮ ಪತಿಯ ಎರಡು ಕೈಗಳನ್ನು ಹಿಡಿದು ಸ್ವಾಗತ ಸಮಿತಿಯ ಅಧ್ಯಕ್ಷರಾದ ಎಸ್.ಚನ್ನಯ್ಯನವರಿಗೆ ಒಪ್ಪಿಸಿದರು. ಅದೊಂದು ರೋಮಾಂಚನಗೊಳಿಸುವ ಸನ್ನಿವೇಶವಾಗಿತ್ತು.

ಮೆರವಣಿಗೆಯು ಮದ್ದೂರಿನ ಪೇಟೆ ಬೀದಿಯ ಮೂಲಕ ಹಾದು ಹೋಗುವಾಗ ಅಕ್ಕಪಕ್ಕದ ಮನೆಯವರು ಮತ್ತು ಅಂಗಡಿಯವರೂ ಜಾತಿ ಭೇದವಿಲ್ಲದೆ ಎಲ್ಲಾ ಜಾತಿಗೆ ಸೇರಿದವರು ರಥವನ್ನು ನಿಲ್ಲಿಸಿ ಹಾರ ತುರಾಯಿಗಳನ್ನು ಅರ್ಪಿಸುವುದರ ಮೂಲಕ ಶಿವಪುರ ಅಧಿವೇಶನಕ್ಕೆ ತಮ್ಮ ಬೆಂಬಲವನ್ನು ವ್ಯಕ್ತಪಡಿಸಿದರು. ಮೈಸೂರಿನ ಮಹಮದ್ ಸೇಟ್‌ರು ಇದರಲ್ಲಿ ಪಾಲ್ಗೊಂಡಿದ್ದರು. ಮೆರವಣಿಗೆ ಹಾದು ಹೋಗುವಾಗ ಸತ್ಯಾಗ್ರಹಿಗಳು ಎಂಟು ಜಿಲ್ಲೆಯ ಪರವಾಗಿ ಹಾರಗಳನ್ನು ಅಧ್ಯಕ್ಷರಿಗೆ ಅರ್ಪಿಸಿದರು. ನಂತರ ಶಿವಪುರದ ಮುಖ್ಯ ಬೀದಿಯಲ್ಲಿ ಮೆರವಣಿಗೆ ಹಾದು ವೇದಿಕೆಯ ಬಳಿ ಸೇರಿತು. ಟಿ.ಸಿದ್ದಲಿಂಗಯ್ಯನವರು ಎತ್ತಿನ ಗಾಡಿಯ ರಥವನ್ನೇರಿ ಸುತ್ತಲೂ ಕೈ ಮುಗಿದು ಸತ್ಯಾಗ್ರಹಿಗಳಿಗೆ ನಮಸ್ಕರಿಸುತ್ತಿದ್ದರು. ರಥದ ಸಾರಥಿಯಾಗಿದ್ದವರು ಅನೇಕ ಬಾರಿ ಸರಕಾರದ ನಿಷೇಧಾಜ್ಞೆ ಉಲ್ಲಂಘಿಸಿ ಜೈಲಿಗೆ ಹೋಗಿ ಬಂದಿದ್ದ ಖಾದಿ ಶ್ವೇತ ವಸ್ತ್ರಧಾರಿ ಬೈರಾಪಟ್ಟಣದ ರೈತ ಮುಖಂಡ ಅಂಕೂಗೌಡ. ಮೆರವಣಿಗೆಯಲ್ಲಿ ಭಾಗವಹಿಸಿದ್ದ ಸತ್ಯಾಗ್ರಹಿಗಳು ಮಾರ್ಗದುದ್ದಕ್ಕೂ 'ಏನೇ ಬರಲಿ ಒಗ್ಗಟ್ಟಿರಲಿ', 'ಮಹಾತ್ಮ ಗಾಂಧೀಜಿಕೀ ಜೈ' 'ಕಾಂಗ್ರೆಸ್‌ಗೆ ಜಯವಾಗಲೀ' 'ಭಾರತ ಮಾತಾ ಕೀ ಜೈ' 'ಝಂಡಾ ಉಂಚಾ ರಹೇ ಹಮಾರ' ಎಂಬ ಘೋಷಣೆಗಳನ್ನು ಕೂಗುತ್ತಿದ್ದರೆ, ಮತ್ತೊಂದು ಕಡೆ ಸರ್ಕಾರದ ದಬ್ಬಾಳಿಕೆಯ ವಿರುದ್ಧ 'ಸರಕಾರದ ದಬ್ಬಾಳಿಕೆ ಅಳಿಯಲಿ' ಘೋಷಣೆ ಕೂಗುತ್ತಿದ್ದರು. ಟಿ.ಸುನಂದಮ್ಮ ಹೇಳಿಕೊಟ್ಟ 'ವಂದೇ ಮಾತರಂ ಗೀತೆಯನ್ನು' ಕ್ಯಾಪ್ಟನ್ ವೆಂಕಮ್ಮರವರ ನೇತೃತ್ವದಲ್ಲಿ ಸ್ವಯಂ ಸೇವಕಿಯರು ಹಾಡಿದರು. ಹತ್ತು ಸಾವಿರ ಮಂದಿ ಸತ್ಯಾಗ್ರಹಿಗಳು ಮೆರವಣಿಗೆಯಲ್ಲಿ

ಭಾಗವಹಿಸಿದ್ದರು. ಸಂಜೆ ಆರು ಗಂಟೆಗೆ ಪ್ರಾರಂಭವಾದ ಮೆರವಣಿಗೆಯು ಶಿವಪುರ ತಲುಪಿದಾಗ ರಾತ್ರಿ ಹನ್ನೊಂದು ಗಂಟೆ ಮೀರಿತ್ತು.

### ಸರ್ಕಾರದ ಧಮನಕಾರಿ ಕ್ರಮ:

ಮೈಸೂರು ಜಿಲ್ಲಾ ಮ್ಯಾಜಿಸ್ಟ್ರೇಟರ್ ಆಗಿದ್ದ ಜಿ.ಎಂ.ಮೇಕ್ರಿಯವರು ಪೊಲೀಸ್ ಕಾಯಿದೆಯ ೪ನೇ ನಿಯಮದಂತೆ ೧೯೩೮ರ ಏಪ್ರಿಲ್ ೧೦ನೇ ತಾರೀಖಿನಿಂದ ಒಂದು ತಿಂಗಳ ಕಾಲ ಮದ್ದೂರಿನ ಶಿವಪುರ ಗ್ರಾಮದ ಸುತ್ತಮುತ್ತಲಿನ ಐದು ಮೈಲಿ (ಎಂಟು ಕಿ.ಮೀ) ಪ್ರದೇಶದಾದ್ಯಂತ ಎಲ್ಲಿಯೂ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಬಾರದೆಂದೂ ಹಾಗೂ ಕಾಂಗ್ರೆಸ್ ಧ್ವಜಾರೋಹಣ ಮಾಡಕೂಡದೆಂದು ನಿಷೇಧಾಜ್ಞೆ (ಪ್ರತಿಬಂಧಕಾಜ್ಞೆ) ಹೊರಡಿಸಿದರು. ರಾಷ್ಟ್ರ ಧ್ವಜಾರೋಹಣದಿಂದ ಮೈಸೂರು ಮಹಾರಾಜರ ಆಧಿಪತ್ಯಕ್ಕೆ ಮತ್ತು ಅವರ ಧ್ವಜಕ್ಕೆ ಧಕ್ಕೆಯುಂಟಾಗುತ್ತದೆ ಎಂದು ಆಜ್ಞೆಯಲ್ಲಿ ತಿಳಿಸಲಾಗಿತ್ತು. ಮ್ಯಾಜಿಸ್ಟ್ರೇಟ್ ಹೊರಡಿಸಿದ ನಿಷೇಧಾಜ್ಞೆಯನ್ನು ಶಿವಪುರದ ಮುಖ್ಯ ಬೀದಿಗಳಲ್ಲಿ ಹಾಗೂ ಜನಜಂಗುಳಿಯಿದ್ದ ಪ್ರದೇಶಗಳಲ್ಲಿ ಪ್ರಚಾರ ಮಾಡಲಾಯಿತು. ಅಲ್ಲದೆ ಸರ್ಕಾರ ಧ್ವಜಾರೋಹಣವನ್ನು ವಿಫಲಗೊಳಿಸಲು ಅಪಾರ ಸಂಖ್ಯೆಯಲ್ಲಿ ಪೋಲಿಸ್‌ರನ್ನು ನಿಯೋಜಿಸಿತ್ತು. ಪಾಂಡವಪುರದ ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀಮುತ್ತೋಜಿರಾವ್ ಸಿಂದ್ಯ, ಮಂಡ್ಯದ ಸಬ್–ಡಿವಿಜನ್ ಆಫೀಸರ್ ಬಿ.ಬೀರಪ್ಪ, ಸಬ್‌ಇನ್ಸ್‌ಪೆಕ್ಟರ್ ರಾಜಶೇಖರಯ್ಯ, ಬಸವರಾಜೇ ಅರಸ್, ರಿಸರ್ವ್ ಪೋಲಿಸ್ ಇನ್ಸ್‌ಪೆಕ್ಟರ್ ಎ.ಎ.ಪರಡೂರ್, ಶಸ್ತ್ರಸಜ್ಜಿತರಾಗಿ ತಿರುಗಾಡುತ್ತಿದ್ದರು. ಒಂದು ಸಾವಿರ ಮಂದಿ ಪೊಲೀಸರು ಕೈಯಲ್ಲಿ ಲಾಟಿ ಹಿಡಿದು ಸಭೆ ಜರುಗುವ ಸ್ಥಳವನ್ನು ಸುತ್ತುಗಟ್ಟಿದರು. ಅವರ ಹಿಂದೆ ಸುಮಾರು ೬೦೦ ಮಂದಿ ಮೀಸಲು ಪಡೆಯ ಪೊಲೀಸರು ಬಂದೂಕುಧಾರಿಗಳಾಗಿ ಕುದುರೆಯನ್ನೇರಿ ಶಿವಪುರದಲ್ಲಿ ಗಸ್ತು ತಿರುಗುತ್ತಿದ್ದರು.

### ಕಾರ್ಯಕಾರಿ ಸಭೆಯ ನಿರ್ಣಯ:

ಕಾಂಗ್ರೆಸ್ ಮುಖಂಡರು ಕಾರ್ಯಕಾರಿ ಸಭೆಯನ್ನು ತುರ್ತಾಗಿ ಮಧ್ಯರಾತ್ರಿ ಕರೆದು ಪ್ರತಿಬಂಧಕಾಜ್ಞೆಯ ಸಾಧಕ ಬಾಧಕಗಳನ್ನು ಚರ್ಚಿಸಿದರು. ಬಹು ಮಂದಿ ನಾಯಕರು ಮಹಾರಾಜರ ನೇತೃತ್ವದಲ್ಲಿ ಜವಾಬ್ದಾರಿ ಸರ್ಕಾರದ



ಸ್ಥಾಪನೆಯೇ ಕಾಂಗ್ರೆಸ್‌ನ ಉದ್ದೇಶವಾಗಿದೆ. ಆದ್ದರಿಂದ ರಾಷ್ಟ್ರ ಧ್ವಜಾರೋಹಣದಿಂದ ಮಹಾರಾಜರ ಅಧಿಕೃತ ಧ್ವಜಕ್ಕೆ ಅಥವಾ ಆಧಿಪತ್ಯಕ್ಕೆ ಯಾವ ರೀತಿಯ ಧಕ್ಕೆಯುಂಟಾಗುವುದಿಲ್ಲ. ರಾಷ್ಟ್ರೀಯ ಕಾಂಗ್ರೆಸ್‌ನ ಅಧಿಕೃತ ಸಮಾರಂಭಗಳಲ್ಲಿ ರಾಷ್ಟ್ರ ಧ್ವಜವನ್ನು ಹಾರಿಸುವುದು ಅವಿಭಾಜ್ಯ ಅಂಗವೆಂದು ಸಭೆಯು ತೀರ್ಮಾನಿಸಿತು. ಕೆಲವು ನಾಯಕರು ಪ್ರತಿಬಂಧಕಾಜ್ಞೆ ಇರುವುದರಿಂದ ಧ್ವಜಾರೋಹಣ ಬೇಡ, ಸಭೆ ನಡೆಸೋಣ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಆದರೆ ಎಂ.ಎಸ್.ಜೋಯಿಸ್‌ರವರು (ಜಿ.ಒ.ಸಿ–ಜನರಲ್ ಆಫೀಸರ್ ಕಮಾಂಡಿಂಗ್ ಅಥವಾ ದಳಪತಿ) 'ನಾವು ಸರ್ಕಾರ ಏನು ಆಜ್ಞೆ ಮಾಡುತ್ತದೋ ಅದನ್ನು ಮುರಿಯುವುದಕ್ಕೆ ಇರುವ ಸತ್ಯಾಗ್ರಹಿಗಳು, ಸರಕಾರಕ್ಕೆ ಹೆದರಿದರೆ ನಾವು ಅಧಿವೇಶನ ಕರೆದು ಏನು ಪ್ರಯೋಜವಿಲ್ಲ. ಸರಕಾರದ ಆಜ್ಞೆಯನ್ನು ಉಲ್ಲಂಘಿಸಲೇ ಬೇಕು, ಧ್ವಜಾರೋಹಣವನ್ನು ಮಾಡಲೇಬೇಕು ಎಂದು ಕರೆಕೊಟ್ಟರು. ಟಿ.ಸುನಂದಮ್ಮ, ಯಶೋಧರಮ್ಮದಾಸಪ್ಪ ಮೊದಲಾದ ಸ್ತ್ರೀ ಸತ್ಯಾಗ್ರಹಿಗಳು ಬೆಂಬಲಿಸಿದರು. ಕೊನೆಗೆ ಸಭೆಯು ಧ್ವಜಾರೋಹಣ ಮಾಡಬೇಕೆಂದಿರುವ ಸ್ಥಳವು ಸರಕಾರದ್ದಲ್ಲ, ಖಾಸಗಿ ವ್ಯಕ್ತಿಯ ಸ್ಥಳವಾಗಿದೆ. ಆದ್ದರಿಂದ ಮೊದಲೇ ತೀರ್ಮಾನಿಸಿದಂತೆ ಧ್ವಜಾರೋಹಣ ಮಾಡುವುದು ಸರಿಯೆಂಬ ಬಹುಮತದ ನಿರ್ಣಯ ಕೈಗೊಂಡಿತು. ಮಹಿಳಾ ಸತ್ಯಾಗ್ರಹಿ ಟಿ.ಸುನಂದಮ್ಮ 'ನಾನೇ ಧ್ವಜಾರೋಹಣ ಮಾಡುತ್ತೇನೆ ಮುಂದಿನ ಕಾರ್ಯಕ್ರಮವನ್ನು ನೀವು ನೋಡಿಕೊಳ್ಳಿ' ಎಂದು ಅಧ್ಯಕ್ಷರಲ್ಲಿ ಮನವಿ ಮಾಡಿ ಕೊಂಡರು. ಇವರ ಉತ್ಕಟವಾದ ರಾಷ್ಟಾಭಿಮಾನದ ನಿಲುವನ್ನು ಎಲ್ಲಾ ಸತ್ಯಾಗ್ರಹಿಗಳು ಮುಕ್ತ ಕಂಠದಿಂದ ಶ್ಲಾಘಿಸಿದರು.

### ಮೊದಲ ದಿನದ ಧ್ವಜಾರೋಹಣ:

೧೯೩೮ರ ಏಪ್ರಿಲ್ ೧೧ ಅತ್ಯಂತ ಚಿರಸ್ಮರಣೀಯವಾದ ದಿನವಾಗಿದ್ದು, ಮೂರು ದಿನಗಳ ಧ್ವಜಾರೋಹಣದ ಕಾರ್ಯಕ್ರಮ ಪ್ರಾರಂಭವಾಯಿತು. ವೇದಿಕೆಯ ಬಳಿ ಎಚ್.ಸಿ.ದಾಸಪ್ಪ, ಸಾಹುಕಾರ್ ಚನ್ನಯ್ಯ, ಕೆ.ಟಿ. ಭಾಷ್ಯಂ, ಕೆ.ಸಿ.ರೆಡ್ಡಿ, ಹೆಚ್.ಬಿ.ಗುಂಡಪ್ಪಗೌಡ, ಎಚ್.ಕೆ.ವೀರಣ್ಣಗೌಡ, ಕೆ.ಹನುಮಂತಯ್ಯ, ಮಳವಳ್ಳಿ ವೀರಪ್ಪ, ನಾಯಕಿಯರಾದ ಶ್ರೀಮತಿ ಯಶೋದರಮ್ಮ ದಾಸಪ್ಪ, ಪಾರ್ವತಮ್ಮ ಸಿದ್ದಲಿಂಗಯ್ಯ, ವೆಂಕಟಮ್ಮ ಸೀತರಾಮಯ್ಯ, ಸುಬ್ಬಮ್ಮ

ಜೋಯಿಸ್, ಇಂದಿರಾ ಕೃಷ್ಣಮೂರ್ತಿ, ಟಿ. ಸುನಂದಮ್ಮ, ಮೊದಲಾದವರು ಉಪಸ್ಥಿತರಿದ್ದರು.

ಧ್ವಜಾರೋಹಣದ ವೇದಿಕೆಯ ಮುಂಭಾಗದಲ್ಲಿ ಅಧಿಕ ಸಂಖ್ಯೆಯಲ್ಲಿ ಸತ್ಯಾಗ್ರಹಿಗಳು ಬೆಳಿಗ್ಗೆ ೦೮ ಗಂಟೆಗೂ ಮೊದಲೇ ಬಂದು ಸೇರಿದ್ದರು. ಧ್ವಜಸ್ತಂಭಕ್ಕೆ ಧಕ್ಕೆಯಾಗದಂತೆ ಶ್ರೀಮತಿ ಯಶೋಧರಮ್ಮ ದಾಸಪ್ಪರವರ ನೇತೃತ್ವದಲ್ಲಿ ಸ್ತ್ರೀ ಸತ್ಯಾಗ್ರಹಿಗಳು ಯಾರೂ ಹತ್ತಿರ ಬರದಂತೆ ಧ್ವಜದ ಸುತ್ತಲೂ ಕಾವಲು ಕುಳಿತರು. ಧ್ವಜ ಮತ್ತು ಸ್ತ್ರೀ ಸತ್ಯಾಗ್ರಹಿಗಳ ರಕ್ಷಣೆಗಾಗಿ ಅವರ ಸುತ್ತಲೂ ಸ್ವಯಂಸೇವಕರು ಮತ್ತು ಸತ್ಯಾಗ್ರಹಿಗಳು ಕಾವಲು ಕಾಯುತ್ತಿದ್ದರೆ, ಸ್ವಯಂಸೇವಕರು ಮತ್ತು ಸತ್ಯಾಗ್ರಹಿಗಳ ಸುತ್ತಲೂ ಸಮಾವೇಶಕ್ಕೆ ಆಗಮಿಸಿದ್ದ ಜನಸಾಗರ ರಕ್ಷಣೆಗೆ ಸಿದ್ದರಾಗಿದ್ದರು. ಧ್ವಜಸ್ತಂಭದ ವೇದಿಕೆಯ ಮಂಭಾಗದಲ್ಲಿ ಬಿಳಿ ಟೋಪಿ, ಖಾದಿ ವಸ್ತ್ರಾಲಂಕೃತರಾಗಿದ್ದ ಸುಮಾರು ೪೦,೦೦೦ ಮಂದಿ ಸತ್ಯಾಗ್ರಹಿಗಳು ನಿರ್ದಿಷ್ಟವಾದ ಅಂತರದಲ್ಲಿ ಶಾಂತಿ ಮತ್ತು ಶಿಸ್ತಿನಿಂದ ಸಮಾರಂಭದಲ್ಲಿ ಭಾಗವಹಿಸಿದ್ದರು.

ಫ್ರೆಂಚ್‌ರಾಕ್ಸ್‌ನ (ಪಾಂಡವಪುರ) ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀಮುತ್ತೋಜಿರಾವ್ ಸಿಂದ್ಯರವರ ನೇತೃತ್ವದಲ್ಲಿ ಪೋಲಿಸ್ ಪಡೆ ಶಸ್ತ್ರಸಜ್ಜಿತರಾಗಿ ಧ್ವಜರೋಹಣ ಜರುಗದಂತೆ ನೋಡಿಕೊಳ್ಳಲು ಸಾಲಾಗಿ ಬಂದು ನಿಂತಿದ್ದರು. ಜಿಲ್ಲಾ ಮ್ಯಾಜಿಸ್ಟ್ರೇಟ್‌ರ ಆದೇಶವನ್ನು ಕಾರ್ಯಗತಗೊಳಿಸಲು ಎಸ್.ಪಿ. ಬೀರಪ್ಪನವರು ಸಿದ್ದರಾಗಿದ್ದರು. ಇದರಿಂದ ಉದ್ರೇಕಗೊಂಡ ಜನಸಮೂಹ ಕಾಂಗ್ರೆಸ್ ಪರವಾಗಿ ಜಯಕಾರ ಕೂಗ ತೊಡಗಿದರು. ಪರಿಸ್ಥಿತಿ ಕೈ ಮೀರುವುದನ್ನು ಅರಿತ ಕಾಂಗ್ರೆಸ್ ನಾಯಕರು ಧ್ವನಿವರ್ಧಕಗಳ ಮೂಲಕ ಚಳವಳಿಗಾರರನ್ನು ಉದ್ದೇಶಿಸಿ 'ಏನೇ ಬರಲಿ ಒಗ್ಗಟ್ಟಿರಲಿ' ಎಂಬ ಘೋಷಣೆಯನ್ನು ಕೂಗುತ್ತ, ಶಾಂತಿ ಮತ್ತು ಶಿಸ್ತಿನಿಂದ ವರ್ತಿಸುವಂತೆ ಮನವಿ ಮಾಡಿ ಕೊಳ್ಳುತ್ತಿದ್ದರು. ಜಿಲ್ಲಾಧಿಕಾರಿ ಮೇಕ್ರಿಯವರು ಯಾವುದೇ ರೀತಿಯ ಅಹಿತಕರ ಘಟನೆಗಳು ಜರುಗದಂತೆ ಎಚ್ಚರ ವಹಿಸಿದ್ದರು. ಹೀಗೆ ಮೈಸೂರು ಕಾಂಗ್ರೆಸ್‌ನ ಧ್ವಜಾರೋಹಣ ಕಾರ್ಯಕ್ರಮ ಶಿವಪುರದಲ್ಲಿ ಉದ್ರಿಕ್ತವಾದ ವಾತವಾರಣವನ್ನು ನಿರ್ಮಾಣ ಮಾಡಿದ್ದರೆ ಅತ್ತ ಮಹಾರಾಜರು ಮತ್ತು ದಿವಾನ್‌ರು ಊಟಿಯ ತಂಪಾದ



ಹವಾಮಾನದಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. (ರೋಂ ಹತ್ತಿ ಹುರಿಯುತ್ತಿದ್ದರೆ, ನೀರೋ ಪಿಟೀಲು ಭಾರಿಸುತ್ತಿದ್ದನಂತೆ)

ಮೊದಲೇ ಬೆಳಿಗ್ಗೆ ೮ ಗಂಟೆಗೆ ಧ್ವಜಾರೋಹಣ ಮಾಡುವ ಕಾರ್ಯಕ್ರಮ ನಿಗಧಿಯಾಗಿತ್ತು. ಧ್ವಜರೋಹಣಕ್ಕಾಗಿ ಅಧ್ಯಕ್ಷರಾದ ಟಿ. ಸಿದ್ದಲಿಂಗಯ್ಯನವರು ವೇದಿಕೆಯತ್ತ ಆಗಮಿಸುತ್ತಿದ್ದಂತೆ, ಸಾಂಪ್ರದಾಯಿಕವಾಗಿ ಸ್ವಯಂಸೇವಕ ದಳದ ಜಿ.ಒ.ಸಿ (ಜನರಲ್ ಆಫೀಸರ್ ಕಮಾಂಡಿಗ್) ಎಂ.ಎನ್. ಜೋಯಿಸರು ಧ್ವಜಾರೋಹಣ ಮಾಡಬೇಕೆಂದು ಅಧ್ಯಕ್ಷರನ್ನು ಕೇಳಿಕೊಂಡರು. ಟಿ. ಸಿದ್ದಲಿಂಗಯ್ಯನವರು ವೇದಿಕೆಯನ್ನೇರಿ ಧ್ವಜದ ದಾರದ ಗಂಟನ್ನು ಬಿಚ್ಚಲು ಮುಂದಾದಾಗ ಇನ್ಸ್‌ಪೆಕ್ಟರ್ ರಾಜಶೇಖರಯ್ಯ ಪ್ರತಿಬಂಧಕಾಜ್ಞೆ ಇರುವುದನ್ನು ಜ್ಞಾಪಿಸುತ್ತ ಧ್ವಜರೋಹಣ ಮಾಡದಂತೆ ಸಿದ್ದಲಿಂಗಯ್ಯನವರನ್ನು ತಡೆದರು. ಇದರಿಂದ ಕುಪಿತಗೊಂಡ ಟಿ.ಸಿದ್ದಲಿಂಗಯ್ಯನವರು ಧ್ವಜಾರೋಹಣ ಮಾಡುವ ತಮ್ಮ ನಿರ್ಧಾರವನ್ನು ಸ್ಪಷ್ಟಪಡಿಸುತ್ತ 'ನಾವು ಆಜ್ಞೆಯನ್ನು ಉಲ್ಲಂಘನೆ ಮಾಡುವುದು ಖಚಿತ ನೀವು ನಿಮ್ಮ ಕರ್ತವ್ಯವನ್ನು ಶಾಂತ ರೀತಿಯಿಂದ ಮಾಡಿ' ಬಲಪ್ರದರ್ಶನಕ್ಕೆ ಅವಕಾಶ ಮಾಡಿ ಕೊಡಬೇಡಿ ಎಂದು ವಿನಂತಿಸಿ ಕೊಂಡರು. ಸ್ವಲ್ಪ ಸಮಯ ಪೊಲೀಸರು ಮತ್ತು ಸತ್ಯಾಗ್ರಹಿಗಳ ನಡುವೆ ಸಂಘರ್ಷ ಏರ್ಪಟ್ಟಿತು. ಯಶೋದಮ್ಮ ದಾಸಪ್ಪನವರು ವೇದಿಕೆ ಹತ್ತಿ 'ದಯಮಾಡಿ ಪೊಲೀಸಿನವರು ವೇದಿಕೆ ಬಿಟ್ಟು ದೂರ ನಿಂತರೆ ಶಿಸ್ತಿನಿಂದ ಆಜ್ಞೆ ಪಾಲಿಸುತ್ತೇವೆ' 'ಯಾರಿಗೂ ಘರ್ಷಣೆ ಅನಗತ್ಯ' ಎಂದು ಮನವಿ ಮಾಡಿ ಕೊಂಡರು. ನಂತರ ಸಿದ್ದಲಿಂಗಯ್ಯನವರು ನಾನು ಈಗ ಧ್ವಜಾರೋಹಣ ಮಾಡುತ್ತಿದ್ದೇನೆ ಎಂದು ಹೇಳಿ ಧ್ವಜದ ದಾರವನ್ನು ಬಿಚ್ಚುತ್ತಿದ್ದಂತೆ ಪೋಲಿಸರು ಟಿ.ಸಿದ್ದಲಿಂಗಯ್ಯನವರನ್ನು ಬಂಧಿಸಿದರು. ಶ್ರೀಮತಿ ಸುನಂದಮ್ಮನವರು ವಂದೇ ಮಾತರಂ, ರಾಷ್ಟ್ರ ಗೀತೆಯನ್ನು ಹಾಡುತ್ತಿದ್ದಂತೆ ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮದ ಜೈಕಾರ ಮುಗಿಲು ಮುಟ್ಟಿತು. ಅಧ್ಯಕ್ಷರ ದಸ್ತಗಿರಿಯ ನಂತರ ಧ್ವಜಹಾರಿಸುವ ಹೊಣೆಯನ್ನು ಎಂ.ಎನ್.ಜೋಯಿಸ್ ಮತ್ತು ಅವರ ಜೊತೆಗಿದ್ದ ಸತ್ಯಾಗ್ರಹಿಗಳು ವಹಿಸಿಕೊಂಡು ರಾಷ್ಟ್ರಧ್ವಜವನ್ನು ಹಾರಿಸಿ ಧ್ವಜವಂದನೆ ಸಲ್ಲಿಸಿದರು, ಟಿ.ಸುನಂದಮ್ಮನವರು ಧ್ವಜಗೀತೆಯನ್ನು ಹಾಡುವುದರ ಮೂಲಕ ನೆರೆದಿದ್ದ ಸತ್ಯಾಗ್ರಹಿಗಳಲ್ಲಿ ರಾಷ್ಟ್ರಾಭಿಮಾನವನ್ನು ಅನಾವರಣ ಗೊಳಿಸಿದರು. ಪೋಲಿಸರು

ಧ್ವಜ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದ ಪ್ರಮುಖ ನಾಯಕರನ್ನೆಲ್ಲಾ ದಸ್ತಗಿರಿ ಮಾಡಿದರು.

ಸಿದ್ದಲಿಂಗಯ್ಯನವರು 'ಗಾಂಧಿಯವರ ಶಾಂತಿ ಮತ್ತು ಅಹಿಂಸಾತ್ಮಕ ಮಾರ್ಗದಲ್ಲಿ ಭಾರತ ರಾಷ್ಟ್ರದ ಮಾನ ಕಾಪಾಡಿ, ಯಾವ ರೀತಿಯಲ್ಲೂ ಪ್ರತಿಕಾರ ಭಾವನೆ ಬೇಡ' ಎಂದು ಚಳವಳಿಗಾರರನ್ನು ವಿನಂತಿಸುತ್ತ ಸೆರೆಮನೆಗೆ ತೆರಳಿದರು. ತೆರವಾದ ಅಧ್ಯಕ್ಷತೆಯನ್ನು ಹೆಚ್.ಸಿ.ದಾಸಪ್ಪನವರು ವಹಿಸಿಕೊಂಡರೆ, ಎಂ.ಎನ್.ಜೋಯಿಸರ ಸ್ಥಾನಕ್ಕೆ ಡಾ. ಪಾರ್ಥನಾರಾಯಣ ಪಂಡಿತರು ನೇಮಕಗೊಂಡರು. ತೆರವಾದ ಸ್ವಾಗತ ಸಮಿತಿಯ ಅಧ್ಯಕ್ಷರಾಗಿ ಎಸ್.ಚೆನ್ನಯ್ಯ ನೇಮಕ ಗೊಂಡರು.

ದಿವಾನರು ಧ್ವಜಾರೋಹಣವನ್ನು ವಿಫಲ ಗೊಳಿಸಲು ಮತ್ತು ಜನತೆಯನ್ನು ಚದುರಿಸಲು ಗೋಲಿಬಾರ್ ಮಾಡಲು ಐ.ಜಿ.ಪಿ.ಹ್ಯಾಮಿಲ್ಟನ್‌ನನ್ನು ನೇಮಿಸಿದ್ದರು. ಇದರಂತೆ ಐಜಿಪಿ ಹ್ಯಾಮಿಲ್ಟನ್ (ಹ್ಯಾಮಿಲ್ಟನ್ ಮದರಾಸ್‌ನಲ್ಲಿ ದಮನಕಾರಿ ನೀತಿಯನ್ನು ಕೈಗೊಂಡ ಕ್ರೂರ ಪೋಲಿಸ್ ಅಧಿಕಾರಿಯಾಗಿದ್ದನು.) ಗೋಲಿಬಾರ್‌ಗೆ ಆಜ್ಞಾಪಿಸುವಂತೆ ಜಿಲ್ಲಾ ಮ್ಯಾಜಿಸ್ಟೇಟರನ್ನು ಕೇಳಿಕೊಂಡಾಗ, ಜಿಲ್ಲಾ ಮ್ಯಾಜಿಸ್ಟ್ರೇಟ್ ಮೇಕ್ರಿಯವರು ಶಾಂತರೀತಿಯಲ್ಲಿ ಅಧಿವೇಶನ ಮಾಡಿದರೆ ಮುಗ್ಧ ಜನರ ಮೇಲೆ ಕಾರಣವಿಲ್ಲದೆ ಹೇಗೆ ಗೋಲಿಬಾರಿಗೆ ಆಜ್ಞಾಪಿಸಲಿ ಎಂದರಂತೆ, ಐಜಿಪಿ ಹ್ಯಾಮಿಲ್ಟನ್ ದಿವಾನರ ಆದೇಶವಿದೆ ಎಂದು ಪಟ್ಟು ಹಿಡಿದಾಗ ದಿವಾನರು ಹಾಗೆಂದು ಲಿಖಿತವಾಗಿ ಕೊಟ್ಟರೆ ಆಜ್ಞೆ ಮಾಡುತ್ತೇನೆ ಎಂದರಂತೆ, ಜಿಲ್ಲಾಧಿಕಾರಿ ಮೇಕ್ರಿಯವರು ಕೈಗೊಂಡ ದೃಢವಾದ ನಿಲುವಿನಿಂದ ಸಂಭವಿಸಬಹುದಾದ ಜಲಿಯನ್‌ವಾಲಾ ಬಾಗ್‌ನಂತಹ ದುರಂತವನ್ನು ಮತ್ತು ಅಪಾರ ಸಾವು ನೋವನ್ನು ತಪ್ಪಿಸಿದರು.

ಜಿಲ್ಲಾ ಮ್ಯಾಜಿಸ್ಟ್ರೇಟ್‌ರವರು ಹೊರಡಿಸಿದ್ದ ಆಜ್ಞೆಯನ್ನು ಉಲ್ಲಂಘಿಸಿ ದಸ್ತಗಿರಿಯಾಗಿದ್ದ ಟಿ.ಸಿದ್ದಲಿಂಗಯ್ಯ ಮತ್ತು ಎಂ.ಎನ್.ಜೋಯಿಸ್‌ರವರನ್ನು ಮಂಡ್ಯದ ಮೊದಲನೆ ವರ್ಗದ ಮ್ಯಾಜಿಸ್ಟ್ರೇಟ್‌ರ ಮುಂದೆ ಹಾಜರು ಪಡಿಸಲಾಯಿತು. ವಿಚಾರಣೆಯ ವೇಳೆ ಬಂಧಿತರು ತಪ್ಪಿತಸ್ಥರೆಂದು ರುಜುವಾತಾಯಿತು. ಪರಿಣಾಮವಾಗಿ ಟಿ.ಸಿದ್ದಲಿಂಗಯ್ಯನವರಿಗೆ ಎರಡುವರೆ ತಿಂಗಳು ಮತ್ತು ಎಂ.ಎಸ್.ಜೋಯಿಸ್‌ರವರಿಗೆ ಮೂರುವರೆ ತಿಂಗಳು ಸಾದಾ ಶಿಕ್ಷೆ ವಿಧಿಸಲಾಯಿತು.



**ವಿಷಯ ನಿಯಾಮಕ ಸಮಿತಿಯ ಸಭೆಯ ನಿರ್ಣಯಗಳು:**

ಮೊದಲ ದಿನದ ಧ್ವಜಾರೋಹಣ ಜರುಗಿದ ನಂತರ ಬೆಳಿಗ್ಗೆ ೧೦ ಗಂಟೆಗೆ ವಿಷಯ ನಿಯಾಮಕ ಸಮಿತಿ ಸಭೆ ಜರುಗಿತು. ಕೆ.ಟಿ.ಭಾಷ್ಯಂರವರ ಅಧ್ಯಕ್ಷತೆಯಲ್ಲಿ (ಇದರ ಅಧ್ಯಕ್ಷರಾದ ಹೆಚ್.ಸಿ.ದಾಸಪ್ಪ ಧ್ವಜ ರಕ್ಷಣೆಗೆ ಕುಳಿತಿದ್ದರಿಂದ) ಅನೇಕ ವಿಷಯಗಳು ಚರ್ಚಿಸಲ್ಪಟ್ಟವು. ಅವುಗಳೆಂದರೆ: ೧). ಮೈಸೂರು ಸರ್ಕಾರ ಮೈಸೂರು ಸಂಸ್ಥಾನದ ಕಾಂಗ್ರೆಸ್ ಪಕ್ಷವನ್ನು ಒಪ್ಪಿಕೊಳ್ಳಬೇಕು. ೨). ಮಹಾರಾಜರ ಆಶ್ರಯದಲ್ಲಿ ಜವಬ್ದಾರಿ ಸರ್ಕಾರವನ್ನು ಸ್ಥಾಪನೆಯಾಗಬೇಕು. ೩). ಮೈಸೂರು ಸರ್ಕಾರ ನೇಮಿಸಿರುವ ಸಮಿತಿಯನ್ನು ಕಾಂಗ್ರೆಸ್ ತಿರಸ್ಕರಿಸುವ ನಿರ್ಣಯ ಕೈಗೊಳ್ಳಲಾಯಿತು.

**ಮೊದಲ ದಿನದ ಸಂಜೆ ಬಹಿರಂಗ ಅಧಿವೇಶನ:**

ಮೊದಲ ದಿನದ ಮೈಸೂರು ಕಾಂಗ್ರೆಸ್‌ನ ಬಹಿರಂಗ ಅಧಿವೇಶನ ಸಂಜೆ ೬–೦೦ ಗಂಟೆಗೆ ಧ್ವಜ ಮೈದಾನದ ಸಭಾಂಗಣದಲ್ಲಿ ಜರುಗಿತು. ಅಧಿವೇಶನದ ಸ್ವಾಗತಾಧ್ಯಕ್ಷರಾದ ಎಸ್.ಚನ್ನಯ್ಯನವರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿ ದಸ್ತಗಿರಿಯಾದ ಟಿ.ಸಿದ್ದಲಿಂಗಯ್ಯ ಮತ್ತು ಎಂ.ಎನ್.ಜೋಯಿಸ್ ರವರನ್ನು ಅಭಿನಂದಿಸುತ್ತಾ, ರಾಷ್ಟ್ರಧ್ವಜದ ಗೌರವವನ್ನು ಕಾಪಾಡಿದ ಕೀರ್ತಿ ಇಂದು ಮೈಸೂರು ಸಂಸ್ಥಾನದ ಎಲ್ಲಾ ಜನತೆಗೆ ಸಲ್ಲುತ್ತದೆ ಎಂದು ಕೃತಜ್ಞತೆ ಸಲ್ಲಿಸಿದರು. ಹೆಚ್.ಸಿ.ದಾಸಪ್ಪನವರ ವಿಧಿವತ್ತಾಗಿ ರಾಷ್ಟ್ರಧ್ವಜದ ಕೆಳಗಿಳಿಸಿದ ನಂತರ ಮೊದಲ ದಿನದ ಮೈಸೂರು ಕಾಂಗ್ರೆಸ್‌ನ ಬಹಿರಂಗ ಅಧಿವೇಶನ ಪ್ರಾರಂಭವಾಯಿತು. ಜಿ.ಓ.ಸಿ. ಡಾ. ವೈ.ಪಾರ್ಥನಾರಾಯಣ ಪಂಡಿತರು ಅಧ್ಯಕ್ಷರಿಗೆ ವಂದನೆ ಮಾಡಿ ಗೌರವ ಸಲ್ಲಿಸಿದರು. ಸ್ವಾಗತ ಭಾಷಣ ಮಾಡಿದ ಹೆಚ್.ಸಿ.ಚನ್ನಯ್ಯನವರು ಶಿವಪುರ ರಾಷ್ಟ್ರಕೂಟದ ಉದ್ದೇಶ, ಅಂದಿನ ಮೈಸೂರು ಸರ್ಕಾರದ ಜನ ವಿರೋಧಿ ಕಾರ್ಯ ಚಟುವಟಿಕೆಗಳು, ಜವಾಬ್ದಾರಿ ಸರ್ಕಾರ ರಚನೆ ಮೊದಲಾದ ವಿಷಯಗಳ ಬಗ್ಗೆ ಸ್ಪಷ್ಟ ನಿಲುವನ್ನು ಹೊಂದಿದ್ದರು.

ವಿಷಯ ನಿಯಾಮಕ ಸಮಿತಿಯಲ್ಲಿ ಅಂಗೀಕರಿಸಿದ್ದ ನಿರ್ಣಯಗಳನ್ನು ಬಹಿರಂಗ ಅಧಿವೇಶನದ ಮುಂದೆ ಅನುಮತಿಗಾಗಿ ತರಲಾಯಿತು. ಬಹಿರಂಗ ವೇದಿಕೆಯಲ್ಲಿ ಈ ವಿಷಯಗಳಿಗೆ ಸಂಬಂಧಿಸಿದಂತೆ ಕೂಲಂಕುಷವಾಗಿ ಚರ್ಚೆ

ನಡೆದು, ಬಹುಮತದೊಂದಿಗೆ ವಿಷಯ ನಿಯಾಮಕ ನಿರ್ಣಯಗಳು ಅಂಗೀಕಾರವಾದವು. ಕೊನೆಗೆ ರಾತ್ರಿ ಒಂಬತ್ತು ಗಂಟೆಗೆ ಬಹಿರಂಗ ಅಧಿವೇಶನ ಅಂತ್ಯಗೊಂಡಿತು. ಈ ಸಮಾವೇಶದಲ್ಲಿ ೨೦ ಸಾವಿರಕ್ಕೂ ಹೆಚ್ಚು ಜನ ಭಾಗವಹಿಸಿದ್ದರು. ಒಂದು ಸಾವಿರಕ್ಕೂ ಹೆಚ್ಚು ಮಂದಿ ಮಹಿಳೆಯರಿದ್ದರು. ಸಾರ್ವಜನಿಕ ಸಮಾರಂಭದಲ್ಲಿ ಮೈಸೂರಿನ ಎನ್.ವಿಷಕಂಠರಾಯರು ರಾಷ್ಟ್ರೀಯ ಭಾವನೆಗಳನ್ನು ಉದ್ದೀಪಿಸುವ ಲಾವಣಿಗಳನ್ನು ಹಾಡಿದರು.

### ಅಧಿವೇಶನದ ಯಶಸ್ಸಿಗೆ ಸಂದೇಶಗಳು:

ಮೈಸೂರು ಕಾಂಗ್ರೆಸ್‌ನ ಮೊಟ್ಟ ಮೊದಲ ಅಧಿವೇಶನವಾದ ಶಿವಪುರ ಅಧಿವೇಶನಕ್ಕೆ ಯಶಸ್ಸು ಕೋರಿ ಅನೇಕ ರಾಷ್ಟ್ರ ನಾಯಕರು ಸಂದೇಶಗಳನ್ನು ಕಳುಹಿಸಿದ್ದರು. ಈ ಸಂದೇಶಗಳನ್ನು ಎಚ್.ಕೆ.ವೀರಣ್ಣಗೌಡರವರು ಓದಿದರು. ಇವರಲ್ಲಿ ಪ್ರಮುಖರೆಂದರೆ ಜವಹರಲಾಲ್ ನೆಹರುರವರು 'ಹಿಂದೀ ಸಂಸ್ಥಾನಗಳ ಸಮಸ್ಯೆಯಲ್ಲಿ ನಾನು ಹೆಚ್ಚು ಆಸಕ್ತಿ ವಹಿಸಿದ್ದರೂ, ಹೆಚ್ಚಿನ ಸುಧಾರಣೆಗಾಗಿ ಮೈಸೂರು ಸಂಸ್ಥಾನದವರು ನಡೆಸಿದ ಚಟುವಟಿಕೆಗಳಲ್ಲಿ ನಾನು ವಿಶೇಷ ಆಸಕ್ತಿವಹಿಸಿರುವುದುಂಟು. ಆದ್ದರಿಂದ ನಾನು ನಿಮ್ಮ ಕಾರ್ಯದಲ್ಲಿ ಸಹಾನುಭೂತಿ ಉಳ್ಳವನಾಗಿರುವೆನು' ಎಂದು ಆಶಿಸಿದ್ದಾರೆ.

ಇದೇ ರೀತಿ ಮದರಾಸ್‌ನ ಮಂತ್ರಿ ಕೆ.ರಾಮನ್ ಮೆನನ್, ಮುಂಬೈನ ಮುಖ್ಯಮಂತ್ರಿ ಬಿ.ಜಿ.ಖೇರ್, ಆಂಧ್ರವಿಶ್ವವಿದ್ಯಾಲಯದ ಉಪಕುಲಪತಿ ಡಾ. ಸಿ.ಆರ್.ರೆಡ್ಡಿ, ಮದರಾಸ್‌ನ ಲೆಜಿಸ್ಲೇಟಿವ್ ಕೌನ್ಸಿಲ್‌ನ ಅಧ್ಯಕ್ಷ ಡಾ. ಯು. ರಾಮರಾವ್, ಆರ್.ಆರ್. ದಿವಾಕರ್, ಡಾ.ಪಟ್ಟಾಭಿಸೀತಾರಾಮಯ್ಯ, ಡಾ. ಹರ್ಡೀಕರ್, ಬಲವಂತರಾಯ್ ಮೆಹತಾ, ಸಿ.ರಾಜಗೋಪಾಲ ಚಾರಿ, ಉಮಾಬಾಯಿ ಕುಂದಾಪುರ, ಕಮಲಾದೇವಿ ಚಟ್ಟೋಪಧ್ಯಾಯ, ಅಧಿವೇಶನದ ಯಶಸ್ಸಿಗೆ ತಮ್ಮ ಸಂದೇಶಗಳನ್ನು ಕಳುಹಿಸಿದ್ದರು.

### ಜಿಲ್ಲಾ ಮ್ಯಾಜಿಸ್ಟ್ರೇಟರ ಭೇಟಿ:

ಶಿವಪುರ ಧ್ವಜ ಸತ್ಯಾಗ್ರಹ ಕಾರ್ಯಕ್ರಮವು ಒಂದು ತಿಂಗಳು ನಡೆಯಬೇಕಾಗಿರುವುದರಿಂದ ಅಹಿಂಸಾತ್ಮಕ ಘಟನೆಗಳು ಜರುಗದಂತೆ



ನೋಡಿಕೊಳ್ಳಲು ಹೆಚ್.ಕೆ.ವೀರಣ್ಣಗೌಡ ಮತ್ತು ಡಾ. ಪಾರ್ಥನಾರಾಯಣ ಪಂಡಿತರು ಜಿಲ್ಲಾ ಮ್ರಾಜಿಸ್ಟ್ರೇಟ್ ಮೇಕ್ರಿಯವರನ್ನು ಭೇಟಿಯಾಗಿ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. 'ನಾವು ಧ್ವಜ ಸತ್ಯಾಗ್ರಹವನ್ನು ನಿಲ್ಲಿಸುವುದಿಲ್ಲ ಮುಂದುವರಿಸುತ್ತೇವೆ, ಒಂದು ವೇಳೆ ನೀವು ಗೋಲಿಬಾರ್‌ಗೆ ಆಜ್ಞಾಪಿಸಿದರೆ ನಿರಪರಾಧಿ ಜನರು ಸಾಯುತ್ತಾರೆ.' ಎಂದು ತಿಳಿಸಿದಾಗ ಮೇಕ್ರಿಯವರು 'ನೋಡಿ ವಿನಾಕಾರಣ ಗೋಲಿಬಾರ್‌ಗೆ ಆಜ್ಞಾಪಿಸುವುದಿಲ್ಲ, ನಮಗೂ ದೇಶಭಕ್ತಿ ಇದೆ. ಆದರೆ ಪರಿಸ್ಥಿತಿ ನಮ್ಮನ್ನೂ, ನಿಮ್ಮನ್ನೂ ಬೇರೆ ಬೇರೆ ಮಾಡಿದೆ ಎಂದು ಭಾವನಾತ್ಮಕವಾಗಿ ಹೇಳುತ್ತಾ ಅಹಿತಕರ ಘಟನೆಗಳು ಜರುಗದಂತೆ ಶಾಂತಿಯಿಂದ ಧ್ವಜಾರೋಹಣವನ್ನು ನಡೆಸಿದರೆ ಯಾರಿಗೂ ತೊಂದರೆಯಾಗುವುದಿಲ್ಲ, ಜನರು ಶಾಂತಿಯಿಂದ ನಡೆದುಕೊಳ್ಳುವಂತೆ ನಾವು ಕಾನೂನನ್ನು ಪಾಲಿಸ ಬೇಕಾಗಿದೆ ಆದ್ದರಿಂದ ಅಹಿಂಸಾತ್ಮಕವಾದ ಹೋರಾಟಕ್ಕೆ ಧಕ್ಕೆಯಾಗುವುದಿಲ್ಲವೆಂದು ಭರವಸೆ ಕೊಟ್ಟರು. ನಂತರ ಮುಖಂಡರು ಮೇಕ್ರಿಯವರಿಗೆ ವಂದನೆಗಳನ್ನು ಸಲ್ಲಿಸುತ್ತ 'ನಿಮ್ಮ ಕರ್ತವ್ಯವನ್ನು ನೀವು ಪಾಲಿಸಿ, ನಮ್ಮ ಕರ್ತವ್ಯವನ್ನು ನಾವು ಪಾಲಿಸುತ್ತೇವೆ' ಎಂದು ಹೇಳಿ ಹೊರ ಬಂದರು. ಮೇಕ್ರಿಯವರ ಭೇಟಿಯಿಂದ ನಾಯಕರು ಶಾಂತಿಯಿಂದ ಕಾರ್ಯಕ್ರಮವನ್ನು ನಡೆಸಿದರೆ ಪ್ರಾಣಾಪಾಯವಿಲ್ಲದಿರುವುದನ್ನು ದೃಢಪಡಿಸಿಕೊಂಡರು.

### ಪತ್ರಿಕೆಗಳ ಪ್ರಕಟಣೆಗಳು:

೧೯೩೮ರ ಏಪ್ರಿಲ್ ೧೧ ರಂದು ನಡೆದ ಧ್ವಜ ಸತ್ಯಾಗ್ರಹದ ಸಂದರ್ಭದಲ್ಲಾದ ದಸ್ತಗಿರಿಗಳನ್ನು ಕುರಿತು ಮಾರನೆ ದಿನದ ಪತ್ರಿಕೆಗಳಲ್ಲಿ ವಿಶೇಷ ಸುದ್ದಿಗಳು ಪ್ರಕಟವಾದವು. ಬಹುತೇಕ ಪತ್ರಿಕೆಗಳಲ್ಲಿ ಶಿವಪುರ ಧ್ವಜ ಸತ್ಯಾಗ್ರಹಕ್ಕೆ ಬೆಂಬಲ ಕೊಡುವ ಬರಹಗಳಿಂದ ಕೂಡಿದ್ದವು. ಮೈಸೂರು ಸಂಸ್ಥಾನದ ಶಿವಪುರ ಧ್ವಜ ಸತ್ಯಾಗ್ರಹವು ರಾಷ್ಟ್ರದಾದ್ಯಂತ ಸುದ್ದಿಯಾಯಿತು. ಅನೇಕ ರಾಷ್ಟ್ರೀಯ ಪತ್ರಿಕೆಗಳು ಪ್ರಮುಖ ಲೇಖನಗಳನ್ನು, ಸಂಪಾದಕೀಯವನ್ನು ಪ್ರಕಟಿಸಿದವು. ೧೯೩೮ರ ಏಪ್ರಿಲ್ ೧೨ ರ ಸಂಯುಕ್ತ ದಿನ ಪತ್ರಿಕೆಯಲ್ಲಿ 'ಮೈಸೂರಿನಲ್ಲಿ ಮತ್ತೆ ಬಿರುಗಾಳಿ' ಎಂಬ ಶೀರ್ಷಿಕೆಯ ಸಂಪಾದಕೀಯದಲ್ಲಿ 'ಈಗ ಎರಡು ಮೂರು ತಿಂಗಳಿಂದ ಶಾಂತವಾಗಿದ್ದ ಮೈಸೂರಿನ ವಾತಾವರಣವು ಮತ್ತೆ ಪ್ರಕ್ಷುಬ್ಧವಾಗಿ ಪುನ: ಬಿರುಗಾಳಿ ಬೀಸುವ ಲಕ್ಷಣಗಳು ಕಂಡುಬರುತ್ತಿವೆ.

ಶಿವಪುರ ಅಧಿವೇಶನದಲ್ಲಿ ಮ್ಯಾಜಿಸ್ಟ್ರೇಟರ ಆಜ್ಞೆಯನ್ನು ಧಿಕ್ಕರಿಸಿ ಧ್ವಜಾರೋಹಣ ಮಾಡಲು ಮುಂದಾದ ಟಿ.ಸಿದ್ದಲಿಂಗಯ್ಯ ಮತ್ತು ಎಂ.ಎನ್.ಜೋಯಿಸ್‌ರವರನ್ನು ಸರಕಾರ ಬಂಧಿಸಿ ಶಿಕ್ಷೆ ವಿಧಿಸಿದೆ ಎಂದು ಪ್ರಕಟಿಸಿದವು.

## ಎರಡನೇ ದಿನದ ಧ್ವಜಾರೋಹಣ:

೧೯೩೮ರ ಏಪ್ರಿಲ್ ೧೨ ರಂದು ಬೆಳಿಗ್ಗೆ ಜರುಗಿದ ಎರಡನೇ ದಿನದ ಧ್ವಜಾರೋಹಣದಲ್ಲಿ ಅಪಾರ ಸಂಖ್ಯೆಯಲ್ಲಿ ಸತ್ಯಾಗ್ರಹಿಗಳು ಭಾಗವಹಿಸಿದ್ದರು. ಧ್ವಜಾರೋಹಣ ಸಮಯ ಸಮೀಪಿಸುತ್ತಿದ್ದಂತೆ ಶಸ್ತ್ರಸಜ್ಜಿತ ಪೋಲಿಸರು ನಿರ್ದಿಷ್ಟ ಸ್ಥಳದಲ್ಲಿ ನಿಂತುಕೊಂಡರು. ಸ್ವಯಂ–ಸ್ವೇವಕರು ಮತ್ತು ಸತ್ಯಾಗ್ರಹಿಗಳಿಂದ 'ಝಂಡಾ ಊಂಚಾ ರಹೇ ಹಮಾರ' ಎಂಬ ಗೀತೆ ಮೊಳಗಿತು. ಧ್ವಜಾರೋಹಣ ಮಾಡಲು ಬೆಳಿಗ್ಗೆ ಎಂಟು ಗಂಟೆಗೆ ಸರಿಯಾಗಿ ಅಧ್ಯಕ್ಷರಾದ ಎಚ್.ಸಿ.ದಾಸಪ್ಪನವರು, ಜಿ.ಒ.ಸಿ.ಪಾರ್ಥನಾರಾಯಣ ಪಂಡಿತರೊಡನೆ ಧ್ವಜ ಸ್ತಂಭದ ವೇದಿಕೆಗೆ ಆಗಮಿಸಿದರು. ಜಿ.ಒ.ಸಿ ಪಾರ್ಥನಾರಾಯಣ ಪಂಡಿತರು ಅಧ್ಯಕ್ಷರಿಗೆ ವಂದನೆ ಅರ್ಪಿಸಿ ಧ್ವಜಾರೋಹಣ ಮಾಡಲು ಕೇಳಿಕೊಂಡರು. ಹೆಚ್.ಸಿ.ದಾಸಪ್ಪನವರು ತಾವು ಧ್ವಜಾರೋಹಣ ಮಾಡಲು ಮುಂದಾದಾಗ ಜಿಲ್ಲಾ ಪೋಲಿಸ್ ಸೂಪರಿಂಡೆಂಟ್ ರುಕ್ಕೋಜಿರಾವ್‌ಸಿಂಧ್ಯಾರವರು ಧ್ವಜಾರೋಹಣ ಮಾಡಕೂಡದೆಂದು ದಾಸಪ್ಪನವರನ್ನು ತಡೆದು ದಸ್ತಗಿರಿ ಮಾಡಿದರು. ನಂತರ ಅವರ ಸ್ಥಾನಕ್ಕೆ ನೇಮಕಗೊಂಡ ವಿ.ವೆಂಕಟಪ್ಪನವರು ಧ್ವಜದ ವೇದಿಕೆಯನ್ನೇರಿ ಧ್ವಜರೋಹಣ ಮಾಡುವುದಾಗಿ ಘೋಷಿಸುತ್ತಿದ್ದಂತೆ ಅವರನ್ನು ಸಹ ಪೋಲಿಸರು ದಸ್ತಗಿರಿ ಮಾಡಿದರು. ನಂತರ ವಿ.ವೆಂಕಟಪ್ಪನವರ ಸ್ಥಾನಕ್ಕೆ ಕೆ.ಸಿ.ರೆಡ್ಡಿಯವರು ನೇಮಕ ಗೊಂಡರು. ಕೆ.ಸಿ.ರೆಡ್ಡಿಯವರು ಧ್ವಜಾರೋಹಣ ಮಾಡಲು ಮುಂದಾಗ ಪೋಲಿಸರು ಅಡ್ಡಿ ಪಡಿಸದಂತೆ ನೋಡಿಕೊಳ್ಳಲು ಮಹಿಳಾ ಸ್ವಯಂ ಸೇವಕಿಯರ ಗುಂಪು ಅವರನ್ನು ಸುತ್ತುವರಿಯಿತು. ನಂತರ ಕೆ.ಸಿ.ರೆಡ್ಡಿಯವರು ಧ್ವಜಾರೋಹಣ ಮಾಡಿದರು. ಶ್ರೀಮತಿ ಟಿ.ಸುನಂದಮ್ಮನವರು ವಂದೇಮಾತರಂ ಗೀತೆಯನ್ನು ಹಾಡುತ್ತಿದ್ದಂತೆ ನೆರೆದಿದ್ದ ಅಪಾರವಾದ ಜನಸ್ತೋಮ ಹರ್ಷದಿಂದ ಕರತಾಡನ ಮಾಡಿತು. ನಂತರ ಪೋಲಿಸರು ಆಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ಮಾಡಿದ್ದಕ್ಕಾಗಿ ಕೆ.ಸಿ.ರೆಡ್ಡಿಯವರನ್ನು ದಸ್ತಗಿರಿ ಮಾಡಿದರು. ದಸ್ತಗಿರಿಯಾದ ಕೆ.ಸಿ.ರೆಡ್ಡಿಯವರು



ತಮ್ಮ ಸ್ಥಾನಕ್ಕೆ ಕೆ.ಟಿ.ಭ್ಯಾಷ್ಯಂ ಅಯ್ಯಂಗಾರ್‌ರನ್ನು ನೇಮಿಸಿದರು. ಎರಡನೇ ದಿನದ ಧ್ವಜಾರೋಹಣ ಕಾರ್ಯಕ್ರಮವು ಯಾವುದೇ ಅಹಿತಕರ ಘಟನೆಗಳು ಜರುಗದಂತೆ ಮುಕ್ತಾಯಗೊಂಡಿತು. ಅಂದು ಮಧ್ಯಾಹ್ನ ಯುವರಾಜರಾದ ಕಂಠೀರವ ನರಸಿಂಹರಾಜ ಒಡೆಯರು ಮೈಸೂರಿನಿಂದ ಬೆಂಗಳೂರಿಗೆ ಹೋಗುವಾಗ ಶಿವಪುರದ ರಸ್ತೆಯಲ್ಲಿ ಕಾರಿನಲ್ಲೇ ಕುಳಿತು ಪ್ರೇಕ್ಷಕನಂತೆ ಸ್ವಲ್ಪ ಸಮಯ ಅಧಿವೇಶನವನ್ನು ವೀಕ್ಷಿಸಿ ಯಾವುದೇ ರೀತಿಯ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸದೆ ತೆರಳಿದರು.

## ವಿದ್ಯಾರ್ಥಿ ಸಮ್ಮೇಳನ:

ಎರಡನೇ ದಿನದ ಧ್ವಜಾರೋಹಣದ ನಂತರ ಬೆಳಿಗ್ಗೆ 'ಯುವಜನ ಸಮ್ಮೇಳನ'ದ ವೇದಿಕೆಯಲ್ಲಿ ಮೈಸೂರು ಸಂಸ್ಥಾನದ ವಿವಿಧ ವಿದ್ಯಾರ್ಥಿ ಪರಿಷತ್ತಿನ ಪ್ರತಿನಿಧಿಗಳು ಭಾಗವಹಿಸಿದ್ದ 'ಮೈಸೂರು ವಿದ್ಯಾರ್ಥಿ ಸಮ್ಮೇಳನ' ಜರುಗಿತು. ಅಧ್ಯಕ್ಷತೆಯನ್ನು ಬೆಂಗಳೂರಿನ ವಕೀಲರಾದ ವಿ.ಕೆ.ಗೋವಿಂದರಾಜುಲು ವಹಿಸಿದ್ದರು. ಈ ಸಮ್ಮೇಳನದಲ್ಲಿ ವಿದ್ಯಾರ್ಥಿಗಳ ಸಮಸ್ಯೆಗಳ ಬಗ್ಗೆ ಚರ್ಚಿಸಲಾಯಿತು. ಅಲ್ಲದೆ ಮೈಸೂರು ವಿದ್ಯಾರ್ಥಿ ಸಮ್ಮೇಳನವನ್ನು ಅಖಿಲ ಭಾರತ ವಿದ್ಯಾರ್ಥಿ ಸಮ್ಮೇಳನಕ್ಕೆ ಸೇರ್ಪಡೆಗೊಳಿಸ ಬೇಕೆಂದು ಅಭಿಪ್ರಾಯ ಪಡಲಾಯಿತು. ೧೯೩೮ರ ಜುಲೈ ತಿಂಗಳ ಕೊನೆಯ ವಾರದಲ್ಲಿ 'ಅಖಿಲ ಮೈಸೂರು ವಿದ್ಯಾರ್ಥಿ ಸಮ್ಮೇಳನದ ಪ್ರಥಮ ಅಧಿವೇಶನವನ್ನು ನಡೆಸಲು ತೀರ್ಮಾನಿಸಲಾಯಿತು. ಈ ಸಮ್ಮೇಳನದ ಅಧ್ಯಕ್ಷತೆಗೆ ಶ್ರೀಮತಿ ಸರೋಜಿನಿ ದೇವಿಯವರನ್ನು ಆಮಂತ್ರಿಸಲು ನಿರ್ಣಯ ಕೈಗೊಳ್ಳಲಾಯಿತು.

ಧ್ವಜಾರೋಹಣ ಮಾಡಿ ದಸ್ತಗಿರಿಯಾಗಿದ್ದ ಮೂವರು ನಾಯಕರನ್ನು ಮಂಡ್ಯ ನಗರದ ಪ್ರಥಮ ಮ್ಯಾಜಿಸ್ಟ್ರೇಟರ ಮುಂದೆ ಹಾಜರು ಪಡಿಸಲಾಯಿತು. ವಿಚಾರಣೆಯ ವೇಳೆ ಬಂಧಿತರು ತಪ್ಪಿತಸ್ಥರೆಂದು ರುಜುವಾತಾಯಿತು. ಪರಿಣಾಮವಾಗಿ ಹೆಚ್.ಸಿ.ದಾಸಪ್ಪನವರಿಗೆ ನಾಲ್ಕು ತಿಂಗಳು ಸಾದಾ ಕೈದಿನ ಶಿಕ್ಷೆ, ೨೦೦ ರೂ ದಂಡ, ವೆಂಕಟಪ್ಪ ಮತ್ತು ಕೆ.ಸಿ.ರೆಡ್ಡಿಯವರಿಗೆ ಮೂರು ತಿಂಗಳು ಸಾದಾ ಕೈದಿಯ ಶಿಕ್ಷೆ ಮತ್ತು ೨೦೦ ರೂ ದಂಡವನ್ನು ವಿಧಿಸಿದರು. ಮೂವರು ದಂಡ ಕೊಡದಿದ್ದರೆ ೨೦ ದಿನಗಳ ಹೆಚ್ಚಿನ ಶಿಕ್ಷೆ ಅನುಭವಿಸುವುದು ಎಂದು ಆಜ್ಞೆ ಮಾಡಿದರು.

## ಎರಡನೇ ದಿನದ ವಿಷಯ ನಿಯಾಮಕ ಸಮಿತಿಯ ಸಭೆ:

ಎರಡನೇ ದಿನದ ವಿಷಯ ನಿಯಾಮಕ ಸಮಿತಿಯ ಸಭೆ ಮಧ್ಯಾಹ್ನ ಎರಡು ಗಂಟೆಗೆ ಜರುಗಿತು. ಕೆ.ಟಿ.ಭಾಷ್ಯಂರವರ ಕೋರಿಕೆಯಂತೆ ಅಧ್ಯಕ್ಷತೆಯನ್ನು ಮೈಸೂರಿನ ಟಿ.ಎಸ್.ರಾಜಗೋಪಾಲ ಅಯ್ಯಂಗಾರ್‌ರವರು ವಹಿಸಿದ್ದರು. (ಕೆ.ಟಿ. ಭಾಷ್ಯಂರವರು ಧ್ವಜ ರಕ್ಷಣೆಯಲ್ಲಿ ಕುಳಿತಿದ್ದುದರಿಂದ) ಸಂಜೆಯ ಬಹಿರಂಗ ಅಧಿವೇಶನದಲ್ಲಿ ಮಂಡಿಸುವುದಕ್ಕಾಗಿ ಅನೇಕ ವಿಷಯಗಳನ್ನು ಚರ್ಚಿಸಿ ನಿರ್ಣಯಗಳನ್ನು ಅಂಗೀಕರಿಸಲಾಯಿತು ಅವುಗಳೆಂದರೆ ೧) ರಾಷ್ಟ್ರೀಯ ಕಾಂಗ್ರೆಸ್‌ನ ತ್ರಿವರ್ಣ ಧ್ವಜವನ್ನೇ ಮೈಸೂರು ಕಾಂಗ್ರೆಸ್‌ನ ಧ್ವಜವನ್ನಾಗಿ ಅಂಗೀಕರಿಸಲಾಯಿತು. ೨) ಎರಡನೇ ರಾಜಕೀಯ ಸುಧಾರಣಾ ಸಮಿತಿಯನ್ನು ಬಹಿಷ್ಕರಿಸುವ ನಿರ್ಣಯ ಕೈಗೊಳ್ಳಲಾಯಿತು.

## ಎರಡನೇ ದಿನದ ಬಹಿರಂಗ ಸಭೆ:

ಸಂಜೆ ೦೬–೩೦ ಗಂಟೆಗೆ ಕೆ.ಟಿ.ಭಾಷ್ಯಂರವರ ನೇತೃತ್ವದಲ್ಲಿ ತ್ರಿವರ್ಣಧ್ವಜವನ್ನು ಕೆಳಗಿಳಿಸದ ನಂತರ ಎರಡನೇ ದಿನದ ಸಾರ್ವಜನಿಕ ಬಹಿರಂಗ ಸಭೆ ಪ್ರಾರಂಭವಾಯಿತು. ಹಿಂದಿನ ದಿನದಂತೆಯೇ ಅಸಂಖ್ಯಾತ ಪ್ರಮಾಣದಲ್ಲಿ ಜನಸ್ತೋಮ ಸೇರಿತ್ತು. ಪ್ರಾರಂಭದಲ್ಲಿ ಎನ್.ವಿಷಕಂಠರಾವ್‌ರವರು ಲಾವಣಿಗಳ ಮೂಲಕ ರಾಷ್ಟ್ರದ ಅನೇಕ ಕಡೆಗಳಲ್ಲಿ ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಸರಕಾರಗಳ ಸಾಧನೆಗಳ ಬಗ್ಗೆ, ರಾಷ್ಟ್ರೀಯ ಕಾಂಗ್ರೆಸ್‌ನ ಮಹತ್ವದ ಬಗ್ಗೆ ಅರಿವು ಮೂಡಿಸಿದರು. ಅಧ್ಯಕ್ಷರಾದ ಕೆ.ಟಿ.ಭಾಷ್ಯಂರವರು, ಸ್ವಾಗತಾಧ್ಯಕ್ಷರಾದ ಹೆಚ್.ಎಸ್.ಚನ್ನಯ್ಯರವರು, ಜಿ.ಒ.ಸಿ.ಪಾರ್ಥನಾರಾಯಣ ಪಂಡಿತರು ಸ್ವಯಂ ಸೇವಕ–ಸೇವಕಿಯರಿಂದ ಗೌರವವನ್ನು ಸ್ವೀಕರಿಸಿ, ವೇದಿಕೆಯನ್ನೇರಿದರು. ಸಭೆಯಲ್ಲಿ ಭಾಗವಹಿಸಿದ್ದ ಅಪಾರ ಸಂಖ್ಯೆಯ ಜನಸ್ತೋಮ ಕರತಾಡನಗಳು ಮತ್ತು ಜಯಘೋಷಗಳ ಮೂಲಕ ನಾಯಕರನ್ನು ವೇದಿಕೆಗೆ ಬರಮಾಡಿ ಕೊಂಡರು. ಸ್ವಯಂ ಸೇವಕ–ಸೇವಕಿಯರು ರಾಷ್ಟ್ರಗೀತೆಯನ್ನು ಹಾಡುವುದರ ಮೂಲಕ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು.

ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಕೆ.ಟಿ.ಭಾಷ್ಯಂರವರು ಅಪಾರ ಸಂಖ್ಯೆಯಲ್ಲಿ ಭಾಗವಹಿಸಿದ್ದ ಜನಸ್ತೋಮ ಯಾವುದೇ ರೀತಿಯ



ಅನಾಹುತಕ್ಕೂ ಅವಕಾಶ ಮಾಡಿಕೊಡದೆ, ಶಾಂತ ರೀತಿಯಿಂದ ನಡೆದು ಕೊಂಡುದಕ್ಕೆ ಕೃತಜ್ಞತೆಯನ್ನು ಅರ್ಪಿಸಿದರು. ತ್ರಿವರ್ಣ ಧ್ವಜದ ಗೌರವವನ್ನು ಕಾಪಾಡುವುದು, ಸರ್ಕಾರದ ದಮನಕಾರಿ ನೀತಿಯನ್ನು ಪ್ರತಿಭಟಿಸುವುದು ಪ್ರತಿಯೊಬ್ಬ ಕಾಂಗ್ರೆಸ್ಸಿಗನ ಕರ್ತವ್ಯ. ಅಗತ್ಯ ಬಿದ್ದರೆ ಸಂಸ್ಥಾನದಲ್ಲಿರುವ ೬೫ ಲಕ್ಷ ಜನರು ಜೈಲಿಗೆ ಹೋಗಲು ಸಿದ್ಧರಾಗಬೇಕು, ಹೇಗೆ ಹರಿಪುರ ಕಾಂಗ್ರೆಸ್ ಅಧಿವೇಶನ ಶಾಂತಿಯುತವಾಗಿ ನಡೆದು ರಾಷ್ಟ್ರಕ್ಕೆ ಮಾದರಿಯಾಗಿದ್ದರೆ, ಶಿವಪುರ ಕಾಂಗ್ರೆಸ್ ಅಧಿವೇಶನ ಶಾಂತಿಯುತವಾಗಿ ನಡೆದು ಮೈಸೂರು ಸಂಸ್ಥಾನಕ್ಕೆ ಮಾದರಿಯಾಗಬೇಕು, ಇದೇ ರೀತಿ ನಾಳೆಯೂ ಧ್ವಜಾರೋಹಣದಲ್ಲಿ ಭಾಗಿಯಾಗಿ ಯಶಸ್ವಿಗೊಳಿಸಿ ಎಂದು ಹೇಳಿ ತಮ್ಮ ಮಾತನ್ನು ಮುಕ್ತಾಯ ಗೊಳಿಸಿದರು.

ಕೆ.ಟಿ.ಭಾಷ್ಯಂರವರು ತಮ್ಮ ಭಾಷಣದ ನಂತರ ಧ್ವಜ ಸತ್ಯಾಗ್ರಹದಲ್ಲಿ ದಸ್ತಗಿರಿಯಾಗಿದ್ದ ಹೆಚ್.ಸಿ.ದಾಸಪ್ಪ, ವಿ.ವೆಂಕಟಪ್ಪ, ಮತ್ತು ಕೆ.ಸಿ.ರೆಡ್ಡಿಯವರು ಕಳುಹಿಸಿ ಕೊಟ್ಟಿದ್ದ ಸಂದೇಶವನ್ನು ಬಹಿರಂಗ ಸಭೆಗೆ ಓದಿ ತಿಳಿಸಿದರು. ಇಂದು ಬೆಳಿಗ್ಗೆ ಧ್ವಜಾರೋಹಣದ ಸಂದರ್ಭದಲ್ಲಿ ಸಾಕ್ಷಿಯಾಗಿದ್ದ ಸಾವಿರಾರು ಜನರು ತೋರಿಸಿದ ಶಿಸ್ತು, ಸಂಯಮಗಳಿಗೆ ನಾವು ಕೃತಜ್ಞರಾಗಿದ್ದವೆ. ಕಾಂಗ್ರೆಸ್ ಗೌರವಿಸುತ್ತಿರುವ ತ್ರಿವರ್ಣ ಧ್ವಜ ರಾಷ್ಟ್ರ ಧ್ವಜವಾಗಿದೆ. ಎಷ್ಟೇ ಕಷ್ಟ, ಅಡ್ಡಿ–ಆತಂಕಗಳು ಬಂದರೂ ಸಹಿಸಿಕೊಂಡು ಅಹಿಂಸಾತ್ಮಕ ಹೋರಾಟದ ಮೂಲಕ ರಾಷ್ಟ್ರ ಧ್ವಜದ ಗೌರವವನ್ನು ಕಾಪಾಡಬೇಕು, ಅಂತಿಮ ಜಯ ನಮ್ಮದೇ, ಶುಭಾಷಯಗಳು.

ಬಹಿರಂಗ ಸಭೆಯ ಪ್ರಮುಖ ಸಂಗತಿ ವಿಷಯ ನಿಯಾಮಕ ಸಮಿತಿಯಲ್ಲಿ ಅಂಗೀಕರಿಸಿದ್ದ ನಿರ್ಣಯಗಳಿಗೆ ಒಪ್ಪಿಗೆ ಸೂಚಿಸಿತು. ಇಂದಿನ ಧ್ವಜಾರೋಹಣದಲ್ಲಿ ಬಂಧಿತರಾದ ನಾಯಕರಿಗೆ ವಂದನೆಗಳನ್ನು ಅರ್ಪಿಸಲಾಯಿತು. ಅಲ್ಲದೆ ಟಿ.ಎನ್.ರಾಜಗೋಪಾಲ ಅಯ್ಯಂಗಾರ್‌ರವರು ಆಫ್ರಿಕಾ ಖಂಡದ ಅನೇಕ ರಾಷ್ಟ್ರಗಳಲ್ಲಿ,(ದಕ್ಷಿಣ ಆಫ್ರಿಕಾ, ಪೂರ್ವ ಆಫ್ರಿಕಾ, ಉಗಂಡಾ, ಫಿಜಿ) ಮಲಯ, ಮಾರಿಷಸ್ ಮೊದಲಾದ ರಾಷ್ಟ್ರಗಳಲ್ಲಿ ಭಾರತೀಯರ ಮೇಲಿನ ದೌರ್ಜನ್ಯವನ್ನು ಖಂಡಿಸಿ ಖಂಡನಾ ನಿರ್ಣಯವನ್ನು ಮಂಡಿಸಿದರು.

## ಪತ್ರಿಕೆಗಳಲ್ಲಿ ಪ್ರತಿಧ್ವನಿ:

ಎರಡನೇ ದಿನದ ಧ್ವಜಾರೋಹಣದಲ್ಲಿ ಪೋಲಿಸರು ಮೂವರು ನಾಯಕರನ್ನು ಬಂಧಿಸಿದ ವಿಷಯವನ್ನು, ರಾಷ್ಟ್ರ ಧ್ವಜದ ರಕ್ಷಣೆಗೆ ಸತ್ಯಾಗ್ರಹಿಗಳು ವಹಿಸಿದ ಶ್ರಮವನ್ನು ಶ್ಲಾಘಿಸಿ ಮಾರನೆ ದಿನದ ಪತ್ರಿಕೆಗಳಲ್ಲಿ ಲೇಖನಗಳು ಪ್ರಕಟವಾದವು. ದಿನಾಂಕ: ೧೩/೦೪/೧೯೩೮ರ ಸಂಯುಕ್ತ ಕರ್ನಾಟಕ ದಿನ ಪತ್ರಿಕೆಯ ಸಂಪಾದಕೀಯದಲ್ಲಿ 'ಮೈಸೂರಿನಲ್ಲಿ ದಬ್ಬಾಳಿಕೆ' ಎಂಬ ಶೀರ್ಷಿಕೆಯಲ್ಲಿ ಪುನ: ಮೈಸೂರು ಸಂಸ್ಥಾನದಲ್ಲಿ ದಬ್ಬಾಳಿಕೆ ಮೈದೋರಿತು, ರಾಷ್ಟ್ರೀಯ ಭಾವನೆಯ ಪ್ರತೀಕವಾಗಿರುವ ತ್ರಿವರ್ಣ ಧ್ವಜವನ್ನು ಹಾರಿಸುವುದು ರಾಜದ್ರೋಹವೆಂಬಂತೆ ಪ್ರತಿಬಿಂಬಿಸಲಾಗುತ್ತಿದೆ. ಇದೇನು ಬೇರೊಂದು ಸ್ವಾತಂತ್ರ್ಯ ರಾಷ್ಟ್ರದ ಧ್ವಜವಲ್ಲ, ಹಿಂದೂ, ಮುಸ್ಲಿಂ ಮತ್ತು ಇತರೆ ಅಲ್ಪಸಂಖ್ಯಾತರನ್ನು ಪ್ರತಿನಿಧಿಸುವ ಧ್ವಜ. ಇಂತಹ ಧ್ವಜಾರೋಹಣಕ್ಕೆ ಅವಕಾಶ ಕೊಟ್ಟರೆ ತಮ್ಮ ರಾಜತ್ವಕ್ಕೆ ಮತ್ತು ರಾಜಮನೆತನದ ಧ್ವಜಕ್ಕೆ ಅಪಮಾನವಾಗುತ್ತದೆ ಎಂಬ ತಪ್ಪು ಕಲ್ಪನೆಯಿಂದ ಮೈಸೂರು ಸರ್ಕಾರ ದಬ್ಬಾಳಿಕೆಯ ಕ್ರಮವನ್ನು ಅನುಸರಿಸುತ್ತಿದೆ ಎಂದು ಅತ್ಯಂತ ಪರಿಣಾಮಕಾರಿಯಾದ ಲೇಖನವನ್ನು ಪ್ರಕಟಿಸಿತು.

## ಮೂರನೇ ದಿನದ ಧ್ವಜಾರೋಹಣ:

೧೯೩೮ರ ಏಪ್ರಿಲ್ ೧೩ ರಂದು ಮೂರನೇ ದಿನದ ಧ್ವಜಾರೋಹಣಕ್ಕಾಗಿ ಎಲ್ಲಾ ಸಿದ್ಧತೆಗಳು ಪೂರ್ಣಗೊಂಡವು.. ಹಿಂದಿನ ದಿನಗಳಂತೆಯೇ ಅಧಿಕ ಸಂಖ್ಯೆಯಲ್ಲಿ ಜನರು ಧ್ವಜ ಮೈದಾನದಲ್ಲಿ ಸೇರಿದ್ದರು. ಅದೇ ರೀತಿ ಶಸ್ತ್ರಸಜ್ಜಿತರಾಗಿ ಪೋಲಿಸ್ ಪಡೆಯು ಸಿದ್ಧರಾಗಿ ನಿಂತಿದ್ದರು. ಧ್ವಜಾರೋಹಣಕ್ಕಾಗಿ ಬೆಳಿಗ್ಗೆ ೦೮ ಗಂಟೆಗೆ ಸರಿಯಾಗಿ ಕೆ.ಟಿ.ಭಾಷ್ಯಂ ಅಯ್ಯಂಗಾರ್ ಅನೇಕ ಮುಖಂಡರು ಮತ್ತು ಸ್ವಯಂ ಸೇವಕರ ಜೊತೆಯಲ್ಲಿ ವೇದಿಕೆಯತ್ತ ಆಗಮಿಸಿದರು. ಜಿ.ಒ.ಸಿ. ಪಾರ್ಥನಾಯಾಯಣ ಪಂಡಿತರು ಕೆ.ಟಿ.ಭಾಷ್ಯಂರವರನ್ನು ಧ್ವಜಾರೋಹಣಕ್ಕೆ ಆಮಂತ್ರಿಸಿದರು. ಕೆ.ಟಿ.ಭಾಷ್ಯಂ ಧ್ವಜಾರೋಹಣಕ್ಕೆ ವೇದಿಕೆಯನ್ನೇರುತ್ತಿದ್ದಂತೆ ಅಲ್ಲೇ ನಿಂತಿದ್ದ ಪೋಲೀಸರು ತಡೆದರು. ಆದರೆ ಕೆ.ಟಿ.ಭಾಷ್ಯಂರವರು ಸರ್ಕಾರದ ಆಜ್ಞೆಯನ್ನು ಉಲ್ಲಂಘಿಸಿ ಧ್ವಜಾರೋಹಣ ನೆರವೇರಿಸುತ್ತೇನೆ ಎಂದು ಉತ್ತರಿಸಿದಾಗ ತಕ್ಷಣ ಅವರನ್ನು ದಸ್ತಗಿರಿ ಮಾಡಲಾಯಿತು. ನಂತರ



ಕೆ.ಟಿ.ಭಾಷ್ಯಂರವರು ತಮ್ಮ ಸ್ಥಾನಕ್ಕೆ ಶಿವಮೊಗ್ಗದ ಎಚ್.ಸಿದ್ದಯ್ಯನವರನ್ನು ನೇಮಿಸಿ ಪೋಲಿಸರಿಗೆ ದಸ್ತಗಿರಿಯಾದರು.

ದಸ್ತಗಿರಿಯಾದಾಗ ಮಾತನಾಡಿದ ಕೆ.ಟಿ.ಭಾಷ್ಯಂರವರು ಕಾಂಗ್ರೆಸ್‌ನ ಈ ತ್ರಿವರ್ಣಧ್ವಜವು ನಮ್ಮೆಲ್ಲರ ಉಸಿರಾಟದ ಪ್ರತಿನಿಧಿ, ಭಾರತೀಯ ಸಂಘಟನೆಯ ಚಿಹ್ನೆ, ತ್ಯಾಗ, ಶಾಂತಿ ಮತ್ತು ಅಹಿಂಸೆಗಳೆಂಬ ಮಾನವೀಯ ಮೌಲ್ಯಗಳ ಸಂಕೇತ, ನಮ್ಮ ಧ್ವಜಾರೋಹಣ ಕಾರ್ಯಕ್ರಮದಿಂದ ಮಹಾರಾಜರ ಸರ್ಕಾರಕ್ಕೆ ಯಾವ ಅಪಮಾನವೂ ಆಗುವುದಿಲ್ಲ. ಇದನ್ನು ಚಿಂತಿಸದ ಸರ್ಕಾರ ಈ ಕಾರ್ಯಕ್ರಮಕ್ಕೆ ಪ್ರತಿಬಂಧಕಾಜ್ಞೆಯನ್ನು ವಿಧಿಸಿರುವುದು ಖಂಡನೀಯ, ಜನತೆಯ ಆಶೋತ್ತರಗಳಿಗೆ ಅನುಗುಣವಾಗಿ ಆಡಳಿತ ವ್ಯವಸ್ಥೆ ಇರಬೇಕು, ಪ್ರಜೆಗಳ ಭಾವನೆಗಳಿಗೆ ಗೌರವ ತರುವ ಕೆಲಸ ಮಾಡಿದ ಕಾಂಗ್ರೆಸ್ ನಾಯಕರನ್ನು ದಸ್ತಗಿರಿ ಮಾಡಿದೆ. ಇದರಿಂದ ಧೃತಿಗೆಡದೆ ಸತ್ಯಾಗ್ರಹಿಗಳು ಶಾಂತಿಯಿಂದ ಗುರಿ ತಲುಪಬೇಕೆಂಬ ದೃಢತೆ ನಿಮ್ಮಲ್ಲಿರಲಿ' ಎಂದು ಆಶಿಸಿ, ಪೋಲಿಸ್ ವ್ಯಾನ್ ಹತ್ತಿದರು.

ಕೆ.ಟಿ.ಭಾಷ್ಯಂರವರ ನಂತರ ಹೆಚ್.ಸಿದ್ದಯ್ಯನವರು ಧ್ವಜಾರೋಹಣ ಮಾಡಲು ಮುಂದಾದಾಗ ಅವರನ್ನು ದಸ್ತಗಿರಿ ಮಾಡಲಾಯಿತು. ಸಿದ್ದಯ್ಯನವರು ತಮ್ಮ ಸ್ಥಾನಕ್ಕೆ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರನ್ನು ನೇಮಕ ಮಾಡಿ ದಸ್ತಗಿರಿಯಾದರು. ಪೋಲಿಸರು ಎಷ್ಟೇ ಅಡ್ಡಿಪಡಿಸಿದರೂ, ದಿಟ್ಟತನದಿಂದ ವೇದಿಕೆಯನ್ನೇರಿದ ಬಳ್ಳಾರಿ ಸಿದ್ದಮ್ಮ ಸರಕಾರದ ಆಜ್ಞೆಯನ್ನು ಉಲ್ಲಂಘಿಸುವುದಾಗಿ ಘೋಷಿಸಿ ಧ್ವಜಾರೋಹಣ ಮಾಡಿ ಧ್ವಜಕ್ಕೆ ವಂದನೆ ಸಲ್ಲಿಸಿದರು. ಅಪಾರ ಸಂಖ್ಯೆಯಲ್ಲಿ ಸೇರಿದ್ದ ಜನಸ್ತೋಮ ಹರ್ಷೋದ್ಗಾರ ಮಾಡುತ್ತ ಜಯಘೋಷ ಕೂಗಲಾರಂಭಿಸಿತು. ಟಿ.ಸುನಂದಮ್ಮನವರು ವಂದೇಮಾತರಂ ಗೀತೆಯನ್ನು ಹಾಡಿದರು. ಹೀಗೆ ಬಳ್ಳಾರಿ ಸಿದ್ದಮ್ಮ ಸ್ತ್ರೀ ಶಕ್ತಿಯ ದ್ಯೋತಕವಾಗಿ ಧ್ವಜಾರೋಹಣ ಕಾರ್ಯವನ್ನು ನೆರವೇರಿಸಿದರು. ಪೊಲೀಸರು ಬಳ್ಳಾರಿ ಸಿದ್ದಮ್ಮನವರನ್ನು ದಸ್ತಗಿರಿ ಮಾಡಿದರು. ಮುಂದಿನ ಕಾರ್ಯಚಟುವಟಿಕೆಗಳ ನೇತೃತ್ವವನ್ನು ಹಾಸನದ ಎಚ್.ಬಿ.ಗುಂಡಪ್ಪನವರಿಗೆ ವಹಿಸಲಾಯಿತು.

**ಧ್ವಜ ಸತ್ಯಾಗ್ರಹಿಗಳಿಗೆ ಶಿಕ್ಷೆ:**

ಧ್ವಜಾರೋಹಣ ಮಾಡಿ ಬಂಧಿತರಾದ ಮೂವರು ಮುಖಂಡರನ್ನು ನ್ಯಾಯಾಲಯಕ್ಕೆ ಕರೆತರಲಾಯಿತು. ಮಂಡ್ಯದ ಪ್ರಥಮ ದರ್ಜೆಯ ಮ್ಯಾಜಿಸ್ಟ್ರೇಟ್‌ರವರಾದ ಎಂ.ರಾಮಸ್ವಾಮಯ್ಯನವರು ವಿಚಾರಣೆ ನಡೆಸಿ ಮೈಸೂರಿನ ಪೋಲಿಸ್ ಆಕ್ಟ್‌ನ ೭೦ (ಎ), ಮತ್ತು ೭೩ನೇ ಸೆಕ್ಷನ್ ಪ್ರಕಾರ ಮೂವರನ್ನು ಅಪರಾಧಿಗಳೆಂದು ಘೋಷಿಸಿ ಶಿಕ್ಷೆ ವಿಧಿಸಿದರು. ಕೆ.ಟಿ.ಭಾಷ್ಯಂ ಮತ್ತು ಹೆಚ್.ದಾಸಪ್ಪರವರಿಗೆ ೪ ತಿಂಗಳ ಶಿಕ್ಷೆ, ದಂಡ ತೆರಲು ತಪ್ಪಿದರೆ ಮತ್ತೆ ೨೦ ದಿನಗಳ ಶಿಕ್ಷೆ ಮತ್ತು ೨೦೦ ರೂಗಳ ದಂಡ, ಬಳ್ಳಾರಿ ಸಿದ್ದಮ್ಮರವರಿಗೆ ೨೫ ದಿನಗಳ ಸದಾ ಶಿಕ್ಷೆ ವಿಧಿಸಲಾಯಿತು. ದಿಟ್ಟ ಮಹಿಳೆ ಬಳ್ಳಾರಿ ಸಿದ್ದಮ್ಮನವರಿಗೆ ಶಿಕ್ಷೆ ವಿಧಿಸುವಾಗ ನ್ಯಾಯಾಧೀಶರು ನೋವಿನಿಂದ ಒಳ್ಳೆಯ ಉದ್ದೇಶಕ್ಕಾಗಿ ಹೋರಾಡುತ್ತಿರುವ ಹೆಂಗಸಿಗೆ ಜೈಲು ಶಿಕ್ಷೆ ವಿಧಿಸಬೇಕಲ್ಲ ಎಂದರಂತೆ.

ಸಂಜೆ ತಿರುಮಲೇಗೌಡರ ಮನೆಯಲ್ಲಿ ಗುಂಡಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ ಕಾಂಗ್ರೆಸ್ ಮುಖಂಡರು ಶಿವಪುರದಲ್ಲಿ ನಿಷೇಧಾಜ್ಞೆ ಇರುವ ದಿನಗಳವರೆಗೆ ಒಂದು ತಿಂಗಳುಗಳ ಕಾಲ ಧ್ವಜ ಸತ್ಯಾಗ್ರಹವನ್ನು ಆಚರಿಸಬೇಕೆಂಬ ನಿರ್ಣಯವನ್ನು ಕೈಗೊಂಡರು. ಇದರ ಜವಾಬ್ದಾರಿಯನ್ನು ತಗಡೂರು ರಾಮಚಂದ್ರರಾಯರಿಗೆ ವಹಿಸಲಾಯಿತು. ಮೈಸೂರು ಸಂಸ್ಥಾನದ ಬೇರೆ ಬೇರೆ ಕಡೆಗಳಿಂದ ಬಂದ ಪ್ರತಿನಿಧಿಗಳಿಗೆ ತಮ್ಮ ಊರುಗಳಿಗೆ ತೆರಳಿ, ತಮ್ಮ ತಮ್ಮ ಊರಿನಲ್ಲೇ ಒಂದು ತಿಂಗಳ ಕಾಲ ತ್ರಿವರ್ಣ ಧ್ವಜವನ್ನು ಹಾರಿಸುವುದರ ಮೂಲಕ ಸತ್ಯಾಗ್ರಹ ಮಾಡಲು ಠರಾವಾಯಿತು.

ಹೀಗೆ ೧೯೩೮ರ ಏಪ್ರಿಲ್ ೧೧ ರ ಸಂಜೆ ಮೂರು ದಿನಗಳ ಧ್ವಜ ಸತ್ಯಾಗ್ರಹವು ಕೊನೆ ಗೊಂಡಿತು. ಪೋಲಿಸರು ಧ್ವಜ ವೇದಿಕೆಯನ್ನು ನಾಶ ಮಾಡದಂತೆ ಮೂರು ದಿನಗಳ ಕಾಲ, ಸತ್ಯಾಗ್ರಹಿಗಳು ಸರದಿಯ ಮೇಲೆ ಕಾದು ತಮ್ಮ ಉಜ್ವಲ ರಾಷ್ಟ್ರಾಭಿಮಾನವನ್ನು ಮೆರೆದರು.

ಮಾರನೇ ದಿನ ಶ್ರೀಗುಂಡಪ್ಪನವರು ಧ್ವಜಾರೋಹಣ ಮಾಡಿ ಪ್ರತಿಬಂಧಕಾಜ್ಞೆಯನ್ನು ಮುರಿದರು, ಪೊಲೀಸರು ಅವರನ್ನು ದಸ್ತಗಿರಿ ಮಾಡಲಿಲ್ಲ. ಮಾರನೆ ದಿನ ಭೂಪಾಲಂನ ಪುಟ್ಟನಂಜಪ್ಪನವರು ಪ್ರತಿಬಂಧಕಾಜ್ಞೆಯನ್ನು ಮುರಿದು ಧ್ವಜಾರೋಹಣ ಮಾಡಿದರು. ಪುಟ್ಟನಂಜಪ್ಪ ಸೇರಿದಂತೆ



ಕೆ.ಹನುಮಂತಯ್ಯ, ಶಿವಪುರದ ದೊಳ್ಳಯ್ಯ, ಲಿಂಗಯ್ಯ ಮೊದಲಾದವರು ಪ್ರತಿಬಂಧಕಾಜ್ಞೆ ಮುರಿದಿದ್ದರಿಂದ ದಸ್ತಗಿರಿ ಮಾಡಲಾಯಿತು.

೧೯೩೮ರ ಏಪ್ರಿಲ್ ೧೩ ರಂದು ತಿರುಮಲೆಗೌಡರ ಪಾಳು ಜಾಗದಲ್ಲಿ ರಾತ್ರಿಯ ವೇಳೆ ಸಭೆ ಸೇರಿದ್ದ ಸತ್ಯಾಗ್ರಹಿಗಳು ಒಂದು ಗುಡಿಸಲನ್ನು ನಿರ್ಮಿಸಿ, ಗುಡಿಸಲ ಮೇಲೆ ಧ್ವಜ ವೇದಿಕೆಗೆ ಎದುರಾಗಿ ಆಳೆತ್ತರದ ಮಹಾತ್ಮ ಗಾಂಧಿಯವರ ಭಾವಚಿತ್ರವನ್ನು ಇಟ್ಟು 'ಸತ್ಯಾಗ್ರಹಾಶ್ರಮ ಶಿವಪುರ' ಎಂದು ಖಾದಿ ಬಟ್ಟೆಯಲ್ಲಿ ಬರೆದು ಬೋರ್ಡ್‌ನ್ನು ಹಾಕಲಾಯಿತು ಒಂದೇ ರಾತ್ರಿಯಲ್ಲಿ ಸತ್ಯಾಗ್ರಹಶ್ರಮ ಸಿದ್ಧವಾಯಿತು. ಇದೇ ಇಂದು ಭವ್ಯವಾಗಿ ನಿರ್ಮಾಣಗೊಂಡಿರುವ 'ಶಿವಪುರ ಧ್ವಜ ಸತ್ಯಾಗ್ರಹ ಸೌಧ.'

ಶಿವಪುರದಲ್ಲಿ ಸ್ಥಾಪಿತವಾದ ಧ್ವಜ ಸತ್ಯಾಗ್ರಹಾಶ್ರಮದ ಮೂಲಕ ಒಂದು ತಿಂಗಳ ಕಾಲ ನಿರಂತರವಾಗಿ ಜರುಗಿದ ಧ್ವಜ ಸತ್ಯಾಗ್ರಹ ಚಳುವಳಿ ೧೯೩೮ರ ಮೇ ೧೯ರ ಸಂಜೆ ಹಾಸನದ ಎಚ್.ಬಿ. ಗುಂಡಪ್ಪನವರು ತ್ರಿವರ್ಣ ಧ್ವಜವನ್ನು ಗೌರವದಿಂದ ಇಳಿಸುವುದರ ಮೂಲಕ ಒಂದು ತಿಂಗಳುಗಳ ಕಾಲ ನಡೆದ ಧ್ವಜ ಸತ್ಯಾಗ್ರಹ ಚಳವಳಿ ಕೊನೆ ಗೊಂಡಿತು.

ಶಿವಪುರ ಧ್ವಜ ಸತ್ಯಾಗ್ರಹದ ಯಶಸ್ಸಿನಿಂದ ಸ್ಫೂರ್ತಿಯನ್ನು ಪಡೆದ ಕಾಂಗ್ರೆಸ್ ಧುರೀಣರು ಮೈಸೂರು ಸಂಸ್ಥಾನದ ಬೇರೆ ಬೇರೆ ಸ್ಥಳಗಳಲ್ಲಿಯೂ ಇದೇ ರೀತಿ ಧ್ವಜ ಸತ್ಯಾಗ್ರಹವನ್ನು ನಡೆಸಲು ನಿರ್ಧರಿಸಿದರು. ಈ ಹಿನ್ನೆಲೆಯಲ್ಲಿ ಕಾಂಗ್ರೆಸ್ ಎರಡನೇ ಅಧಿವೇಶನ ವಿಧುರಾಶ್ವಥದಲ್ಲಿ ನಡೆದ ಧ್ವಜ ಸತ್ಯಾಗ್ರಹ ದುರಂತಕ್ಕೆ ಕಾರಣವಾಯಿತು. ಪೋಲಿಸರ ಗೋಲಿಬಾರ್‌ಗೆ ಮುವತ್ತೈದು ಮಂದಿ ಮಡಿದರು (ಸರಕಾರದ ಪ್ರಕಟನೆಯಂತೆ ಹತ್ತು ಮಂದಿ).

ಶಿವಪುರ ಧ್ವಜ ಸತ್ಯಾಗ್ರಹದ ಬಗ್ಗೆ ಶಿವಪುರ ಧ್ವಜಸತ್ಯಾಗ್ರಹದ ಯಶಸ್ಸನ್ನು ಮೈಸೂರು ಕಾಂಗ್ರೆಸ್‌ನ ಸಾಮರ್ಥ್ಯವನ್ನು ಶ್ಲಾಘಿಸುತ್ತ ಧಾರವಾಡದಿಂದ ಮುದವೀಡು ಕೃಷ್ಣರಾಯರು ಬರೆದ ಪತ್ರದ ಸಾರಾಂಶವೆಂದರೆ. 'ನಮ್ಮ ಪ್ರಾಣ ಪದಕವಾಗಿರುವ ರಾಷ್ಟ್ರಧ್ವಜದ ಸನ್ಮಾನ ಮತ್ತು ರಕ್ಷಣೆಗಾಗಿ ನೀವು ಕೈಗೊಂಡಿರುವ ಶಾಂತಿಯುತವಾದ ಸಂಗ್ರಾಮದಲ್ಲಿ ಇಡೀ ರಾಷ್ಟ್ರವೇ ನಿಮಗೆ ಬೆಂಬಲವಾಗಿ ನಿಲ್ಲದಿರುವುದೇ, ಮೈಸೂರಿನವರು ಇಂದಿನವರೆಗೆ ಅಖಂಡ ಕರ್ನಾಟಕದ

ಕೀರ್ತಿಯನ್ನು ರಾಷ್ಟ್ರ ಸೇವಾ ಕಾರ್ಯದಲ್ಲಿ ಬೆಳಗಿಸುತ್ತಾ ಬಂದಿರುವುದು ಕನ್ನಡ ನಾಡಿನ ಬೇರೆ ಭಾಗದ ಜನತೆ ಎಂದಿಗೂ ಮರೆಯಲಾರರು'

**ಸತ್ಯಾಗ್ರಹ ಸೌಧ:**

ಕೆಂಗಲ್ ಹನುಮಂತಯ್ಯನವರು ನೇತೃತ್ವದಲ್ಲಿ ಇಂತಹ ಮಹತ್ವದ ಹೋರಾಟ ನಡೆದ ಸ್ಥಳದಲ್ಲಿ ಸ್ಮಾರಕ ಭವನ ನಿರ್ಮಿಸುವ ತೀರ್ಮಾನವನ್ನು ಕೈಗೊಳ್ಳಲಾಯಿತು. ಅವರ ನಾಯಕತ್ವದಲ್ಲಿ ಸ್ಮಾರಕ ಭವನದ ರೂಪರೇಷೆಯ ಕಲ್ಪನೆಯು ಪ್ರಥಮ ಬಾರಿಗೆ ಮೂಡಿತು. ಈ ಕಟ್ಟಡದ ನಕಾಶೆಯನ್ನು ಇಂಡೋ–ಸ್ವಿಸ್ ಕಾರ್ಪೋರೇಷನ್ ಸಂಸ್ಥೆಯ ಎಂಜಿನಿಯರುಗಳಾಗಿದ್ದ ಲಕ್ಷ್ಮಣ್ ಮತ್ತು ಪವಾರ್‌ರವರಿಗೆ ಕೆಂಗಲ್ ಹನುಮಂತಯ್ಯನವರು ವಹಿಸಿಕೊಟ್ಟಾಗ ಅವರುಗಳು ಅದನ್ನು ರೂಪಿಸುವ ಕಾರ್ಯದಲ್ಲಿ ಯಶಸ್ವಿಯಾದರು. ಈ ಕಟ್ಟಡ ನಿರ್ಮಾಣದ ಬಗ್ಗೆ ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿದಾಗ ಅಂದಿನ ಲೋಕೋಪಯೋಗಿ ಸಚಿವರಾಗಿದ್ದ ಎಚ್.ಎಮ್.ಚನ್ನಬಸಪ್ಪನವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಸರ್ಕಾರದ ಲೋಕೋಪಯೋಗಿ ಇಲಾಖೆಯವರೇ ಈ ಕಟ್ಟಡವನ್ನು ನಿರ್ಮಿಸಬೇಕೆಂದು ಆಜ್ಞೆ ಹೊರಡಿಸಿದರು. ಕೆಂಗಲ್ ಹನುಮಂತಯ್ಯನವರು ಕಟ್ಟಡದ ನಿರ್ಮಾಣದ ಪ್ರತಿ ಹಂತದಲ್ಲೂ ಉಸ್ತುವಾರಿ ವಹಿಸಿ ಎಚ್ಚರ ವಹಿಸಿದರು. ಈ ಕಟ್ಟಡಕ್ಕೆ 'ಸತ್ಯಾಗ್ರಹ ಸೌಧ'ವೆಂದು ಅರ್ಥಪೂರ್ಣವಾಗಿ ಕರೆಯಲಾಗಿದೆ. ಈ ಕಲಾತ್ಮಕ ಸೌಧವನ್ನು ೧೯೭೯ರ ಅಕ್ಟೋಬರ್ ೨೬ರಂದು ಕೆಂಗಲ್ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ಉದ್ಘಾಟಿಸಲಾಯಿತು. ಮಂಡ್ಯ ಜಿಲ್ಲೆಯಲ್ಲಿನ ಸ್ವಾತಂತ್ರ್ಯ ಹೋರಾಟದ ಪ್ರತೀಕವಾಗಿ ಶಿವಪುರದ ಧ್ವಜಸತ್ಯಾಗ್ರಹ ಸೌಧ ಒಂದು ಸ್ಮಾರಕ ಭವನವಾಗಿ ಜೀವಂತ ಸಾಕ್ಷಿಯಾಗಿ ಇಂದಿಗೂ ಕಂಗೊಳಿಸುವುದರ ಮೂಲಕ ಸ್ವಾತಂತ್ರ್ಯ ಹೋರಾಟ ಕಾಲದ ಧ್ವಜ ಸತ್ಯಾಗ್ರಹವನ್ನು ಚಿರಸ್ಮರಣಿ ಗೊಳಿಸಲಾಗಿದೆ.

**ಉಪಸಂಹಾರ:**

ಮೈಸೂರು ಸಂಸ್ಥಾನದಲ್ಲಿ ಜರುಗಿದ ಶಿವಪುರ ಧ್ವಜ ಸತ್ಯಾಗ್ರಹದಿಂದಾಗಿ ಚಳವಳಿಗಾರರ ಹೋರಾಟಕ್ಕೆ ಗೆಲುವು ದೊರೆಯಿತು. ಸರ್ಕಾರದ ದಮನಕಾರಿ ನೀತಿಗೆ ಸೋಲಾಯಿತು. ಜನತೆಯಲ್ಲಿ ರಾಜಕೀಯ ಮತ್ತು ಸಾಮಾಜಿಕ ವಿಚಾರಧಾರೆಯನ್ನು ಬೆಳೆಸಿತು, ಒಗ್ಗಟ್ಟಿನಲ್ಲಿ ಬಲವಿದೆ, ಗೆಲುವಿದೆ ಎಂಬುದನ್ನು ತೋರಿಸಿತು. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರಲ್ಲಿ ಜಾಗೃತಿ ಬೆಳೆಯುವುದಕ್ಕೆ ನೆರವಾಯಿತು. ಜಾತಿಭೇದವಿಲ್ಲದೆ ಎಲ್ಲಾ ವರ್ಗದ ಜನತೆ ಭಾಗವಹಿಸಿದ್ದು ಪ್ರಮುಖ ಸಂಗತಿಯಾಗಿದೆ. ಅನಾಮಧೇಯರಾಗಿದ್ದ ಎಷ್ಟೋ ಜನ ಇಲ್ಲಿಂದ ಮುಂದೆ ಜನನಾಯಕರಾಗಿ ಹೊರಹೊಮ್ಮಿದರು. ಗಾಂಧೀಯವರ ಮಾರ್ಗದರ್ಶನದಂತೆ ಅತ್ಯಂತ ಶಾಂತಿಯಿಂದ ಸತ್ಯಾಗ್ರಹ ನಡೆಸಿ, ನೆರೆದ ಜನರನ್ನು ಶಿಸ್ತಿನಿಂದ ಹಿಡಿದಿಟ್ಟ ಶಿವಪುರ ಕಾಂಗ್ರೆಸ್ ಅಧಿವೇಶನದ ನಾಯಕರ ಬಗ್ಗೆ ಎಲ್ಲೆಡೆಯಿಂದ ಪ್ರಶಂಸೆಗಳು ಹರಿದು ಬಂದವು. ಮೈಸೂರು ಸಂಸ್ಥಾನದಲ್ಲಿ ಜರುಗಿದ ಶಿವಪುರ ಧ್ವಜಸತ್ಯಾಗ್ರಹ ಅಖಿಲ ಭಾರತ ಮಟ್ಟದಲ್ಲಿ ಜರುಗಿದ ನಾಗಪುರ ಧ್ವಜಸತ್ಯಾಗ್ರಹದಷ್ಟೇ ಪ್ರಸಿದ್ದವಾಯಿತು. ಇದರಿಂದ ಸ್ಫೂರ್ತಿ ಪಡೆದ ಅನೇಕ ದೇಶಿಯ ಸಂಸ್ಥಾನಗಳ ಸತ್ಯಾಗ್ರಹಿಗಳು ತಮ್ಮ ಸಂಸ್ಥಾನಗಳಲ್ಲೂ ಜವಬ್ದಾರಿ ಸರ್ಕಾರಕ್ಕಾಗಿ ಹೋರಾಡಲು ಪ್ರಾರಂಭಿಸಿದರು.

ಜಗತ್ತಿನ ಎಲ್ಲಾ ಸಮಸ್ಯೆಗಳಿಗೆ ಮತ್ತು ಹೋರಾಟಗಳಿಗೆ ಹೊಡೆದಾಡ–ಬಡಿದಾಟ, ಸಂಘರ್ಷ–ಯುದ್ಧ, ಹಿಂಸೆ–ರಕ್ತಪಾತವೇ ಮದ್ದು ಎನ್ನುತ್ತಿದ್ದ ಮಾನವ ಸಮುದಾಯಕ್ಕೆ ಅದಕ್ಕಿಂತಲೂ ಭಿನ್ನವಾದ ಅಂದರೆ ಮಾನವೀಯತೆಯಿಂದ ಕೂಡಿದ ಹೋರಾಟದ ಮಾರ್ಗವಿದೆಯೆಂದು ಜಗತ್ತಿನ ಮಾನವ ಸಮುದಾಯಕ್ಕೆ ತೋರಿಸಿಕೊಟ್ಟ ಮಹಾ ಪುರುಷ, ಗಾಂಧಿಯವರ ಅಹಿಂಸಾ ಮಾರ್ಗವನ್ನು ಅನುಸರಿಸಿದ ಶ್ರೇಯಸ್ಸು ಶಿವಪುರ ಅಧಿವೇಶನಕ್ಕೆ ಸಲ್ಲುತ್ತದೆ.

ಪ್ರತಿ ದಿನ ಸಹಸ್ರಾರು ಸಂಖ್ಯೆಯಲ್ಲಿ ಪ್ರಯಾಣಿಕರು ಬೆಂಗಳೂರಿನಿಂದ ಮೈಸೂರಿಗೆ ಮತ್ತು ಮೈಸೂರಿನಿಂದ ಬೆಂಗಳೂರಿಗೆ ಪ್ರಯಾಣಿಸುವಾಗ ಮದ್ದೂರಿನ ಬಳಿಯ ಶಿವಪುರದಲ್ಲಿರುವ ಸತ್ಯಾಗ್ರಹ ಸೌಧವನ್ನು ಹಾದು ಹೋಗುತ್ತಿದ್ದರೂ ಸ್ವಾತಂತ್ರ್ಯ ಹೋರಾಟದ ಹೆಗ್ಗುರುತಾಗಿ ಶಿವಪುರ ಗ್ರಾಮವು ನಿರ್ವಹಿಸದ ಪಾತ್ರದ ಬಗ್ಗೆ ಅನೇಕರಿಗೆ ತಿಳಿಯದಿರುವುದು ಅತ್ಯಂತ ಶೋಚನೀಯ ಸಂಗತಿಯಾಗಿದೆ.

ಶಿವಪುರ ಧ್ವಜ ಸತ್ಯಾಗ್ರಹ ಅಥವಾ ಕಾಂಗ್ರೆಸ್ ಅಧಿವೇಶನ (ರಾಷ್ಟ್ರಕೂಟ) ಪುಸ್ತಕದ ಆಧಾರ ಗ್ರಂಥಗಳು.

## ಆಧಾರ ಗ್ರಂಥಗಳು


೧) ಸೂರ್ಯನಾಥ ಕಾಮತ್ (ಸಂ) 'ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು,' ಸಂಪುಟಗಳು.

೨) ಪಾರ್ಥಸಾರಥಿ ಟಿ.ಎ. (ಮು.ಸಂ), ೨೦೦೩, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಮಂಡ್ಯ ಜಿಲ್ಲೆ (ಪ.ಆ), ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ. ಬೆಂಗಳೂರು.

೨) ಲಿಂಗಯ್ಯ. ಡಿ, (೧೯೯೫), ಶಿವಪುರ ಧ್ವಜ ಸತ್ಯಾಗ್ರಹ, ವೈಶಾಖ ಪ್ರಕಾಶನ, ಬೆಂಗಳೂರು.

೩) ಎಚ್.ಕೆ.ವೀರಣ್ಣಗೌಡ, 'ಬದುಕ–ಮೆಲಕು' ಮೈಸೂರು. ೧೯೭೪.

೪) ವೀರತಪ್ಪ, ಕೆ. ಮೈಸೂರು ಸಂಸ್ಥಾನದ ಸ್ವಾತಂತ್ರ್ಯ ಚಳುವಳಿ, ೧೯೭೭.

೫) ಕರ್ನಾಟಕ ರಾಜ್ಯ ಪತ್ರಾಗಾರದಲ್ಲಿನ ಸರಕಾರದ ಗುಪ್ತವರದಿ ಸಂ. ೪೦–೪೨ ರಿಂದ ೧೪೭,

೧೯೪೨, ೪೩ರ ಇಂಗ್ಲಿಷ್ ಕಡತಗಳು, ಜಿಲ್ಲಾಧಿಕಾರಿ ಮುಖ್ಯ ಕಾರ್ಯದರ್ಶಿಗೆ ಸಲ್ಲಿಸಿದ ವರದಿಗಳು.

೬) ಚಿನ್ನಸ್ವಾಮಿ ಸೋಸಲೆ, ಮಿರ್ಜಾ ಇಸ್ಮಾಯಿಲ್, ಹಂಪಿ ಪ್ರಕಾಶನ,

೭) ರಾಜೇಗೌಡ, ಹ.ಕ., (ಸಂ), ೧೯೮೮, ಸಿಂಗಾರ, ಕೆ.ಸಿಂಗಾರಿಗೌಡ ಅಭಿನಂದನಾ ಗ್ರಂಥ, ಮಂಡ್ಯ,

೮) ರಾಜೇಗೌಡ, ಹ.ಕ. ಮತ್ತು ಬಿ.ಜಯಪ್ರಕಾಶ್ ಗೌಡ (ಸಂ), ೧೯೮೯. 'ಸಾಹಸ ಯಾತ್ರೆ' (ಶ್ರೀ ಎ.ಎಸ್, ಜವರಪ್ಪಗೌಡ ಅಬಿನಂದನ ಗ್ರಂಥ)ಮಂಡ್ಯ.


೯) ದೇ.ಜ.ಗೌ, (ಮೂ.ಸಂ), ಜಯಪ್ರಕಾಶಗೌಡ ಮತ್ತು ವ.ನಂ.ಶಿವರಾಮು, (ಪ.ಆ.ಸಂ), ೨೦೦೬, ಸುವರ್ಣ ಮಂಡ್ಯ, ಮಂಡ್ಯ ಜಿಲ್ಲಾ ಸಾಹಿತ್ಯ ಪರಿಷತ್ತು. ಮಂಡ್ಯ.


❑

# ಅನುಬಂಧ

## ಛಾಯಾಚಿತ್ರಗಳು

೧. ಧ್ವಜಾರೋಹಣ ಸಿದ್ಧತೆಯಲ್ಲಿ ಸ್ವಯಂ ಸೇವಕ–ಸೇವಕಿಯರು.



೨. ನಾಯಕರಿಂದ ಧ್ವಜ ವೇದಿಕೆ ಸಿದ್ಧತೆಯ ಪರಿಶೀಲನೆ.





೩. ಧ್ವಜಾರೋಹಣಕ್ಕೆ ಸಿದ್ಧವಾಗಿರುವ ರಾಷ್ಟ್ರಧ್ವಜ




೪. ಧ್ವಜ ರಕ್ಷಣೆಗೆ ಸಂಬಂಧಿಸಿದಂತೆ ನಾಯಕರ ಭಾಷಣ.





೫. ಧ್ವಜ ರಕ್ಷಣೆಯಲ್ಲಿ ಸತ್ಯಾಗ್ರಹಿಗಳು.




೬. ಧ್ವಜ ವೇದಿಕೆಯ ಮೇಲೆ ಯಶೋಧಮ್ಮ ದಾಸಪ್ಪ ಮತ್ತು ಟಿ. ಸಿದ್ದಲಿಂಗಯ್ಯ





೭. ಸತ್ಯಾಗ್ರಹಿಗಳು ಮತ್ತು ಪೋಲಿಸರ ಇರುವ ದೃಶ್ಯ.




೮. ಟಿ. ಸಿದ್ದಲಿಂಗಯ್ಯನವರೊಡನೆ ಪೋಲಿಸರ ನಡುವೆ ಸಂಭಾಷಣೆ.





೯. ಧ್ವಜದ ವೇದಿಕೆಯಲ್ಲಿ ಸತ್ಯಾಗ್ರಹಿಗಳು ಮತ್ತು ಪೋಲಿಸರು.



೧೦. ಧ್ವಜಾರೋಹಣ ಮಾಡಿ ದಸ್ತಗಿರಿಯಾದ ನಾಯಕರಾದ ಕೆ.ಸಿ.ರೆಡ್ಡಿ, ಎಚ್.ಸಿ.ದಾಸಪ್ಪ, ಮತ್ತು ವಿ.ವೆಂಕಟಪ್ಪರವರು ಪೋಲೀಸ್ ವ್ಯಾನ್ ಹತ್ತುವ ಮೊದಲು






೧೧. ಶಿವಪುರ ಅಧಿವೇಶನದಲ್ಲಿ ಭಾಗವಹಿಸಿದ್ದ ಸ್ವಯಂ ಸೇವಕಿಯರು.



೧೨. ಸತ್ಯಾಗ್ರಹಿಗಳನ್ನು ಬೆಂಗಳೂರು ಸೆಂಟ್ರಲ್ ಜೈಲಿನಲ್ಲಿ ಬಿಡುಗಡೆ ಮಾಡಿದಾಗ.



೧೩. ಶಿವಪರು ಅಧಿವೇಶನದ ವಸತಿ ಟಿಕೆಟ್







೧೪. ಶಿವಪುರ ಧ್ವಜಸತ್ಯಾಗ್ರಹದ ಸ್ವಾಗತ ಸಮಿತಿ ಸದಸ್ಯರ ಬ್ಯಾಡ್ಜ್.



**೧೫. ಶಿವಪುರ ರಾಷ್ಟ್ರಕೂಟದ ಪ್ರಶಸ್ತಿ ಪತ್ರ.**



ವಂದೇ ಮಾತರಂ

ಮೈಸೂರು ಕಾಂಗ್ರೆಸ್ ಮಹಾಧಿವೇಶನ

ಶಿವಪುರ

ನೀವು ಮೈಸೂರು ಕಾಂಗ್ರೆಸ್ಸಿನ ಧ್ಯೇಯವನ್ನನುಸರಿಸಿ ಶಾಂತಿ ಮತ್ತು ಶಿಸ್ತುಗಳಿಂದ ಸ್ವಯಂ ಸೇವಕರಾಗಿ ಅಮೂಲ್ಯ ಸೇವೆಯನ್ನು ಸಲ್ಲಿಸಿದ್ದೀರಿ. ಅದಕ್ಕಾಗಿ ನಿಮ್ಮನ್ನು ನಾವು ಅಭಿನಂದಿಸುತ್ತೇವೆ. ನಿಮ್ಮಿಂದ ಉತ್ತರೋತ್ತರ ಇನ್ನೂ ಹೆಚ್ಚಿನ ರಾಷ್ಟ್ರಸೇವೆ ಲಭಿಸಲೆಂದು ಹಾರೈಸುತ್ತೇವೆ.



**೧೬. ಧ್ವಜಾರೋಹಣ ಮಾಡಿದ ಬಳ್ಳಾರಿ ಸಿದ್ದಮ್ಮ.**



**೧೭. ಪಾಲಹಳ್ಳೀ ಸೀತಾರಾಮಯ್ಯ.**



**೧೮. ಸ್ವಾಗತ ಸಮಿತಿಯ ಅಧ್ಯಕ್ಷರಾದ ಸಾಹುಕಾರ್ ಚನ್ನಯ್ಯ.**



**೧೯. ಸ್ವಾಗತ ಸಮಿತಿಯ ಕಾರ್ಯದರ್ಶಿ**



## ಶಿವಪುರ ಧ್ವಜ ಸತ್ಯಾಗ್ರಹ ಅಥವಾ ಕಾಂಗ್ರೆಸ್ ಅಧಿವೇಶನ (ರಾಷ್ಟ್ರಕೂಟ)ದ ಚಿತ್ರಗಳು

೨೦. ಸತ್ಯಾಗ್ರಹ ಸೌಧ– ಶಿವಪುರ



### ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
### ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಹೆಚ್. ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳೆಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |

| | | | |
|---|---|---|---|
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |



| | | | |
|---|---|---|---|
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |

| | | | |
|---|---|---|---|
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |